ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಅಕ್ಟೋಬರ್ 2 ಭಾನುವಾರ 2022

₹4

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 167 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com







ಡಿಎವಿ ಪಬ್ಲಿಕ್ ಶಾಲೆಯಲ್ಲಿ ದಸರಾ ಬೊಂಬೆ ಪ್ರದರ್ಶನ



ಮೈಸೂರು, ಅ. 1– ಮೈಸೂರಿನ ಡಿಎವಿ ಪಬ್ಲಿಕ್ ಸ್ಕೂಲ್‌ನ ಆವರಣದಲ್ಲಿ 13ನೇ ದಸರಾ ಬೊಂಬೆ ಪ್ರದರ್ಶನವನ್ನು ಏರ್ಪಡಿಸಲಾಗಿದ್ದು, ಸೆ. 24ರಂದು ಉಪ ಮೇಯರ್ ಡಾ. ಜಿ. ರೂಪಾ ಉದ್ಘಾಟಿಸಿದರು. ಈ ಪ್ರದರ್ಶನವನ್ನು ಅ. 7ರವರೆಗೆ ಬೆಳಗ್ಗೆ 10ರಿಂದ ಮಧ್ಯಾಹ್ನ 3 ಗಂಟೆವರೆಗೆ ಸಾರ್ವಜನಿಕರು ವೀಕ್ಷಿಸಲು ಅವಕಾಶವಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಡಾ. ರೂಪಾ, ತಲಕಾಡು ಪಂಚಲಿಂಗೇಶ್ವರ ದೇವಸ್ಥಾನ ಮತ್ತು ಶಬರಿಮಲೆ ಅಯ್ಯಪ್ಪ ಸ್ವಾಮಿ ದೇವಸ್ಥಾನವನ್ನು ಬಿಂಬಿಸುವ ಬೊಂಬೆ ಪ್ರದರ್ಶನದ ಬಗ್ಗೆ ಅತೀವ ಮೆಚ್ಚುಗೆ ವ್ಯಕ್ತಪಡಿಸಿದರು.

ಸಿಇಓ ಜಯಶ್ರೀ ಎಸ್. ಮೂರ್ತಿಯವರ ಮಾರ್ಗದರ್ಶನದಲ್ಲಿ ನಾನಾ ಸ್ಥಳಗಳಿಂದ ಸಂಗ್ರಹಿಸಿದ ವಿವಿಧ ಗೊಂಬೆಗಳೊಂದಿಗೆ ಸ್ತಬ್ಧಚಿತ್ರ ಒಳಗೊಂಡ ಜಂಬೂ ಸವಾರಿ, ಭಾರತದ ರಾಷ್ಟ್ರಪತಿ, ಕರ್ನಾಟಕ ರತ್ನ ಡಾ. ಪುನೀತ್ ರಾಜ್‌ಕುಮಾರ್, ಪ್ರಧಾನಮಂತ್ರಿ ನರೇಂದ್ರ ಮೋದಿಯೊಂದಿಗೆ ಅಂತರರಾಷ್ಟ್ರೀಯ ಯೋಗ ದಿನಾಚರಣೆ, ಹೀಗೆ ನಾನಾ ಸನ್ನಿವೇಶಗಳ ಬೊಂಬೆಗಳನ್ನು ಸಂಗ್ರಹಿಸಲಾಗಿದೆ. ಶಾಲಾ ಅಧ್ಯಕ್ಷ ಎನ್. ಸಚ್ಚಿದಾನಂದಮೂರ್ತಿ, ಕಾರ್ಯದರ್ಶಿ ಆರ್. ಆನಂದ್, ಸಿಇಓ ಜಯಶ್ರೀ ಎಸ್. ಮೂರ್ತಿ, ಪ್ರಿನ್ಸಿಪಾಲ್ ಕೆ.ಆರ್. ಶೋಭಾ, ಉಪ ಪ್ರಿನ್ಸಿಪಾಲ್ ಎಂ.ಎಸ್. ಮಂಗಳಾ, ಮುಖ್ಯೋಪಾಧ್ಯಾಯಿನಿ ಆರ್. ನಿರ್ಮಲಾ ಮತ್ತು ಸಿಬ್ಬಂದಿ ಈ ವೇಳೆ ಉಪಸ್ಥಿತರಿದ್ದರು.


ನಿಧನ

ಕೆ.ಜಯರಾಮು



ಮೈಸೂರು,ಅ.1–ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿವೃತ್ತ ನೌಕರ ಮತ್ತು ವಿನಾಯಕನಗರ (ಪಡುವಾರಹಳ್ಳಿ) ನಿವಾಸಿ ಕೆ.ಜಯರಾಮು (90) ಶನಿವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ನೆರವೇರಿತು.

ವೈ.ಕೆ. ಗುಪ್ತ



ಮೈಸೂರಿನ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್‌ನ ನಿವೃತ್ತ ಕಾಮರ್ಸ್ ರೀಡರ್ ಮತ್ತು ಬೋಗಾದಿ ಆರ್‌ಐಇ ಕಾಲೋನಿ ನಿವಾಸಿ ವೈ.ಕೆ.ಗುಪ್ತ (87) ಸೆ.26ರಂದು ಬೆಂಗಳೂರಿನಲ್ಲಿ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಅಂದೇ ಚಾಮುಂಡಿಬೆಟ್ಟದ ತಪ್ಪಲಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಜೈಲಿನಲ್ಲಿ ಎಫ್‌ಎಂ ಬಾನುಲಿ ಕೇಂದ್ರ ಉದ್ಘಾಟನೆ

ಮೈಸೂರು, ಅ.1(ಆರ್‌ಕೆ)–ಮೈಸೂರು ಕೇಂದ್ರ ಕಾರಾಗೃಹದಲ್ಲಿ ಆರಂಭಿಸಿರುವ ಎಫ್‌ಎಂ ಬಾನುಲಿ ಪ್ರಸಾರ ಕೇಂದ್ರವನ್ನು ಗೃಹ ಸಚಿವ ಆರಗ ಜ್ಞಾನೇಂದ್ರ ಶನಿವಾರ ಬೆಳಗ್ಗೆ ಉದ್ಘಾಟಿಸಿದರು.

ದಸರಾ ಮಹೋತ್ಸವದ ಅಂಗವಾಗಿ ಮೈಸೂರು ಪ್ರವಾಸದಲ್ಲಿರುವ ಅವರು, ಜೈಲಿಗೆ ಭೇಟಿ ನೀಡಿ ಸಿಬ್ಬಂದಿಗಳೇ ನಿರ್ವಹಿಸುವ ಎಫ್‌ಎಂ ರೇಡಿಯೋ ಸೆಂಟರ್ ಹಾಗೂ ಕೈದಿಗಳನ್ನು ಭೇಟಿ ಮಾಡಲು ಬರುವ ಸಂಬಂಧಿಕರ ನವೀಕೃತ ಸಂದರ್ಶನ ಕೊಠಡಿಯನ್ನು ಉದ್ಘಾಟಿಸಿದರು.



ಜೈಲು ವಾಸಿಗಳಿಂದ ಗೃಹ ಸಚಿವ ಆರಗ ಜ್ಞಾನೇಂದ್ರ ಅಹವಾಲು ಸ್ವೀಕರಿಸಿದರು.

ಕಾರಾಗೃಹದ ಆವರಣದಲ್ಲಿ ನಿರ್ಮಿಸಲುದ್ದೇಶಿಸಿರುವ ಕೈದಿಗಳ ಹೆಚ್ಚುವರಿ ಕೊಠಡಿಗೆ ಗುದ್ದಲಿ ಪೂಜೆ ನೆರವೇರಿಸಿದ ಸಚಿವರು, ಅಲ್ಲಿನ ಹ್ಯಾಂಡ್‌ಲೂಮ್, ಪವರ್‌ಲೂಮ್, ಗುಡಿ ಕೈಗಾರಿಕೆ, ಕೌಶಲ್ಯ ತರಬೇತಿ ಕೇಂದ್ರ, ಪ್ರಾರ್ಥನಾ ಮಂದಿರ, ಪ್ರಾಥಮಿಕ ಆರೋಗ್ಯ ಕೇಂದ್ರ, ಬೇಕರಿ ತಿಂಡಿ ತಯಾರಿಕಾ ಘಟಕ, ಅಡುಗೆ ಮನೆಗಳಿಗೆ ಭೇಟಿ ನೀಡಿ ಕಾರ್ಯವೈಖರಿ ವೀಕ್ಷಿಸಿದರು.

ಇತ್ತೀಚೆಗೆ ಕಲಾಮಂದಿರದಲ್ಲಿ ನಡೆದ ದಸರಾ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕಲಾಪ್ರದರ್ಶನ ನೀಡಿದ ಕೈದಿಗಳು ಸಚಿವರು ಆಗಮಿಸುತ್ತಿದ್ದಂತೆಯೇ ಹಾಡು ಹೇಳುವ ಮೂಲಕ ಆತ್ಮೀಯವಾಗಿ ಬರಮಾಡಿಕೊಂಡರು. ನಂತರ ಸಜಾ ಬಂಧಿಗಳನ್ನುದ್ದೇಶಿಸಿ ಮಾತನಾಡಿದ ಅವರು, ಪುನರ್ವಸತಿ ಸೌಲಭ್ಯ, ಕೂಲಿ ದರ ಹೆಚ್ಚಿಸಿರುವುದು, ಕಾರಾಗೃಹಗಳ ಸಮಗ್ರ ಅಭಿವೃದ್ಧಿ ಮಾಡಿರುವ ಸರ್ಕಾರವು ಕೈದಿಗಳ ಕ್ಷೇಮಾಭಿವೃದ್ಧಿಗೆ ಕ್ರಮ ಕೈಗೊಂಡಿದೆ ಎಂದರು.

> “ಕಾರಾಗೃಹಗಳು ಸುಧಾರಣೆ ಹಾಗೂ ಮನ ಪರಿವರ್ತನಾ ತಾಣಗಳಾಗಬೇಕು. ಒಮ್ಮೆ ಮಾಡಿದ ತಪ್ಪನ್ನು ಸರಿಪಡಿಸಿಕೊಂಡು ಪುನರಾವರ್ತನೆ ಮಾಡದಂತೆ ಗಮನ ಸೆಳೆಯಲು ಪ್ರಯತ್ನಿಸಲಾಗುತ್ತಿದೆ. ಇಲ್ಲಿ ಭಕ್ತಿ, ಭಾವ, ಆಧ್ಯಾತ್ಮ ಚಿಂತನೆಗಳ ಮೂಲಕ ಒಳ್ಳೆಯ ಗುಣ ರೂಢಿಸಿಕೊಳ್ಳಲು ಪ್ರೇರೇಪಣೆ ನೀಡುತ್ತಿರುವುದರಿಂದ ಜೈಲುಗಳು ಸುಧಾರಣೆಯಾಗುತ್ತಿವೆ
> –ಆರಗ ಜ್ಞಾನೇಂದ್ರ, ಗೃಹ ಸಚಿವ.

ಸ್ವಚ್ಛತೆ ಕಾಪಾಡಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಕೀಯ ಸೌಲಭ್ಯ ಹೆಚ್ಚಿಸಿ ಕೈದಿಗಳಿಗೆ ಉತ್ತಮ ಚಿಕಿತ್ಸೆ ನೀಡಬೇಕು. ಜೈಲಿನೊಳಗೆ ಮಾದಕ ವಸ್ತುಗಳು, ಮೊಬೈಲ್ ಫೋನ್ ಬಳಕೆ, ಅಹಿತಕರ ಘಟನೆಗಳಾಗದಂತೆ ಎಚ್ಚರ ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ ಸಚಿವರು, ಜೈಲು ವಾಸಿಗಳಿಂದ ಅಹವಾಲು ಸ್ವೀಕರಿಸಿ, ಸಮಸ್ಯೆಗೆ ಪರಿಹಾರೋಪಾಯ ಕಂಡುಕೊಳ್ಳಲು ಪ್ರಯತ್ನಿಸುವುದಾಗಿ ಭರವಸೆ ನೀಡಿದರು. ಜೈಲು ಅಧೀಕ್ಷಕಿ ಕೆ.ಸಿ.ದಿವ್ಯಶ್ರೀ, ಸಹಾಯಕ ಅಧೀಕ್ಷಕ ವಿಜಯ್, ಡಿಸಿಪಿ ಪ್ರದೀಪ್ ಗುಂಟಿ ಉಪಸ್ಥಿತರಿದ್ದರು. ನಂತರ ಸಚಿವರು ಕರ್ನಾಟಕ ಪೊಲೀಸ್ ಅಕಾಡೆಮಿಗೆ ಭೇಟಿ ನೀಡಿ ಪ್ರಗತಿಯಲ್ಲಿರುವ ಕವಾಯತು ಮೈದಾನ ಹಾಗೂ ಸಿಬ್ಬಂದಿ ವಸತಿ ಗೃಹ ಕಾಮಗಾರಿಗಳನ್ನು ವೀಕ್ಷಿಸಿದರು.

ಬಸ್ ಹತ್ತುವಾಗ ಮಹಿಳೆಯ ವ್ಯಾನಿಟಿ ಬ್ಯಾಗ್‌ನಲ್ಲಿದ್ದ ಚಿನ್ನಾಭರಣ ಕಳವು

ಮೈಸೂರು, ಅ.1–ಬಸ್ ಹತ್ತುವಾಗ ಗೃಹಿಣಿಯ ವ್ಯಾನಿಟಿ ಬ್ಯಾಗ್‌ನಲ್ಲಿದ್ದ ಚಿನ್ನಾಭರಣ ಎಗರಿಸಿದ ಘಟನೆ ಮೈಸೂರು ನಗರ ಬಸ್ ನಿಲ್ದಾಣದಲ್ಲಿ ನಡೆದಿದೆ. ಮೈಸೂರು ತಾಲೂಕು ದೊಡ್ಡಕಾಟೂರು ಗ್ರಾಮದ ಟಿ.ಎಸ್.ಪವಿತ್ರ (26) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರು ಸೆ.28ರಂದು ಮಧ್ಯಾಹ್ನ ತಮ್ಮ ಗ್ರಾಮಕ್ಕೆ ತೆರಳುವ ಸಲುವಾಗಿ ನಗರ ಬಸ್ ನಿಲ್ದಾಣದಲ್ಲಿ ಬಸ್ ಹತ್ತಿದ್ದಾರೆ. ಟಿಕೆಟ್ ತೆಗೆದುಕೊಳ್ಳಲು ವ್ಯಾನಿಟಿ ಬ್ಯಾಗ್ ನೋಡಿದಾಗ ಅದರ ಜಿಪ್ ಓಪನ್ ಆಗಿದ್ದು, ಬ್ಯಾಗ್‌ನಲ್ಲಿ ಚಿಕ್ಕ ಪರ್ಸ್‌ನಲ್ಲಿಟ್ಟಿದ್ದ 29.5 ಗ್ರಾಂ ತೂಕದ ಚಿನ್ನಾಭರಣವನ್ನು ಖದೀಮರು ಕಳವು ಮಾಡಿದ್ದಾರೆ. ಈ ಸಂಬಂಧ ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಬೈಕ್ ಡಿಕ್ಕಿ ಹೊಡೆದು ವೃದ್ಧೆ ಸಾವು

ಮೈಸೂರು, ಅ.1–ಬೈಕ್ ಡಿಕ್ಕಿ ಹೊಡೆದ ಪರಿಣಾಮ ವೃದ್ಧೆ ಸಾವನ್ನಪ್ಪಿದ ಘಟನೆ ಮೈಸೂರಿನ ಮಹದೇವಪುರ ರಸ್ತೆಯಲ್ಲಿ ಸಂಭವಿಸಿದೆ. ಮಹದೇವಪುರ ಗ್ರಾಮದ ವೆಂಕಟಮ್ಮ(76) ಅವರು ಮಹದೇವಪುರ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಆಕಾಶ್ ಎಂಬಾತ ಚಾಲನೆ ಮಾಡುತ್ತಿದ್ದ ಬಜಾಜ್ ಪಲ್ಸರ್ (ಕೆಎ 55 ಇಬಿ 3930) ಇವರಿಗೆ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡ ಅವರಿಗೆ ಖಾಸಗಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಕೆ.ಆರ್.ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಕರೆದೊಯ್ದಾಗ ಚಿಕಿತ್ಸೆ ಫಲಕಾರಿಯಾಗದೆ ಅವರು ಮೃತಪಟ್ಟಿದ್ದಾರೆ. ಈ ಸಂಬಂಧ ಕೆ.ಆರ್.ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದಸರಾ ಪಾರಂಪರಿಕ ನಡಿಗೆಯಲ್ಲಿ ನೂರಾರು ಮಂದಿ ಭಾಗಿ; ಪಾರಂಪರಿಕ ಕಟ್ಟಡಗಳು, ಸ್ಮಾರಕಗಳ ಬಗ್ಗೆ ಮನವರಿಕೆ



ಮೈಸೂರು,ಅ.1(ಎಂಟಿವೈ)– ಪಾರಂಪರಿಕ ದಸರಾ ಅಂಗವಾಗಿ ಮೈಸೂರಲ್ಲಿ ಶನಿವಾರ ಆಯೋಜಿಸಿದ್ದ ಪಾರಂಪರಿಕ ನಡಿಗೆಯಲ್ಲಿ ನೂರಾರು ಮಂದಿ ಪಾಲ್ಗೊಂಡು, ಪಾರಂಪರಿಕ ಕಟ್ಟಡಗಳ ಬಗ್ಗೆ ಮಾಹಿತಿ ಪಡೆದರು.

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ಮೈಸೂರಿನ ಪುರಭವನದ ಆವರಣದಲ್ಲಿ ಆಯೋಜಿಸಿದ್ದ ಪಾರಂಪರಿಕ ನಡಿಗೆಗೆ ಶಾಸಕ ಎಲ್.ನಾಗೇಂದ್ರ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಮೈಸೂರಿನ ಪಾರಂಪರಿಕ ಕಟ್ಟಡಗಳ ಪರಿಚಯಿಸುವ ನಿಟ್ಟಿನಲ್ಲಿ ಹಲವು ವರ್ಷಗಳಿಂದ ಪಾರಂಪರಿಕ ನಡಿಗೆಯನ್ನು ಆಯೋಜಿಸಲಾಗುತ್ತಿದೆ. ನಾವು ವಾಹನದಲ್ಲಿ ಸಾಗುವಾಗ ಪಾರಂಪರಿಕ ಕಟ್ಟಡಗಳ ಬಗ್ಗೆ ಸರಿಯಾದ, ಉಪಯುಕ್ತವಾದ ಮಾಹಿತಿ ಪಡೆಯಲು ಸಾಧ್ಯವಾಗುವುದಿಲ್ಲ. ಆದರೆ ಪಾರಂಪರಿಕ ನಡಿಗೆಯಲ್ಲಿ ಪಾಲ್ಗೊಂಡಾಗ ಸಂಪನ್ಮೂಲ ವ್ಯಕ್ತಿಗಳು ಇವುಗಳ ಬಗ್ಗೆ ಮಾಹಿತಿ ನೀಡುವುದರಿಂದ ನಮ್ಮಲ್ಲಿರುವ ಪಾರಂಪರಿಕತೆಯನ್ನು ಹೊಸ ಪೀಳಿಗೆಗೆ ತಿಳಿಸಿಕೊಡಲು ಸಾಧ್ಯವಾಗುತ್ತದೆ ಎಂದರು. ನಡಿಗೆ ಕೆ.ಆರ್.ವೃತ್ತ, ದೇವರಾಜ ಮಾರುಕಟ್ಟೆ, ಚಿಕ್ಕ ಗಡಿಯಾರ ಸೇರಿದಂತೆ ವಿವಿಧ ಪಾರಂಪರಿಕ ಕಟ್ಟಡಗಳತ್ತ ತೆರಳಿ ಅವುಗಳ ಬಗ್ಗೆ ನಡಿಗೆಯಲ್ಲಿ ಪಾಲ್ಗೊಂಡವರಿಗೆ ಮಾಹಿತಿ ರವಾನಿಸಲಾಯಿತು.

ಈ ಸಂದರ್ಭದಲ್ಲಿ ಪಾರಂಪರಿಕ ದಸರಾ ಉಪಸಮಿತಿ ಅಧ್ಯಕ್ಷ ಗೋಪಾಲರಾವ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಪಾರಂಪರಿಕ ತಜ್ಞ ಪ್ರೊ.ರಂಗರಾಜು, ಭರತನಾಟ್ಯ ಕಲಾವಿದೆ ವಸುಂಧರ ದೊರೆಸ್ವಾಮಿ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಸಿಇಟಿ ಪರಿಷ್ಕೃತ ರ್‍ಯಾಂಕಿಂಗ್ ಬಿಡುಗಡೆ; ಮೊದಲ 500 ರ್‍ಯಾಂಕ್ ಯಥಾಸ್ಥಿತಿ

ಬೆಂಗಳೂರು: ಹೈಕೋರ್ಟ್ ಏಕಸದಸ್ಯ ಪೀಠದ ಆದೇಶದಂತೆ ಸಿಇಟಿ ರ್‍ಯಾಂಕಿಂಗ್‌ನ ಪರಿಷ್ಕೃತ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಶನಿವಾರ ಬಿಡುಗಡೆ ಮಾಡಿದೆ. ಜುಲೈ 30ರಂದು ಹೊರಡಿಸಿದ್ದ ರ್‍ಯಾಂಕಿಂಗ್ ಪಟ್ಟಿ ಮತ್ತು ಈಗಿನ ಪರಿಷ್ಕೃತ ಪಟ್ಟಿಯಲ್ಲಿ ಮೊದಲ 500 ರ್‍ಯಾಂಕಿಂಗ್‌ನಲ್ಲಿ ಯಾವುದೇ ವ್ಯತ್ಯಾಸವಾಗಿಲ್ಲ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ ಎನ್ ಅಶ್ವತ್ಥನಾರಾಯಣ ಹೇಳಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿರುವ ಅವರು, ಹೋದ ವರ್ಷವೇ ದ್ವಿತೀಯ ಪಿಯುಸಿ ತೇರ್ಗಡೆ ಹೊಂದಿ ಈ ವರ್ಷವೂ ಸಿಇಟಿ ಬರೆದಿದ್ದ 24 ಸಾವಿರ ಅಭ್ಯರ್ಥಿಗಳು 2021ರಲ್ಲಿ ಗಳಿಸಿದ್ದ ಅಂಕಗಳಲ್ಲಿ ಶೇ.6ರಷ್ಟು ಅಂಕಗಳನ್ನು ಕಡಿತಗೊಳಿಸಿದ ನಂತರ ಆ ವರ್ಷದ ಅಂಕಗಳ ಶೇ.50ರಷ್ಟು ಮತ್ತು ಸಿಇಟಿಯಲ್ಲಿ ಪಡೆದ ಅಂಕಗಳ ಶೇಕಡ 50ರಷ್ಟನ್ನು ಪರಿಗಣಿಸಿ ಈ ಪರಿಷ್ಕೃತ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಇದರಲ್ಲಿ ಹೋದ ವರ್ಷದ 14 ವಿದ್ಯಾರ್ಥಿಗಳು ಮಾತ್ರ 500ರಿಂದ 1,000ನೇ ರ್‍ಯಾಂಕ್ ಮಧ್ಯೆ ಸ್ಥಾನ ಪಡೆದಿದ್ದಾರೆ ಎಂದು ವಿವರಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...

ದಸರಾ ಕಾರ್ಯಕ್ರಮಗಳು



■ ಮುದ್ದು ಸಾಕುಪ್ರಾಣಿಗಳ ಪ್ರದರ್ಶನ ಸ್ಪರ್ಧೆ : ಉದ್ಘಾಟನೆ : ಪಶು ಸಂಗೋಪನಾ ಸಚಿವ ಪ್ರಭು ಬಿ.ಚವ್ಹಾಣ್, ಉಪಸ್ಥಿತರು: ಸಚಿವ ಎಸ್.ಟಿ.ಸೋಮಶೇಖರ್, ಸ್ಥಳ: ವಿಶ್ವವಿದ್ಯಾನಿಲಯದ ಹಾಕಿ ಮೈದಾನ, ಬೆಳಗ್ಗೆ 10ಕ್ಕೆ.
■ ವೈದ್ಯಕೀಯ ವಸ್ತುಪ್ರದರ್ಶನ: ಸ್ಥಳ: ಮೈಸೂರು ಮೆಡಿಕಲ್ ಕಾಲೇಜು, ಬೆಳಗ್ಗೆ 11ಕ್ಕೆ.
■ ಫಲಪುಷ್ಪ ಪ್ರದರ್ಶನ: ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಫಲಪುಷ್ಪ ಪ್ರದರ್ಶನ, ಸ್ಥಳ: ಕುಪ್ಪಣ್ಣ ಪಾರ್ಕ್
■ ದೀಪಾಲಂಕಾರ: ದಸರಾ ವಿದ್ಯುತ್ ದೀಪಾಲಂಕಾರ, ಸ್ಥಳ: ಹಸಿರು ಮಂಟಪ, ನ್ಯೂ ಸಯ್ಯಾಜಿರಾವ್ ರಸ್ತೆ, ಸಂಜೆ 6.30ಕ್ಕೆ.
■ ಮೈಸೂರು ಬೊಂಬೆ ರಂಗಮಂದಿರ: ಬೊಂಬೆ ಆಟ ಪ್ರದರ್ಶನ, ಸ್ಥಳ: ಮೈಸೂರು ಬೊಂಬೆ ರಂಗ ಮಂದಿರ, ಚಾಮುಂಡಿಬೆಟ್ಟ, ಸಂಜೆ 5ರಿಂದ.

ಮೈಸೂರು ಅರಮನೆ

ಸಂಜೆ 5.30ರಿಂದ : ಕಂಬದ ರಂಗಯ್ಯ ತಂಡದಿಂದ ಜನಪದ ಸಂಗೀತ
ಸಂಜೆ 6 ರಿಂದ : ಕು. ರೂಪಿಕಾ ಮತ್ತು ವಂದನಾ ಕಾಸರವಳ್ಳಿ, ಬೆಂಗಳೂರು ಅವರಿಂದ ನೃತ್ಯರೂಪಕ ನವಶಕ್ತಿ ವೈಭವ
ಸಂಜೆ 7 ರಿಂದ : ಬೆಂಗಳೂರಿನ ಮನೋಜ್ ವಶಿಷ್ಠ ಮತ್ತು ಅರುಂಧತಿ ವಶಿಷ್ಠ ತಂಡದಿಂದ ಸಂಗೀತ ವೈವಿಧ್ಯ (ಜಾನಪದ, ಸೂಫಿ, ಆಕ್ಯಾಪೆಲ್ಲಾ)

ಜಗನ್ಮೋಹನ ಅರಮನೆ

ಸಂಜೆ 6 ರಿಂದ: ಮೈಸೂರಿನ ಕೃಷ್ಣಮೂರ್ತಿ ಅವರಿಂದ ನಾದಸ್ವರ
ಸಂಜೆ 6.45 ರಿಂದ: ನಂಜನಗೂಡಿನ ಎಸ್.ರೇಖಾ ಭಟ್ ಅವರಿಂದ ಸುಗಮ ಸಂಗೀತ
ರಾ. 7.30 ರಿಂದ : ರೇಖಾ ಅಶೋಕ್ ಹೆಗ್ಡೆ ಅವರಿಂದ ನೃತ್ಯರೂಪಕ
ರಾ. 8.30 ರಿಂದ : ಬೆಂಗಳೂರಿನ ತೇಜಸ್ವಿನಿ ಶ್ರೀಹರಿ (ಮಾಲಗಿ) ಅವರಿಂದ ಹಿಂದೂಸ್ಥಾನಿ ಸಂಗೀತ

ಕಲಾಮಂದಿರ

ಸಂಜೆ 6 ರಿಂದ : ಮಂಡ್ಯದ ಎ.ವಿ. ಗೋವಿಂದರಾಜು ಅವರಿಂದ ಸ್ಯಾಕ್ಸೋಫೋನ್ ವಾದನ
ಸಂಜೆ 6.45 ರಿಂದ : ಮೈಸೂರಿನ ಯು.ರಾಜೇಶ್ ಪಡಿಯಾರ್ ಮತ್ತು ತಂಡದಿಂದ ಕನ್ನಡ ಗೀತೆಗಳು
ರಾ. 7.30 ರಿಂದ : ಬೆಂಗಳೂರಿನ ವಿಕ್ರಮ್ ಸೂರಿ, ಸೂರ್ಯ ಕಲಾವಿದರಿಂದ ನೃತ್ಯರೂಪಕ
ರಾತ್ರಿ 8.30 ರಿಂದ : ಬೆಂಗಳೂರಿನ ಕೀರ್ತನ ಜಿ.ಭಾರದ್ವಾಜ್ ಅವರಿಂದ ಭಕ್ತಿಗೀತೆಗಳು

ಗಾನಭಾರತಿ

ಸಂಜೆ 5 ರಿಂದ : ವಿರೂಪಾಕ್ಷ ಅವರಿಂದ ಪುರವಂತಿಕೆ
ಸಂಜೆ 5.45 ರಿಂದ : ಮೈಸೂರಿನ ಬಾಲಕೃಷ್ಣ ಮತ್ತು ತಂಡದಿಂದ ಸುಗಮ ಸಂಗೀತ
ಸಂಜೆ 6.45 ರಿಂದ : ಬೆಂಗಳೂರಿನ ಡಾ. ಹೆಚ್.ಜಿ.ಅಮೃತವರ್ಷಿಣಿ ಮತ್ತು ತಂಡದಿಂದ ಶಾಸ್ತ್ರೀಯ ಸಂಗೀತ
ರಾ. 7.45 ರಿಂದ : ಬೆಂಗಳೂರಿನ ಅನಿಲ್‌ಕುಮಾರ್ ಮತ್ತು ತಂಡದಿಂದ ರಂಗಗೀತೆಗಳು
ರಾ. 8.30 ರಿಂದ : ವಿಜಯಪುರದ ಲಕ್ಷ್ಮೀ ತೇರದಾಳ ಮಠ ಅವರಿಂದ ಭರತನಾಟ್ಯ

ಶ್ರೀ ನಾದಬ್ರಹ್ಮ ಸಂಗೀತ ಸಭಾ

ಸಂಜೆ 6 ರಿಂದ : ಚಿತ್ರದುರ್ಗದ ತರಳಬಾಳು ಕಲಾ ಸಂಘದಿಂದ ಜನಪದ ಸಿರಿ
ಸಂಜೆ 6.45 ರಿಂದ : ಬನುಮ ಗುರುದತ್ತ ಅವರಿಂದ ಸುಗಮ ಸಂಗೀತ
ರಾ. 7.30 ರಿಂದ : ಬೆಂಗಳೂರಿನ ವಿನುತ ಅವರಿಂದ ಸಮೂಹ ನೃತ್ಯ
ರಾ. 8.30 ರಿಂದ : ಕಲಬುರ್ಗಿ ಅಣ್ಣಾರಾವ್ ಶೆಲ್ಲಗಿ ಅವರಿಂದ ಸುಗಮ ಸಂಗೀತ

ಚಿಕ್ಕಗಡಿಯಾರ

ಸಂಜೆ 5.30 ರಿಂದ : ಮೈಸೂರಿನ ಶ್ರೀ ಬಸವರಾಜು ಕೋಲಾಟ ಕಲಾಸಂಘದಿಂದ ಕೋಲಾಟ
ಸಂಜೆ 6 ರಿಂದ : ಬೀದರ್‌ನ ದಿಲೀಪ್ ಬೀದರ್ ಅವರಿಂದ ವಚನ ಗಾಯನ
ರಾತ್ರಿ 7 ರಿಂದ : ಮೋಡಿ ಆಟ–ಕೈಚಳಕ, ಪುರವಂತಿಕೆ
ರಾತ್ರಿ 8 ರಿಂದ : ಸಪ್ತಾದ್ರಿ ಭಜನಾ ಮಂಡಳಿ (ಶ್ರೀದೇವಿ ಕೃಷ್ಣ) ಅವರಿಂದ ಭಜನೆ

ಪುರಭವನ

ಬೆಳಗ್ಗೆ 10.30 ರಿಂದ : ಮೈಸೂರಿನ ಶ್ರೀ ಅಂಕೇಶ್ವರ ಯಕ್ಷಗಾನ ಕಲಾ ತಂಡದಿಂದ ಯಕ್ಷಗಾನ
ಮಧ್ಯಾಹ್ನ 3 ರಿಂದ : ಬೆಂಗಳೂರಿನ ಅರ್ಧನಾರೀಶ್ವರ ಕಲಾಭಿವೃದ್ಧಿ ಟ್ರಸ್ಟ್‌ನಿಂದ ಕುರುಕ್ಷೇತ್ರ ಪೌರಾಣಿಕ ನಾಟಕ ಪ್ರದರ್ಶನ
ಸಂಜೆ 6 ರಿಂದ : ಮೈಸೂರು ಡಿಸ್ಟ್ರಿಕ್ಟ್ ಪ್ರೊಫೆಷನಲ್ ಥಿಯೇಟರ್ ಕಲಾವಿದರ ಸಂಘದಿಂದ ಮೋಹಿನಿ ಭಸ್ಮಾಸುರ ಪೌರಾಣಿಕ ನಾಟಕ



ಇಂದಿನ ಪಂಚಾಂಗ

2.10.2022 ಭಾನುವಾರ, ಮಳೆ ನಕ್ಷತ್ರ: ಹಸ್ತ 27.09.2022ರಿಂದ 10.10.2022 ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಆಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಮೂಲ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

ಅರಮನೆ ಮಾಳ, ನಂಜನಗೂಡು

ಸಂಜೆ 5.30 ರಿಂದ : ನೀಲಕಂಠೇಶ್ವರ ಶಾಲೆಯವರಿಂದ ಯೋಗ ಮತ್ತು ಜಾನಪದ ನೃತ್ಯ
ಸಂಜೆ 6 ರಿಂದ : ಹಾವೇರಿ ಮಂಜುನಾಥ್ ಭಜಂತ್ರಿ ಅವರಿಂದ ಶೆಹನಾಯ್ ವಾದನ
ಸಂಜೆ 7 ರಿಂದ : ಅಶೋಕ್‌ಕುಮಾರ್ ಮತ್ತು ತಂಡದಿಂದ ಜಾನಪದ ಗೀತೆಗಳು
ರಾತ್ರಿ 8 ರಿಂದ : ಹಾವೇರಿಯ ಅಮೃತ ದತ್ತಾತ್ರೇಯ ಸುಗಂಧಿ ತಂಡದಿಂದ ಭರತನಾಟ್ಯ

ಕಿರು ರಂಗಮಂದಿರ, ಕಲಾಮಂದಿರ

ಮ. 2 ರಿಂದ : ಮೇಘನಾ ಕುಂದಾಪುರ ಅವರಿಂದ ರಂಗ ಗೀತೆಗಳು
ಮ. 3 ರಿಂದ : ಸ್ಪಂದನ, ಸಾಗರ ಮಹಾರಾತ್ರಿ ಅವರಿಂದ ನಾಟಕ ಮಹಾಶಿವರಾತ್ರಿ
ರಾ. 7 ರಿಂದ : ಡಿಸ್ಟ್ರಿಕ್ಟ್ ಲೀಗಲ್ ಸರ್ವಿಸಸ್ ಅಥಾರಿಟಿ ಅವರಿಂದ ನಾಟಕ 'ಸಂಬಂಧ'

ಕುಸ್ತಿ ಪಂದ್ಯಾವಳಿ, ಶ್ರೀ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣ, ಕರ್ನಾಟಕ ವಸ್ತುಪ್ರದರ್ಶನ ಮೈದಾನ

ಸಂಜೆ 6ಕ್ಕೆ : ಕುಸ್ತಿ ಪಂದ್ಯಾವಳಿ ಸಮಾರೋಪ ಸಮಾರಂಭ

ಆಹಾರ ಮೇಳ, ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ

ಸಂಜೆ 6 ರಿಂದ : ಹಿನ್ನೆಲೆ ಗಾಯಕ ಮೈಸೂರಿನ ಶ್ರೀ ಹರ್ಷ ಅವರಿಂದ ಹರ್ಷ ಧ್ವನಿ ಸಂಗೀತ ಸಂಜೆ

ಯುವ ದಸರಾ ಮಹಾರಾಜ ಕಾಲೇಜು ಮೈದಾನ

ಸಂಜೆ 6ರಿಂದ: ಮಹಾಜನ ಕಾಲೇಜು ವಿದ್ಯಾರ್ಥಿಗಳಿಂದ ನೃತ್ಯ ಕಾರ್ಯಕ್ರಮ ಸಂಜೆ 6.15ರಿಂದ: ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ವ್ಯವಸ್ಥಾಪನಾ ಕಾಲೇಜು ವಿದ್ಯಾರ್ಥಿಗಳಿಂದ ನೃತ್ಯ ಕಾರ್ಯಕ್ರಮ ಸಂಜೆ 6.30 ರಿಂದ: ಹರ್ಷಿಕಾ ಪೂಣಚ್ಚ ಮತ್ತು ತಂಡದಿಂದ ಕನ್ನಡ ಸ್ಟಾರ್ ನೈಟ್ ರಾತ್ರಿ 7.30ರಿಂದ: ಹಿನ್ನೆಲೆ ಗಾಯಕಿ ಮಂಗ್ಲಿ ಅವರಿಂದ ಸಂಗೀತ ಸಂಜೆ ರಾತ್ರಿ 8.30ರಿಂದ: ಹಿನ್ನೆಲೆ ಗಾಯಕ ಅಮಿತ್ ತ್ರಿವೇದಿ ಅವರಿಂದ ಸಂಗೀತ ಸಂಜೆ

ಶರನ್ನವರಾತ್ರಿ ಕಾರ್ಯಕ್ರಮ



■ **ತ್ರಯೀನ್ಯಾಸ್:** 26ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಮಹಾಭಿಷೇಕ, ಶ್ರೀ ಸರಸ್ವತಿ ಆವಾಹನ, ಶ್ರೀ ಕಾಲರಾತ್ರಿ, ಶ್ರೀ ವಿದ್ಯಾ ಲವಣದುರ್ಗಾ ಪೂಜಾ, ಸಪ್ತಶತಿ ಪಾರಾಯಣ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀಚಕ್ರಾರ್ಚನೆ, ಶ್ರೀ ಸುಂದರ ಕಾಂಡ ಪಾರಾಯಣ, ಸಂಜೆ 5.30ಕ್ಕೆ ಶ್ರೀ ಬಾಲಾ ತ್ರಿಪುರಸುಂದರೀ ಮತ್ತು ಶ್ರೀ ದಶಶ್ಯಾಮಲಾ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮೀಪುರಂ.

■ **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ :** ಶ್ರೀ ಶಾರದಾ ಶರನ್ನವರಾತ್ರೋತ್ಸವ, ಶ್ರೀ ಗಾಯಿತ್ರಿ ಹೋಮ, ಶ್ರೀ ಸರಸ್ವತಿ ಹೋಮ, ವೀಣೇ ಶಾರದೆ ಅಲಂಕಾರ, ಸ್ಥಳ: ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ.

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ:** ನವರಾತ್ರಿ ವೈಭವ, ವೀಣೆ ಶಾರದೆ ಅಲಂಕಾರ, ಸ್ಥಳ: ದೇವಸ್ಥಾನದ ಆವರಣ, ಸಂಜೆ 6 ಗಂಟೆಯಿಂದ.

■ **ಶ್ರೀ ಶಾರದ ಪ್ರತಿಷ್ಠಾನ ಟ್ರಸ್ಟ್:** ಶರನ್ನವರಾತ್ರಿ ಸಂಗೀತೋತ್ಸವ, ವಿದುಷಿ ಶ್ರೀ ಲಕ್ಷ್ಮೀ ಮತ್ತು ತಂಡದಿಂದ ವೀಣಾವಾದನ, ಸ್ಥಳ: ಶ್ರೀ ರಾಮ ಮಂದಿರ, ಸಂಜೆ 6 ಗಂಟೆಗೆ.

■ **ಶ್ರೀ ಕಾಲ ಭೈರವೇಶ್ವರ ಸ್ವಾಮಿ ದೇವಸ್ಥಾನ:** ಶ್ರೀ ಪಾರ್ವತಿ ಅಮ್ಮನವರಿಗೆ ನವರಾತ್ರಿ ಪ್ರಯುಕ್ತ ವಿಶೇಷ ಅಲಂಕಾರ ಪೂಜಾ ಮಹೋತ್ಸವ, ಸರಸ್ವತಿ ಅಲಂಕಾರ, ಸಂಜೆ 7 ಗಂಟೆಗೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ದೇವಿ ನವರಾತ್ರಿ ಉತ್ಸವಗಳು, ಬೆಳಗ್ಗೆ 9ಕ್ಕೆ ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀಚಕ್ರಪೂಜೆ, ನವಾವರಣ ಪೂಜೆ, ವಿದುಷಿ ಜಯಂತಿ ಕುಮರೇಶ್ ಅವರಿಂದ ಕರ್ನಾಟಕ ವೀಣಾ ವಾದನ, ಮ.12ಕ್ಕೆ ಅನ್ನಾರ್ಚನೆ, ಸರಸ್ವತಿಪೂಜೆ, ಹೋಮ ಪೂರ್ಣಾಹುತಿ, ಮ.3.30ಕ್ಕೆ ಮಹಾಮಂಗಳಾರತಿ, ಡೋಲೋತ್ಸವ, ಸುವಾಸಿನಿ ಪೂಜೆ, ಸಂಜೆ 6 ರಿಂದ ಶ್ರೀ ಸ್ವಾಮೀಜಿಯವರಿಂದ ದೇವಿ ಭಜನೆ ಮತ್ತು ಪ್ರವಚನ, ಸ್ಥಳ: ನಾದಮಂಟಪ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ ಉತ್ಸವ, ಬೆಳಗ್ಗೆ 9 ಗಂಟೆಗೆ ಶ್ರೀ ಮಹಾಸರಸ್ವತಿ ಹೋಮ, ಕಾಳಿಕಾ ಅಲಂಕಾರ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ, ವಾಣಿವಿಲಾಸ ಮೊಹಲ್ಲಾ, ಬೆಳಗ್ಗೆ 8 ಗಂಟೆಗೆ.

■ **ಜೆ.ಪಿ.ನಗರ ಬ್ರಾಹ್ಮಣ ಸಂಘ:** ಶರನ್ನವರಾತ್ರಿ, ಕು. ಎಚ್.ಎಸ್. ಸ್ನೇಹ ಮತ್ತು ಎಚ್.ಎನ್. ಸಹನ ಅವರಿಂದ ಶಾಸ್ತ್ರೀಯ ಸಂಗೀತ, ಸ್ಥಳ: ಜೆ.ಪಿ.ನಗರ, ಎಫ್ ಬ್ಲಾಕ್, ಸಂಜೆ 6 ಗಂಟೆಯಿಂದ.

■ **ರಂಗಾಯಣ:** ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ನೆನಪಿನ ರಂಗೋತ್ಸವ–2022, ಮೈಸೂರಿನ ರಂಗಾಯಣ ರೆಪರ್ಟರಿ ತಂಡದಿಂದ ಹಲಗಲಿ ಸಮರ ನಾಟಕ ಪ್ರದರ್ಶನ, ನಿರ್ದೇಶನ : ಅಡ್ಡಂಡ ಸಿ. ಕಾರ್ಯಪ್ಪ, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

■ **ಗೊಂಬೆಗಳ ಪ್ರದರ್ಶನ:** ರಾಘವೇಂದ್ರ ಕೆ.ಎಸ್. ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ, ಬೆಳಗ್ಗೆ 10 ಗಂಟೆಯಿಂದ.

■ **ಶ್ರೀ ಮೈಸೂರು ಗುಜರಾತಿ ಸಮಾಜ :** ನವರಾತ್ರಿ ಉತ್ಸವದ ಅಂಗವಾಗಿ ಗುಜರಾತಿ ಗರ್ಬಾ ಹಾಗೂ ದಾಂಡಿಯಾ ಜಾನಪದ ನೃತ್ಯ ಸ್ಥಳ: ಸಮಾಜದ ಭವನ, ಯಾದವಗಿರಿ, ಸಂಜೆ 7.30 ರಿಂದ.

■ **ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕ ಸೇವಾ ಟ್ರಸ್ಟ್ :** ಶರನ್ನವರಾತ್ರಿ ಪೂಜಾ ಮಹೋತ್ಸವ, ಬೆಳಗ್ಗೆ 10 ರಿಂದ ಶ್ರೀ ಗಾಯಿತ್ರಿ ಹೋಮ, ಶ್ರೀ ಬಾಗಲಮುಖಿ ಹೋಮ, ಸ್ಥಳ: ಶ್ರೀರಾಮ ಮಂದಿರ, ಜಯನಗರ.

■ **ಶ್ರೀ ರಾಜರಾಜೇಶ್ವರಿ ದೇವಸ್ಥಾನ :** ಸರಸ್ವತಿ ಅಲಂಕಾರ, ವಿದುಷಿ ಎನ್.ಎಸ್. ಲಕ್ಷ್ಮೀ ಅವರ ನೃತ್ಯಾನ್ವೇಷಣ ನೃತ್ಯಶಾಲೆ ವಿದ್ಯಾರ್ಥಿಗಳಿಂದ ಭರತನಾಟ್ಯ, ಸ್ಥಳ: ದೇವಸ್ಥಾನದ ಆವರಣ, ರಾಜರಾಜೇಶ್ವರಿನಗರ.

■ **ಶ್ರೀ ಗಣಪತಿ ಸೇವಾ ಮಂಡಳಿ :** ಶರನ್ನವರಾತ್ರೋತ್ಸವ, ಸರಸ್ವತಿ ಅಲಂಕಾರ, ಸ್ಥಳ: ಶ್ರೀ ಗಣಪತಿ ಸೇವಾ ಮಂಡಳಿ, ರಾಮಕೃಷ್ಣನಗರ.

■ **ಶ್ರೀ ವಾಸವಿ ಶಾಂತಿಧಾಮ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ :** ಶ್ರೀ ವರ್ಧ್ಯಂತ್ಯೋತ್ಸವ, ಸರಸ್ವತಿ ಪೂಜೆ, ವೇದಪಾರಾಯಣ, ಕಲಶಾರಾಧನೆ, ಪಂಚಾಮೃತ ಅಭಿಷೇಕ, ಮಹಾಪೂಜಾ, ಶ್ರೀ ನವಚಂಡಿಕಾ ಹೋಮ, ಪ್ರಾಯಶ್ಚಿತ್ತ ಹೋಮ, ಜಯಾದಿ, ಮಂತ್ರಪುಷ್ಪ, ಮಹಾಪೂರ್ಣಾಹುತಿ, ಬೆಳಗ್ಗೆ 11ಕ್ಕೆ ಬಿ.ವಿ. ಶ್ರೀನಿವಾಸ ಗುಪ್ತ ಅವರ 'ಸವಿ ನೆನಪುಗಳೇ ಜೀವನ ಸಾರ' ಪುಸ್ತಕ ಬಿಡುಗಡೆ ಸಮಾರಂಭ, ಸ್ಥಳ: ಹಿರಿಯ ನಾಗರಿಕರ ನಿವಾಸ, ಆಲನಹಳ್ಳಿ ಬಡಾವಣೆ.

■ **ಶ್ರೀ ಅಮೃತೇಶ್ವರ ದೇವಸ್ಥಾನ :** ಶರನ್ನವರಾತ್ರಿ ಪ್ರಯುಕ್ತ ವಿಸ್ತಾರ ಸಹಸ್ರ ಚಂಡೀಹೋಮ, ಶ್ರೀ ಚಕ್ರನವಾವರಣೆ, ಕಾಳರಾತ್ರಿ ದುರ್ಗಾಪೂಜೆ, ಶ್ರೀ ಚಕ್ರನವಾವರಣ ಪೂಜೆ, ಶತಚಂಡಿ ಮಹಾಯಾಗ, ಪೂರ್ಣಾಹುತಿ, ಸ್ಥಳ: ದೇವಸ್ಥಾನ, ದೇವರಾಜ ಮೊಹಲ್ಲಾ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಬೆಳಗ್ಗೆ 10 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಬೆಳಗ್ಗೆ 7 ರಿಂದ ಶ್ರೀ ದುರ್ಗಾಪೂಜೆ, ಮಹಾಸಪ್ತಮಿ, ಚಂಡೀಪಾರಾಯಣ, ಭಜನೆ, ಆರತಿ, ಪುಷ್ಪಾಂಜಲಿ, ಸಂಜೆ 7ಕ್ಕೆ ಸಂಧ್ಯಾರತಿ, ವಿಶೇಷ ಭಜನೆ, ಸ್ಥಳ: ಆಶ್ರಮದ ಆವರಣ.

■ **ಚಿತ್ಕಲಾ ಫೌಂಡೇಷನ್, ಹಾಸನ, ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್:** ಚಿತ್ರ ಮತ್ತು ಛಾಯಾಚಿತ್ರ ಕಲಾವಿದ ಬಿ.ಎಸ್.ದೇಸಾಯಿ ಅವರಿಂದ ಪಕ್ಷಿ–ಕೀಟಗಳ ನವರಾತ್ರಿ ಕಲೋತ್ಸವ ಏಕವ್ಯಕ್ತಿ ಛಾಯಾಚಿತ್ರ ಕಲಾ ಪ್ರದರ್ಶನ, ಸ್ಥಳ: ಶ್ರೀಕಲಾನಿಕೇತನ ಆರ್ಟ್ ಗ್ಯಾಲರಿ, ಬೆಳಗ್ಗೆ 10ರಿಂದ.

■ **ದಸರಾ ವನ್ಯಜೀವಿ ಛಾಯಾಚಿತ್ರ ಪ್ರದರ್ಶನ :** ದಸರಾ ವನ್ಯಜೀವಿ ಛಾಯಾಚಿತ್ರ ಪ್ರದರ್ಶನ, ಸ್ಥಳ: ಹೋಟೆಲ್ ಪ್ರೀತಿ ಇಂಟರ್‌ನ್ಯಾಷನಲ್, ಫೈವ್‌ಲೈಟ್ ಸರ್ಕಲ್, ಬೆಳಗ್ಗೆ 10 ರಿಂದ.

■ **ಬಸವ ಸಮಿತಿ :** ಶರಣ ಸಂಗಮ ಮತ್ತು ಮಹಾತ್ಮ ಗಾಂಧಿ ಜಯಂತಿ, ಜಗದೀಶ ಚಿಕ್ಕಮಠ ಅವರಿಂದ ಶರಣರ ಬದುಕು ಕುರಿತು ಉಪನ್ಯಾಸ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ನಟನ ರಂಗಶಾಲೆ:** ಡಾ. ಸತೀಶ್‌ಚಂದ್ರ ಡಿ. ಅವರ ಚಿತ್ರಲೋಕದ ಅಭಿಜಾತ ಮೇರು ಹುಣಸೂರು ಕೃಷ್ಣಮೂರ್ತಿ ಪುಸ್ತಕ ಬಿಡುಗಡೆ ಸಮಾರಂಭ, ಉದ್ಘಾಟನೆ : ಹಿರಿಯ ಚಲನಚಿತ್ರ ನಿರ್ಮಾಪಕ ಭಾರ್ಗವ, ಪುಸ್ತಕ ಲೋಕಾರ್ಪಣೆ: ಡಾ. ನರಹರಿ ಕೆ.ಹುಣಸೂರು, ಪುಸ್ತಕ ಕುರಿತು: ಹಿರಿಯ ಪತ್ರಕರ್ತ ಎನ್.ಎಸ್. ಶ್ರೀಧರಮೂರ್ತಿ, ಅಧ್ಯಕ್ಷತೆ: ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ. ಪಿ.ಕೆ. ರಾಜಶೇಖರ, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಬೆಳಗ್ಗೆ 10.30ಕ್ಕೆ.

■ **ಎಸ್‌ಪಿಎಂ ಟ್ರಸ್ಟ್, ದ ಮೈಂಡ್ ಫೋಕಸ್:** ತರಬೇತಿ ಶಿಬಿರದ ಸಮಾರೋಪ, ಸರಸ್ವತಿ ಪೂಜೆ, ಸಾಧಕರಿಗೆ ಸನ್ಮಾನ, ಅಧ್ಯಕ್ಷತೆ: ಎನ್‌ಹೆಚ್‌ಎಐ ಪ್ರಾಜೆಕ್ಟ್ ಡೈರೆಕ್ಟರ್ ಬಿ.ಟಿ.ಶ್ರೀಧರ, ಉದ್ಘಾಟನೆ: ಪರಮಹಂಸ ಯೋಗ ಮಹಾವಿದ್ಯಾಲಯದ ನಿರ್ದೇಶಕ ಡಾ.ಭಾವನಾ, ಮುಖ್ಯ ಅತಿಥಿಗಳು: ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಜಲೇಂದ್ರಕುಮಾರ್, ಸ್ಥಳ: ಪರಮಹಂಸ ಯೋಗ ಮಹಾವಿದ್ಯಾಲಯ, ರಾಮಕೃಷ್ಣನಗರ, ಬೆಳಗ್ಗೆ 11ಕ್ಕೆ.

■ **ಶ್ರೀ ಲಕ್ಷ್ಮಿವೆಂಕಟರಮಣಸ್ವಾಮಿ ದೇವಸ್ಥಾನ ಟ್ರಸ್ಟ್:** 48ನೇ ಬ್ರಹ್ಮೋತ್ಸವ, ಬೆಳಗ್ಗೆ 9 ಗಂಟೆಗೆ ಲಕ್ಷ್ಮೀ ಕಲ್ಯಾಣೋತ್ಸವ, ಕಲಶಾರಾಧನೆ, ನಿತ್ಯಹೋಮ, ಲಾಜಾಹೋಮ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ ಶಾತ್ತುಮೊರೈ, ಪಲ್ಲಕ್ಕಿ ಉತ್ಸವ, ಲಕ್ಷ್ಮೀ ಸಹಸ್ರನಾಮ ಹೋಮ, ಮಂಗಳಾರತಿ, ಸ್ಥಳ: ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ದೇವಸ್ಥಾನ, ವಿ.ವಿ. ಮೊಹಲ್ಲಾ.

■ **ಮೈಸೂರು ವಿವಿ ಗಾಂಧಿ ಅಧ್ಯಯನ ಕೇಂದ್ರ, ಗಾಂಧಿ ಭವನ :** ಗಾಂಧಿ ಜಯಂತಿ ಪ್ರಯುಕ್ತ ವಿಶ್ವ ಅಹಿಂಸಾ ದಿನಾಚರಣೆ, ಉದ್ಘಾಟನೆ : ಸ್ವಾತಂತ್ರ್ಯ ಹೋರಾಟಗಾರ್ತಿ ಶ್ರೀಮತಿ ಮಾಣಿಕ್ಯ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತಕುಮಾರ್, ಗಾಂಧಿ ಚಿಂತನೆ : ಪ್ರಸಾರಾಂಗ ನಿವೃತ್ತ ಉಪನಿರ್ದೇಶಕ ಸ.ರ.ಸುದರ್ಶನ್, ಸ್ಥಳ: ಗಾಂಧಿ ಭವನ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಹೊಯ್ಸಳ ಕನ್ನಡ ಸಂಘ, ಸವಿಗನ್ನಡ ಪತ್ರಿಕಾ ಬಳಗ :** ಕಾವ್ಯ ದಸರಾ, ದಸರಾ ಕವಿಗೋಷ್ಠಿ ಹಾಗೂ ಸವಿಗನ್ನಡ ಪ್ರಶಸ್ತಿ ಪ್ರದಾನ, ಸಾನ್ನಿಧ್ಯ: ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ : ಮಹಾಕವಿ ಡಾ.ಲತಾ ರಾಜಶೇಖರ್, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.

■ **ವಿಶ್ವಮಾನವ ಮೈಸೂರು ವಿವಿ ನೌಕರರ ವೇದಿಕೆ :** ಗಾಂಧಿ ಜಯಂತಿ ಆಚರಣೆ ಉಪಸ್ಥಿತರು: ಡಾ.ಎಸ್.ಶಿವರಾಜಪ್ಪ, ಯಶಸ್ವಿನಿ ಸೋಮಶೇಖರ್, ಡಾ.ಬಿ.ಜೆ.ವಿಜಯಕುಮಾರ್, ಕೆ.ಹರೀಶ್‌ಗೌಡ, ಪಾಲಿಕೆ ಸದಸ್ಯ ಗೋಪಿ, ಸುನೀಲ್ ಕುಮಾರ್, ಸ್ಥಳ: ಕೋರ್ಟ್ ಮುಂಭಾಗ, ಬೆಳಗ್ಗೆ 8.30ಕ್ಕೆ

■ **ಮಹಾರಾಣಿ ಮಹಿಳಾ ಕಲಾ ಕಾಲೇಜು:** ಗಾಂಧಿ ಜಯಂತಿ, ಮುಖ್ಯ ಭಾಷಣ: ವಿಶ್ರಾಂತ ಪ್ರಾಧ್ಯಾಪಕ ಡಾ.ಎಸ್.ಶಿವರಾಜಪ್ಪ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ಶ್ರೀನಿವಾಸ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 9ಕ್ಕೆ

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು :** ಗಾಂಧಿ ಜಯಂತಿ ಆಚರಣೆ, ಅಧ್ಯಕ್ಷತೆ: ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ, ಪ್ರೊ. ಎಸ್.ಬಿ. ನಾಗರಾಜಮೂರ್ತಿ ಅವರಿಂದ ಉಪನ್ಯಾಸ, ಉಪಸ್ಥಿತರು : ಪ್ರಾಂಶುಪಾಲರಾದ ಡಾ. ಹೆಚ್.ಸಿ. ಹೊನ್ನಪ್ಪ, ಎಸ್. ಸೋಮಶೇಖರ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 9ಕ್ಕೆ

■ **ಶ್ರೀನಟರಾಜ ಪ್ರತಿಷ್ಠಾನ, ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳು :** ಮಹಾತ್ಮ ಗಾಂಧಿ ಪ್ರಯುಕ್ತ ವಿಶ್ವ ಅಹಿಂಸಾ ದಿನಾಚರಣೆ ಮತ್ತು ಸರ್ವಧರ್ಮ ಪ್ರಾರ್ಥನೆ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಮಾಜಿ ವಿಧಾನಪರಿಷತ್ ಸದಸ್ಯ ತೋಂಟದಾರ್ಯ, ಮುಖ್ಯ ಅತಿಥಿಗಳು : ಹಿರಿಯ ಗಾಂಧಿ ಮಾರ್ಗಿ ಟಿ. ಪುಟ್ಟಣ್ಣ, ಅಧ್ಯಕ್ಷತೆ : ಶ್ರೀನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಡಾ. ಎಸ್. ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಸಭಾಂಗಣ, ಬೆಳಗ್ಗೆ 10.30ಕ್ಕೆ

■ **ಪಡುವಾರಹಳ್ಳಿಯ ಸ್ನೇಹ ಬಳಗ:** ರಾಷ್ಟ್ರಪಿತ ಮಹಾತ್ಮ ಗಾಂಧಿ ಹಾಗೂ ಲಾಲ್ ಬಹಾದ್ದೂರ್ ಶಾಸ್ತ್ರಿ ಜಯಂತಿ ಆಚರಣೆ, ಉಪಸ್ಥಿತರು: ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ. ಉಮಾಶಂಕರ್, ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ನಗರಪಾಲಿಕೆ ಸದಸ್ಯ ಎಂ. ಚಿಕ್ಕವೆಂಕಟು, ಸ್ಥಳ: ಪಡುವಾರಹಳ್ಳಿಯ ಶ್ರೀ ಮಹರ್ಷಿ ವಾಲ್ಮೀಕಿ ರಸ್ತೆಯ ನಾಮಫಲಕದ ಬಳಿ, ಬೆಳಗ್ಗೆ 11 ಗಂಟೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ–ನರಸಿಂಹಮೂರ್ತಿ, 6.20 ದಸರಾ ವಿಶೇಷ ಗೀತಾರಾಧನ, 6.35 'ಬದುಕು ಬದಲಿಸಿದ ಶೋಧ' ಲೇಖನ ಮತ್ತು ಪ್ರಸ್ತುತಿ–ಸುರೇಂದ್ರ ನಾಥ್ ಸಾತ್ವಿಕ್, 6.40 ದಸರಾ ಸಂದರ್ಭದಲ್ಲಿ ವಿಶೇಷ ಸರಣಿ 'ರಾಜಮಾರ್ಗ–ಮೈಸೂರಿನ ಐತಿಹಾಸಿಕ ರಸ್ತೆಗಳ ಪರಿಚಯ' ಪ್ರಸ್ತುತಿ–ಡಾ.ಮೈಸೂರು ಉಮೇಶ್, 7.15 ಪ್ರಾಯೋಜಿತ ಕಾರ್ಯಕ್ರಮ 'ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ', ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.05 ಹರಿಕೇಶಾಂಗಿ ಮಾತಂಗಿ–ನವರಾತ್ರಿ ದಸರಾ ಸಂದರ್ಭದಲ್ಲಿ ರಾಜ್ಯವ್ಯಾಪಿ ವಿಶೇಷ ಸಂಗೀತ ಸರಣಿ, 9.40 ನಮ್ಮ ಆರೋಗ್ಯ–ಮನೆಯಂಗಳದಲ್ಲಿ ಔಷಧೀಯ ಸಸ್ಯಗಳು ಕುರಿತು ಹಿರಿಯ ಡಾ.ಟಿ.ಶಿವಕುಮಾರ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ ಬೇದ್ರೆ ಮಂಜುನಾಥ್ ಮಧ್ಯಾಹ್ನ; 12.05 ವನಿತಾ ವಿಹಾರ ಗಾಂಧಿ ಮತ್ತು ಮೀರಾ–ಗಾಂಧೀಜಿಯವರ ಸ್ತ್ರೀ ತತ್ವಗಳನ್ನು ಆಧರಿಸಿದ ಕಾರ್ಯಕ್ರಮ, 12.30 ದೇವರನಾಮ–ವಾಣಿ ಅರವಿಂದ್, 12.45 ಜನಪದಗೀತೆ–ದೇವಮ್ಮ ಮತ್ತು ತಂಡ, 1.20 ಭಾವಗೀತೆ–ವೃಂದಗಾನ, 2.35 ನಾಡಹಬ್ಬ ದಸರಾ ಸಂದರ್ಭದಲ್ಲಿ ದುರ್ಗಾ ಸಪ್ತಶತಿಯನ್ನಾಧರಿಸಿದ ಕಥಾಕಾಲಕ್ಷೇಪ ಸರಣಿ 'ದೇವೀ ಮಹಾತ್ಮೆ', 3.00 ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಿಶೇಷ ಕಾರ್ಯಕ್ರಮ ಸ್ವರಣಿ 'ಸ್ವರಾಜ್' ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಕಥೆ, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ– ಶಾಂಭವಿ ವಿಲಾಸ, ಪ್ರಸ್ತುತಿ– ಮುಳಿಯ ಗೋವಿಂದ ಭಟ್ ಮತ್ತು ತಂಡ, ಕೊಡಪದವು, 4.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ. ಮೀನಾ, 6.50 ಕೃಷಿರಂಗ–ಕೃಷಿಲೋಕ, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ಸಮನ್ವಯ್ ಸರ್ಕಾರ್–ಸಿತಾರ್, ಪಂಡಿ ಕುಮಾರ್ ಬೋಸ್–ತಬಲಾ ಸೋಲೋ



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 2 ಭಾನುವಾರ 2022

ಸಂಪುಟ: 43 | ಸಂಚಿಕೆ: 167 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಮೈಸೂರು ಅರಮನೆಯಲ್ಲಿ ಜಂಬೂಸವಾರಿ ತಾಲೀಮು



ಮೈಸೂರು,ಅ.1(ಎಂಟಿವೈ)–ನಾಡಹಬ್ಬ ದಸರಾ ಪ್ರಧಾನ ಆಕರ್ಷಣೆ ಜಂಬೂಸವಾರಿಗೆ ಕೇವಲ ನಾಲ್ಕು ದಿನ ಬಾಕಿ ಇರುವ ಹಿನ್ನೆಲೆಯಲ್ಲಿ ಗಜಪಡೆ ಹಾಗೂ ಅಶ್ವಪಡೆಗೆ ಅಂತಿಮ ಹಂತದ ತಾಲೀಮು ಶನಿವಾರ ಚಿನ್ನದ ಅಂಬಾರಿಗೆ ಪುಷ್ಪಾರ್ಚನೆ ಮಾಡುವುದರೊಂದಿಗೆ ನೆರವೇರಿತು.

ಅರಮನೆಯ ಮುಂಭಾಗದ ಪ್ರಾಂಗಣದಲ್ಲಿ ನಡೆದ ಜಂಬೂಸವಾರಿಯ ಮೊದಲ ತಾಲೀಮಿನಲ್ಲಿ ಅಂಬಾರಿ ಆನೆ ಅಭಿಮನ್ಯು, ಕುಮ್ಕಿ ಆನೆಗಳಾದ ಕಾವೇರಿ ಹಾಗೂ ಚೈತ್ರ, ಅಶ್ವಾರೋಹಿ ದಳ 34 ಕುದುರೆ, ಪೊಲೀಸ್ ಬ್ಯಾಂಡ್ ವಾದನದ ತಂಡ, ನಾಲ್ಕು ಪೊಲೀಸ್ ತುಕಡಿಗಳು ಪಾಲ್ಗೊಂಡಿದ್ದವು. ಅ.5ರಂದು ನಡೆಯಲಿರುವ ಜಂಬೂಸವಾರಿಯಲ್ಲಿ ಚಿನ್ನದ ಅಂಬಾರಿ ಹೊತ್ತ ಅಭಿಮನ್ಯುವಿಗೆ ಪುಷ್ಪಾರ್ಚನೆ ಮಾಡುವ ಸ್ಥಳ, ಆನೆಗಳ ತಂಡದ ಮುಂದೆ ಸಂಚರಿಸಲಿರುವ ಅಶ್ವಪಡೆ, ಪಥಸಂಚಲನದಲ್ಲಿ ಪಾಲ್ಗೊಳ್ಳುವ ಪೊಲೀಸ್ ತುಕಡಿ, ಪೊಲೀಸ್ ಬ್ಯಾಂಡ್ ತಂಡ ಯಾವ ಕ್ರಮಾಂಕದಲ್ಲಿ ಸಾಗಬೇಕೆಂಬುದನ್ನು ಪರಿಚಯಿಸುವ ನಿಟ್ಟಿನಲ್ಲಿ ಇಂದು ನಡೆಸಿದ ಮೊದಲ ತಾಲೀಮು ಯಶಸ್ವಿಯಾಗಿ ನೆರವೇರಿತು. ಈ ಮಧ್ಯೆ ಇಂದು ಎರಡು ಬಾರಿ ತಾಲೀಮು ನಡೆಸಲಾಯಿತು. ಸಿಎಆರ್ ಡಿಸಿಪಿ ಶಿವರಾಜು, ಅರಮನೆಯ ಭದ್ರತಾ ವಿಭಾಗದ ಎಸಿಪಿ ಚಂದ್ರಶೇಖರ್, ಪಶುವೈದ್ಯ ಡಾ.ಮುಜೀಬ್, ಸಹಾಯಕರಾದ ರಂಗರಾಜು ಇನ್ನಿತರರು ಉಪಸ್ಥಿತರಿದ್ದರು.

ಇಂದು ಪೂರ್ಣ ಪ್ರಮಾಣದ ತಾಲೀಮು: ಡಿಸಿಎಫ್ ಡಾ.ವಿ.ಕರಿಕಾಳನ್ ಮಾತನಾಡಿ, ಇಂದು ಸಣ್ಣ ಪ್ರಮಾಣದ ತಾಲೀಮು ನಡೆಸಲಾಗಿದೆ. ನಾಳೆ(ಅ.2)ಯಿಂದ ಜಂಬೂಸವಾರಿಯ ಪೂರ್ಣ ▶ 9ನೇ ಪುಟಕ್ಕೆ

ಕರ್ನಾಟಕದ ಜನರಿಗೆ ಕರೆಂಟ್ ಶಾಕ್

● ಯೂನಿಟ್‌ಗೆ 24ರಿಂದ 43 ಪೈಸೆ ಹೆಚ್ಚಳ

● ಒಂದೇ ವರ್ಷದಲ್ಲಿ 3ನೇ ಬಾರಿ ಏರಿಕೆ



ಬೆಂಗಳೂರು: ನವರಾತ್ರಿ ಹಬ್ಬಕ್ಕೆ ಸರ್ಕಾರ ಕರೆಂಟ್ ಶಾಕ್ ಗಿಫ್ಟ್ ನೀಡಿದೆ. ಕಲ್ಲಿದ್ದಲು ದರ ಹೆಚ್ಚಳದ ನೆಪ, ನಷ್ಟದ ನೆಪವೊಡ್ಡಿ ಇಂಧನ ಇಲಾಖೆ ದರ ಏರಿಸಿದೆ. ಬೆಸ್ಕಾಂ ಸೇರಿ 5 ಎಸ್ಕಾಂಗಳ ದರವನ್ನು ಏರಿಕೆ ಮಾಡಲಾಗಿದೆ. ಇಂದಿನಿಂದ ಅನ್ವಯವಾಗುವಂತೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಇಂಧನ ಹೊಂದಾಣಿಕೆ ಶುಲ್ಕವನ್ನು ಹೆಚ್ಚಳ ಮಾಡಿ ಆದೇಶಿಸಿದೆ. ಈ ವರ್ಷದಲ್ಲಿ ಮೂರು ಬಾರಿ ವಿದ್ಯುತ್ ದರ ಹೆಚ್ಚಳವಾಗಿದೆ. 2013ರ ನಿಯಮದ ಪ್ರಕಾರ ನಿರ್ದಿಷ್ಟಪಡಿಸಿದ ಸ್ಥಾವರಗಳಿಂದ ವಿದ್ಯುತ್ ಖರೀದಿ ಮಾಡುವಾಗ ಕಲ್ಲಿದ್ದಲು ವೆಚ್ಚ ಹೆಚ್ಚಳ ಅಥವಾ ಇಳಿಕೆ ಕಾಣುವಾಗ ಮೂರು ತಿಂಗಳಿಗೊಮ್ಮೆ ಎಸ್ಕಾಂಗಳ ಬೇಡಿಕೆಯಂತೆ ದರ ಏರಿಕೆ–ಇಳಿಕೆ ಮಾಡಬಹುದು. ▶ 9ನೇ ಪುಟಕ್ಕೆ

ಮೈಸೂರು ಜಿಲ್ಲೆಯಲ್ಲಿ ರಾಹುಲ್ ಗಾಂಧಿ ಐಕ್ಯತಾ ಯಾತ್ರೆ

● ನಂಜನಗೂಡು ತಾಲೂಕು ತಾಂಡವಪುರ ಎಂಐಟಿ ಕಾಲೇಜಲ್ಲಿ ವಾಸ್ತವ್ಯ

● ಗುಂಡ್ಲುಪೇಟೆಯ ತೊಂಡವಾಡಿ ಗೇಟ್‌ನಿಂದ ಮುಂದುವರೆದ ಪಾದಯಾತ್ರೆಯಲ್ಲಿ ಸಾವಿರಾರು ಮಂದಿ ಮುಖಂಡರು, ಕಾರ್ಯಕರ್ತರು ಭಾಗಿ



ಸೋಮ್‌ಜಿ / ರಂಗಸ್ವಾಮಿ

ಗುಂಡ್ಲುಪೇಟೆ/ನಂಜನಗೂಡು, ಅ.1–ಎಐಸಿಸಿ ನಾಯಕ ರಾಹುಲ್ ಗಾಂಧಿಯವರ 'ಭಾರತ ಐಕ್ಯತಾ ಯಾತ್ರೆ'ಯು ರಾಜ್ಯದಲ್ಲಿ ಎರಡನೇ ದಿನವಾದ ಇಂದು ಗುಂಡ್ಲುಪೇಟೆ ತಾಲೂಕು ತೊಂಡವಾಡಿ ಗೇಟ್‌ನಿಂದ ಆರಂಭವಾಯಿತು. ಇಂದು ಸಂಜೆ ನಂಜನಗೂಡಿನ ತಾಂಡವಪುರದಲ್ಲಿರುವ ಎಂಐಟಿ ಕಾಲೇಜಿನಲ್ಲಿ ರಾಹುಲ್ ಗಾಂಧಿ ವಾಸ್ತವ್ಯ ಹೂಡಿದ್ದಾರೆ.


ಶುಕ್ರವಾರ ಬೇಗೂರಿನಲ್ಲಿ ವಾಸ್ತವ್ಯ ಹೂಡಿದ್ದ ರಾಹುಲ್ ಗಾಂಧಿಯವರು ಶನಿವಾರ ಬೆಳಗ್ಗೆ 6.30ಕ್ಕೆ ಬೆಳಚವಾಡಿ ಗೇಟ್‌ನಿಂದ ಪಾದಯಾತ್ರೆ ನಡೆಸುವುದಾಗಿ ನಿಗದಿಯಾಗಿತ್ತು. ಆದರೆ ಮಳೆ ಬಂದ ಕಾರಣದಿಂದಾಗಿ ಒಂದು ಗಂಟೆ ತಡವಾಗಿ ಬೆಳಚವಾಡಿ ಗೇಟ್ ಬದಲು ತೊಂಡವಾಡಿ ಗೇಟ್‌ನಿಂದ ಪಾದಯಾತ್ರೆ ನಡೆಸಲು ನಿರ್ಧರಿಸಲಾಯಿತು. ▶ 9ನೇ ಪುಟಕ್ಕೆ

[ಹೆಚ್ಚಿನ ಸಚಿತ್ರ ವರದಿ ಪುಟ–11]

ಇಂದು ಮೈಸೂರಿಗೆ ರಾಹುಲ್ ಗಾಂಧಿ


ಗಾಂಧಿ ಜಯಂತಿ ದಿನವಾದ ನಾಳೆ (ಅ.2) ರಾಹುಲ್ ಗಾಂಧಿಯವರು ನಂಜನಗೂಡಿನ ತಾಂಡವಪುರದಲ್ಲಿರುವ ಎಂಐಟಿ ಕಾಲೇಜಿನಿಂದ ವಾಹನದ ಮೂಲಕ ಬದನವಾಳು ಗ್ರಾಮದಲ್ಲಿರುವ ಖಾದಿ ಗ್ರಾಮೋದ್ಯೋಗ ಕೇಂದ್ರಕ್ಕೆ ತೆರಳಿ, ಅಲ್ಲಿ ಗಾಂಧಿ ಜಯಂತಿ ಆಚರಿಸಲಿದ್ದಾರೆ. ನಂತರ ಮಧ್ಯಾಹ್ನ ನಂಜನಗೂಡಿಗೆ ಆಗಮಿಸಿ ಕಡಕೊಳ ಕೈಗಾರಿಕಾ ಪ್ರದೇಶದಿಂದ ಪಾದಯಾತ್ರೆಯನ್ನು ಮುಂದುವರೆಸಿ, ಸಂಜೆ ಮೈಸೂರಿನ ಅರಮನೆ ಎದುರಿಗಿರುವ ವಸ್ತುಪ್ರದರ್ಶನ ಪ್ರಾಧಿಕಾರದ ಮೈದಾನದಲ್ಲಿ ವಾಸ್ತವ್ಯ ಹೂಡಲಿದ್ದಾರೆ.

ಎಸ್‌ಸಿ, ಎಸ್‌ಟಿಗೆ ಮೀಸಲಾತಿ ಹೆಚ್ಚಳ ಸಂಬಂಧ ಅ.7ಕ್ಕೆ ಸರ್ವಪಕ್ಷ ಸಭೆ




ಬೆಂಗಳೂರು, ಅ.1(ಕೆಎಂಶಿ)–ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಒಳ ಮೀಸಲಾತಿ ನೀಡುವ ಸಂಬಂಧ ಚರ್ಚಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಕ್ಟೋಬರ್ 7ರ ಶುಕ್ರವಾರ ಸರ್ವಪಕ್ಷಗಳ ಸಭೆ ಕರೆದಿದ್ದಾರೆ.

ಮುಖ್ಯ ಮಂತ್ರಿಗಳ ಗೃಹ ಕಚೇರಿ ಕೃಷ್ಣಾದಲ್ಲಿ ಬೆಳಗ್ಗೆ 11 ಗಂಟೆಗೆ ಸಭೆ ನಡೆಯಲಿದ್ದು, ಸಭೆಯಲ್ಲಿ ಪರಿಶಿಷ್ಟ ಜಾತಿ, ಪಂಗಡದವರಿಗೆ ಒಳಮೀಸಲಾತಿ ನೀಡುವ ಕುರಿತಂತೆ ನ್ಯಾಯಮೂರ್ತಿ ನಾಗಮೋಹನದಾಸ್ ಅವರು ನೀಡಿರುವ ವರದಿಯ ಮೇಲೆ ಚರ್ಚೆ ನಡೆಯಲಿದೆ. ಮುಖ್ಯಮಂತ್ರಿ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಈ ಸಭೆಯಲ್ಲಿ ವಿಧಾನಮಂಡಲದ ಉಭಯ ಸದನಗಳ ಪ್ರತಿಪಕ್ಷಗಳ ನಾಯಕರು ಹಾಗೂ ವಾಲ್ಮೀಕಿ ಸಮುದಾಯದ ವಿಧಾನಸಭಾ ಮತ್ತು ಪರಿಷತ್ತಿನ ಸದಸ್ಯರು, ಕಾನೂನು ತಜ್ಞರು ಭಾಗವಹಿಸಲಿದ್ದಾರೆ. ವಿಧಾನಸಭೆಯ ಪ್ರತಿಪಕ್ಷದ ನಾಯಕರಾದ ಸಿದ್ದರಾಮಯ್ಯ, ಹೆಚ್.ಡಿ.ಕುಮಾರಸ್ವಾಮಿ, ವಿಧಾನಪರಿಷತ್ತಿನ ಪ್ರತಿಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಮತ್ತು ಪರಿಷತ್ತಿನ ಸಭಾ ನಾಯಕ, ಸಮಾಜ ಕಲ್ಯಾಣ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಸೇರಿದಂತೆ ಇನ್ನಿತರ ಮುಖಂಡರು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಪರಿಶಿಷ್ಟ ಜಾತಿ, ಪಂಗಡಗಳ ▶ 9ನೇ ಪುಟಕ್ಕೆ



ಹೆಸರಾಂತ ಪ್ರಕಾಶಕ–ಲೇಖಕ ಟಿ.ಎಸ್. ಛಾಯಾಪತಿ ಇನ್ನಿಲ್ಲ



ಮೈಸೂರು, ಅ.1– ಪ್ರಸಿದ್ಧ ತಳಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯ ಪ್ರಕಾಶಕ, ಲೇಖಕ ಟಿ.ಎಸ್. ಛಾಯಾಪತಿ(79) ಮೈಸೂರಿನ ಗೋಕುಲಂ 3ನೇ ಹಂತದಲ್ಲಿರುವ ತಮ್ಮ ಸ್ವಗೃಹ 'ರಮ್ಯ'ದಲ್ಲಿ ಶನಿವಾರ ನಿಧನರಾದರು.

ಮೃತರು ಪತ್ನಿ ಪುಷ್ಪಾ ಛಾಯಾಪತಿ, ಪುತ್ರಿ ಪ್ರತಿಭಾ, ಪುತ್ರ ಪವನ್ ಶ್ರೀನಿವಾಸ್ ಹಾಗೂ ಮೊಮ್ಮಕ್ಕಳು, ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಭಾನುವಾರ) ಮೈಸೂರಿನ ಗೋಕುಲಂನಲ್ಲಿರುವ ಚಿರಶಾಂತಿ ಧಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಟಿ.ಎಸ್.ಛಾಯಾಪತಿ ಅವರ ನಿಧನಕ್ಕೆ ಕವಯಿತ್ರಿ ಡಾ.ಲತಾ ರಾಜಶೇಖರ್ ▶ 9ನೇ ಪುಟಕ್ಕೆ

ಖ್ಯಾತ ಬಹುಭಾಷಾ ಗಾಯಕ ಸೋನು ನಿಗಮ್ ಗಾನಕ್ಕೆ ಮೈಮರೆತ ಯುವ ಪಡೆ

● ಕುಂತಲ್ಲಿ ಕೂರಲಿಲ್ಲ, ನಿಂತಲ್ಲಿ ನಿಲ್ಲಲಿಲ್ಲ... ● ಡಾ.ಶಮಿತಾ ಮಲ್ನಾಡ್ ಹಾಡಿಗೆ ಮರುಳಾದ ಪ್ರೇಕ್ಷಕ ● ಧ್ರುವ ಸರ್ಜಾ ಡೈಲಾಗ್‌ಗೆ ಫುಲ್ ಖುಷ್



ಮೈಸೂರು, ಅ.1(ಎಂಕೆ)– ಮೇರೆ ಪ್ಯಾರ್ ಕನ್ನಡಿಗಾಸ್.... ಮಾತಿನ ಮೋಡಿ ಮೂಲಕ ಗಾನ ಆರಂಭಿಸಿದ ಬಹುಭಾಷಾ ಗಾಯಕ ಸೋನು ನಿಗಮ್ ಸವಿಗಾನಕ್ಕೆ ಮೈಮರೆತು ಕುಣಿದು ಕುಪ್ಪಳಿಸಿದ ಜನಸ್ತೋಮ...!

ಮೈಸೂರು ದಸರಾ ಮೆಗಾ ಇವೆಂಟ್ 'ಯುವ ದಸರಾ'ದಲ್ಲಿ ಎತ್ತ ನೋಡಿದರೂ ಸಂಗೀತ ಸುಧೆಗೆ ಶಿಳ್ಳೆ–ಚಪ್ಪಾಳೆ ತಟ್ಟುವ, ಕೈಗಳನ್ನು ಗಾಳಿಯಲ್ಲಿ ತೇಲಿಸುವ, ನಿಂತಲ್ಲಿ ನಿಲ್ಲದ ಕಲಾಭಿಮಾನಿಗಳ ಸಾಗರಕ್ಕೆ ಖ್ಯಾತ ಹಿನ್ನೆಲೆ ಗಾಯಕ ಸೋನು ನಿಗಮ್ ಮನರಂಜನೆಯ ರಸದೌತಣ ನೀಡಿದರು.

ತಡವಾಗಿಯಾದರೂ ಕಾದು ಕುಳಿತ ಕಲಾರಸಿಕರಿಗೆ ಸಂಗೀತ ಸುಧೆ ಹರಿಸಿದ ಸೋನು ನಿಗಮ್, ನಾನ್‌ಸ್ಟಾಪ್ ಕನ್ನಡ, ಹಿಂದಿ ಹಾಡುಗಳನ್ನು ತಮ್ಮ ಅದ್ಭುತ ಕಂಠಸಿರಿಯಲ್ಲಿ ಉಣಬಡಿಸಿದರು. 'ಮುಂಗಾರು ಮಳೆ' ಚಿತ್ರದ 'ಮುಂಗಾರು ಮಳೆಯೇ ಏನು ನಿನ್ನ ಹನಿಗಳ ಲೀಲೇ', 'ಉಲ್ಲಾಸ ಉತ್ಸಾಹ' ಚಿತ್ರದ 'ನೀ ಸನಿಹಕೆ ಬಂದರೆ ಹೃದಯದ ಗತೀ ಏನು', 'ಗೆಳೆಯ' ಚಿತ್ರ 'ಈ ಸಂಜೆ ಯಾಕಾಗಿದೆ', ಪುನೀತ್ ರಾಜ್‌ಕುಮಾರ್ ಅಭಿನಯದ 'ಪರಮಾತ್ಮ' ಚಿತ್ರದ 'ಪರವಶನಾದೆನು ಅರಿಯುವ ಮುನ್ನವೇ', 'ಆಟೋಗ್ರಾಫ್' ಚಿತ್ರದ ಏನಾಗಲೀ ಮುಂದೆ ಸಾಗು ನೀ' ಸೇರಿದಂತೆ ಹಲವು ಕನ್ನಡ ಹಾಡುಗಳನ್ನು ಹಾಡಿ ಯುವ ಮನಸುಗಳು ಸಂಭ್ರಮಿಸುವಂತೆ ಮಾಡಿದರು.

ಹತ್ತಾರು ಹಿಂದಿ ಚಿತ್ರಗೀತೆಗಳನ್ನು ಹಾಡಿ, ಕುಣಿದು ತಮ್ಮೊಂದಿಗೆ ಇಡೀ ಜನಸ್ತೋಮವೇ ಕುಣಿದು ಕುಪ್ಪಳಿಸುವಂತೆ ಮಾಡಿದರಲ್ಲದೆ ಹಾಡಿನಲ್ಲಿ ಧ್ವನಿಗೂಡಿಸುವಂತೆಯೂ ಮೋಡಿ ಮಾಡಿದರು. ಸೋನು ನಿಗಮ್ ಹಾಡಿದ ಪ್ರತಿಯೊಂದು ಹಾಡಿಗೂ ಅಪಾರ ಮೆಚ್ಚುಗೆ ವ್ಯಕ್ತಪಡಿಸಿದ ಕಿಕ್ಕಿರಿದು ತುಂಬಿದ್ದ ಯುವ ಸಮೂಹ, ಮೊಬೈಲ್‌ನಲ್ಲಿ ಫೋಟೋ, ವೀಡಿಯೊಗಳನ್ನು ತೆಗೆದುಕೊಂಡು ಖುಷಿಪಟ್ಟರು. ಚೇರ್‌ಗಳ ಮೇಲೆ ನಿಂತು ನೆಚ್ಚಿನ ಗಾಯಕನಿಗೆ ಪ್ರೋತ್ಸಾಹ ನೀಡಿದರು.


ಮನಸ್ಸಿಗೆ ಚುಟು ಚುಟು ನೀಡಿದ ಶಮಿತಾ: ನಂತರ ವೇದಿಕೆ ತನ್ನದಾಗಿಸಿಕೊಂಡ ಖ್ಯಾತ ಗಾಯಕಿ ಡಾ.ಶಮಿತಾ ಮಲ್ನಾಡ್, ಯುವ ಮನಸುಗಳಿಗೆ ಚುಟು ಚುಟು ನೀಡಿದರು. ನೃತ್ಯದ ಮೂಲಕ ವೇದಿಕೆಗೆ ರಂಗು ನೀಡಿದ ಶಮಿಕಾ, 'ಮಧುರಾ ಪಿಸು ಮಾತಿಗೆ, ಅಧರ ತುಸು ಪ್ರೀತಿಗೆ' ಹಾಡನ್ನು ಹಾಡುತ್ತಾ ▶ 9ನೇ ಪುಟಕ್ಕೆ

NC SKY VILLAS
30x40 Duplex 3 BHK, Bogadi Road, 12 kms from Bus stand.
Rs. 57.75 Lakh onwards.
ELECTRIC SCOOTER FREE
Call: 90714 01234

Sites for Sale in MYSURU
Bannur road, Bogadi road
Hunsur road, HD kote road
MUDA: 39Lakhs 30X50
DTCP: 11Lakhs 30X40
with Maximum Bank Loan facility
Contact : 6364230543

NAVODAYA INTERNATIONAL SCHOOL
Bellur Cross, Nagamangala Taluk, Mandya District 571448
WANTED TEACHERS
All Subjects Teachers are Required for High School, Good Salary with Accomodation
9945520619

Promotional Feature



ಮೈಸೂರು ದಸರಾ ಹಾಗೂ ಪೊಲೀಸ್ ಇಲಾಖಾ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಸಲುವಾಗಿ, ಮೈಸೂರಿಗೆ ಆಗಮಿಸಿರುವ ಅತ್ಯಂತ ದಕ್ಷ ಹಾಗೂ ಪ್ರಾಮಾಣಿಕ ಗೃಹ ಸಚಿವರಾದ ಆರಗ ಜ್ಞಾನೇಂದ್ರ ಅವರನ್ನು ಶ್ರೀ ಕೃಷ್ಣ ಎಂಟರ್‌ಪ್ರೈಸಸ್‌ನ ಪ್ರದೀಪ್ ಸಿಂಗ್ ಹಾಗೂ ಎಪಿಎನ್ ಪ್ರಾಪರ್ಟೀಸ್‌ನ ಎ.ಪಿ.ನಾಗೇಶ್ ಆತ್ಮೀಯವಾಗಿ ಸ್ವಾಗತಿಸಿ, ಅಭಿನಂದಿಸಿದರು. ಈ ಸಂದರ್ಭದಲ್ಲಿ ಮಹೇಶ್, ಚಂದ್ರು, ನವೀನ್, ಸಚ್ಚಿನ್, ಮಧು ಇತರರು ಹಾಜರಿದ್ದರು.



ನಕ್ಕರೆ ಅದೇ ಸ್ವರ್ಗ

ವೈದ್ಯರು : ಯಾಕೆ ಹೆದರುತ್ತೀರಿ?
ರೋಗಿ : ಇದು ನನಗೆ ಮೊದಲನೇ ಆಪರೇಷನ್
ಆದರೆ ನೀವು ಯಾಕೆ ಹೆದರುತ್ತಿದ್ದೀರಿ?
ವೈದ್ಯರು : ನನಗೂ ಇದು ಮೊದಲನೇ ಆಪರೇಷನ್ ಕೇಸು!

ಮೈಸೂರು ಮಿತ್ರ

ಭಾನುವಾರ, 2 ಅಕ್ಟೋಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಕರುಣೆ ಎಂಬುದು ಕಡ್ಡಾಯಪಡಿಸಿ ತರುವಂತಹದ್ದಲ್ಲ. ಅದು ಹೃದಯದಿಂದ ಬರುವಂತಹುದು. –ಷೇಕ್ಸ್‌ಪಿಯರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಮನೆ ಮುರಿದರೆ ಕಟ್ಟಬಹುದು, ಮನ ಮುರಿದರೆ ಕಟ್ಟಬಹುದೇ?

ನಿಮ್ಮ ಪತ್ರಗಳು

ಹದಗೆಟ್ಟ ರಸ್ತೆಗಳಿಗೆ ಕಾಯಕಲ್ಪ ಕಲ್ಪಿಸಿ

ಮಾನ್ಯರೆ.

ಮೈಸೂರು ನಗರದಲ್ಲಿ ಹದಗೆಟ್ಟ ರಸ್ತೆಗಳಲ್ಲಿ ಕೆಲವು ರಸ್ತೆಗಳು ದಸರಾ ಸಮಯದಲ್ಲಿ ರಿಪೇರಿ ಆಗಿವೆ. ಆದರೆ ಟಿ. ನರಸೀಪುರ ರಸ್ತೆಯ ಗೋಪಾಲಗೌಡ ಆಸ್ಪತ್ರೆ ರಸ್ತೆಯಿಂದ ಡೈರಿ ಮುಂಭಾಗದ ತನಕ ರಸ್ತೆ ತುಂಬಾ ಹದಗೆಟ್ಟಿದೆ. ಬಹುಶಃ ಈ ರಸ್ತೆಯಲ್ಲಿ ಯಾವುದೇ ರಾಜಕೀಯ ವ್ಯಕ್ತಿಗಳು ತಿರುಗಾಡದ ಕಾರಣ ಈ ರಸ್ತೆಯಲ್ಲಿ ನೂರಾರು ಗುಂಡಿಗಳಿವೆ. ಇಲ್ಲಿ ಅತೀ ಹೆಚ್ಚಿನ ವಾಹನಗಳು ಚಲಿಸುತ್ತವೆ. ರಾತ್ರಿ ಹೊತ್ತು ಅನೇಕ ದ್ವಿಚಕ್ರ ವಾಹನಗಳ ಸವಾರರು ಈ ಗುಂಡಿಯಲ್ಲಿ ಬಿದ್ದು ಗಾಯ ಮಾಡಿಕೊಂಡಿರುವುದುಂಟು. ಆದರೂ ಪಾಲಿಕೆ ಸದಸ್ಯರು, ಅಧಿಕಾರಿಗಳ ಕಣ್ಣಿಗೆ ಇದು ಇನ್ನೂ ಬಿದ್ದಿಲ್ಲ. ಸರ್ಕಾರ ಶಾದಿಭಾಗ್ಯ, ಅನ್ನಭಾಗ್ಯಗಳಿಗೆ ಪ್ರಾಶಸ್ತ್ಯ ನೀಡುವಂತೆ ರಸ್ತೆ ಭಾಗ್ಯಕ್ಕೂ ಪ್ರಾಶಸ್ತ್ಯ ನೀಡಬೇಕಿದೆ. ಈ ಸಮಸ್ಯೆಯನ್ನು ಯಾರ ಬಳಿ ತಿಳಿಸಬೇಕೆಂದು ಸಾರ್ವಜನಿಕರಿಗೆ ಗೊತ್ತಾಗುತ್ತಿಲ್ಲ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ಗಮನಿಸುವರೇ?

–ಸಿದ್ಧಾರ್ಥನಗರದ ನಿವಾಸಿಗಳು, ಮೈಸೂರು.

ಹಳೆಯ ಬಡಾವಣೆಗಳಿಗೂ ದೀಪಾಲಂಕಾರ ಮಾಡಿ

ಮಾನ್ಯರೆ.

ವಿಶ್ವ ವಿಖ್ಯಾತ ಮೈಸೂರು ದಸರಾ 1610ನೇ ಇಸವಿಯಿಂದ ಪ್ರಾರಂಭಗೊಂಡು ರಾಜ್ಯದ ಜನಮನದಲ್ಲಿದೆ. ಒಂಬತ್ತು ದಿನಗಳ ಕಾಲ ನಡೆಯುವ ದಸರಾ ಕಾರ್ಯಕ್ರಮಗಳು ಹಾಗೂ ಪ್ರಮುಖ ರಸ್ತೆಗಳ ದೀಪಾಲಂಕಾರ, ಮುಖ್ಯ ರಸ್ತೆಗಳ ದೀಪಾಲಂಕಾರ ಎಲ್ಲವು ಸರಿ. ಯದುಕುಲ ವಂಶಸ್ಥರ ಮಹಾರಾಜರು ಎಂದರೆ ತಮ್ಮ ಮನದಲ್ಲಿ ಪೂಜಿಸುವ ಜನರಿರುವುದು ಉಂಟು.

ಅರಮನೆ ಎಂದರೆ ನಗರದ ಕೆಲವು ಬಡಾವಣೆಗಳಿಗೆ ಅವಿನಾಭಾವ ಸಂಬಂಧವಿದೆ. ಈ ಅರಮನೆಗೆ ಕಿಂಚಿತ್ತು ಧಕ್ಕೆ ಬಂದರೂ ಮರುಗುವ ಮನಸ್ಸುಗಳು ಇವೆ ಹಾಗೂ ಪೂಜ್ಯ ಭಾವನೆಯಿಂದ ನೋಡುವ ಬಡಾವಣೆಗಳು ಇಂದಿಗೂ ಇವೆ. ದಸರಾ ಹಬ್ಬ ಎಂದರೆ ಮನೆತನದ ದೊಡ್ಡ ಹಬ್ಬವಾಗಿ ಆಚರಿಸುವ ಈ ಬಡಾವಣೆ ಗಳಿಗೆ ವಿದ್ಯುತ್ ದೀಪ ಅಲಂಕಾರ ಮಾಡದೆ ಇರುವುದು ಬೇಸರದ ವಿಚಾರ.

–ಕಂಗಾಣಿಸೋಮು ಪಿ ಸಿ, ಕ್ಯಾತಮಾರನಹಳ್ಳಿ, ಮೈಸೂರು

ಕಾವೇರಿ ನೀರು ಸರಬರಾಜಿಗೆ ಮನವಿ

ಮಾನ್ಯರೆ,

ಮೈಸೂರಿನ ಕುವೆಂಪುನಗರದ ಕೆ ಬ್ಲಾಕ್ ನಿವಾಸಿಗಳಿಗೆ ಯಾವಾಗಲೂ ಬೋರ್‌ವೆಲ್ ನೀರು ಮಾತ್ರ ಸರಬರಾಜು ಮಾಡಲಾಗುತ್ತಿದೆ. ಕಾವೇರಿ ನೀರು ಪೂರೈಕೆ ಮಾಡುತ್ತಿಲ್ಲ. ನೀರನ್ನು ಕುದಿಸಿದ ನಂತರವೂ ಜಿಡ್ಡಿನ ತರಹದ ಕೊಳೆ ತೇಲುತ್ತದೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ಕ್ರಮ ವಹಿಸುತ್ತಿಲ್ಲ. ಆದ್ದರಿಂದ ದಯವಿಟ್ಟು ಕೆ ಬ್ಲಾಕ್ ಕುವೆಂಪುನಗರಕ್ಕೆ ಕಾವೇರಿ ನೀರನ್ನು ಪೂರೈಸಬೇಕೆಂದು ಈ ಮೂಲಕ ಮನವಿ.

– ಪಾರ್ವತಮ್ಮ, ಕೆ ಬ್ಲಾಕ್, ಕುವೆಂಪುನಗರ, ಮೈಸೂರು.

ಅಡಿಕೆ ಆಮದು ಆತಂಕಕಾರಿ

ಮಾನ್ಯರೆ,

ಕೇಂದ್ರ ಸರಕಾರ ಭೂತಾನಿನಿಂದ 17,000 ಟನ್ ಅಡಿಕೆ ಆಮದು ಮಾಡಿಕೊಳ್ಳುವ ನಿರ್ಧಾರ ಅಡಿಕೆ ಬೆಳೆಗಾರರಿಗೆ ತುಂಬಾ ಆತಂಕಕಾರಿ ಸಂಗತಿ. ನಮ್ಮ ದೇಶದಲ್ಲಿ ಒಂದು ಕೋಟಿಗೂ ಅಧಿಕ ಅಡಿಕೆ ಬೆಳೆಗಾರರ ಕುಟುಂಬಗಳಿವೆ ಎಂದು ಅಂದಾಜಿಸಲಾಗಿದೆ. ಹಾಗೂ ಅಡಿಕೆ ಕೃಷಿ ಮತ್ತು ಅಡಿಕೆಗೆ ಸಂಬಂಧಿಸಿದ ಉದ್ಯಮದ ಮೇಲೆ ಅವಲಂಬಿತರು ಸುಮಾರು ಹತ್ತು ಕೋಟಿಗೂ ಅಧಿಕ ಎನ್ನಲಾಗಿದೆ. ಹೀಗಿರುವಾಗ ಈ ಹಿಂದೆ ಈ ಭಾರಿ ಪ್ರಮಾಣದ ಅಡಿಕೆ ಆಮದು ಆಗದಿರುವುದು ಈಗ ಏತಕೆ ಎಂಬುದೇ ದೊಡ್ಡ ಪ್ರಶ್ನೆ, ಅದರಲ್ಲೂ ನಮ್ಮ ಕರ್ನಾಟಕದಲ್ಲಿ ಅಡಿಕೆ ಬೆಳೆಗಾರರ ಸಂಖ್ಯೆ ಅಧಿಕ. ಅತಿವೃಷ್ಟಿ ಅನಾವೃಷ್ಟಿ ಸಮಯದಲ್ಲೂ ಅಡಿಕೆ ತನ್ನ ಬೆಳೆಗಾರರ ಕೈ ಹಿಡಿಯುತ್ತಿದೆ ಎಂದರೆ ತಪ್ಪಾಗಲಾರದು. ಮಹಾಮಾರಿ ನಡುವೆಯೂ ಅಡಿಕೆ ತನ್ನ ಮಾರುಕಟ್ಟೆ ಬೆಲೆ ಕಾಯ್ದುಕೊಂಡು ಬೆಳೆಗಾರರ ಕೈ ಹಿಡಿದಿದೆ. ಈ ಮಧ್ಯೆ ದೇಶದೆಲ್ಲೆಡೆ ಅಡಿಕೆ ಉತ್ಪಾದನೆ ಮತ್ತು ಉದ್ಯಮಗಳು ವೇಗವಾಗಿ ಬೆಳವಣಿಗೆ ಕಾಣುತ್ತಿವೆ. ನಮ್ಮ ದೇಶದಲ್ಲಿ ಮೊದಲೇ ಅಡಿಕೆ ಬೇಡಿಕೆಗಿಂತ ಪೂರೈಕೆ ಕಡಿಮೆ ಇರುವಾಗ ಆಮದು ಏತಕೆ ಎಂಬುದು ಯಕ್ಷ ಪ್ರಶ್ನೆ. ಕೇಂದ್ರ ಸರಕಾರದ ಈ ಆಮದಿನ ನಿರ್ಧಾರ ತೀರಾ ಖಂಡನಾರ್ಹ. ಅಡಿಕೆ ಬೆಳೆಗಾರರ ಹಿತಾಸಕ್ತಿಯನ್ನು ಗಮನದಲ್ಲಿ ಇಟ್ಟುಕೊಂಡು ಕೇಂದ್ರ ಸರಕಾರ ಈ ದೊಡ್ಡ ಪ್ರಮಾಣದ ಅಡಿಕೆಯ ಆಮದಿನ ನಿರ್ಧಾರ ಕೈ ಬಿಡಬೇಕು, ಇಲ್ಲದಿದ್ದರೆ ಈ ಆಮದು ಪಟ್ಟಭದ್ರ ಹಿತಾಸಕ್ತಿಗಳನ್ನು ಓಲೈಸಲು ಎಂಬ ಅನುಮಾನ ಅಡಿಕೆ ಅವಲಂಬಿತರಲ್ಲಿ ಮೂಡುವುದು ಸಹಜ.

–ವಿಜಯಕುಮಾರ್ ಎಚ್.ಕೆ., ರಾಯಚೂರು

ಇಂದಿನ ಭಾರತ

ಮಾನ್ಯರೆ,

ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ಭರತಖಂಡ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿದ್ದಾಗ, ಭಾರತವನ್ನು, ಅಂತೆಯೇ ಗಾಂಧೀಜಿಯನ್ನು ದ್ವೇಷಿಸುತ್ತಿದ್ದ ಅಂದಿನ ಬ್ರಿಟನ್ ಪ್ರಧಾನಿ ಚರ್ಚಿಲ್ ಹೇಳುತ್ತಿದ್ದ ಮಾತು : "ಸ್ವಾತಂತ್ರ್ಯಕ್ಕೆ ಭಾರತ ಲಾಯಕ್ಕಲ್ಲ. ಆ ದೇಶಕ್ಕೆ ನಾವು ಸ್ವಾತಂತ್ರ್ಯ ಕೊಟ್ಟು ಬಂದರೆ, ಅದನ್ನು ಭ್ರಷ್ಟರ ಕೈಗೆ ಒಪ್ಪಿಸಿ ಬಂದಂತಾಗುತ್ತದೆ!"

ಅದಕ್ಕೂ ಮುನ್ನ, ದಕ್ಷಿಣ ಆಫ್ರಿಕದ ಜ. ಸ್ಮಟ್ಸ್ ಪ್ರಕಾರ, "ಭಾರತೀಯರು ಕೊಳಕರೂ ವ್ಯಾಪಾರ ನೀತಿ ಸಂಹಿತೆಯೊಂದನ್ನೂ ಪಾಲಿಸದ ಅಸಭ್ಯರೂ ಪ್ರಗತಿಶೀಲ ರಾಜ್ಯ ವ್ಯವಸ್ಥೆಗೆ ಕಂಟಕರೂ ಆಗಿದ್ದರು!"

ಇಂದು ಈ ಹೇಳಿಕೆಗಳನ್ನು ಪೂರ್ತಿ ಸುಳ್ಳು ಎಂದು ತಳ್ಳಿ ಹಾಕಬಹುದೆ? ಭಾರತಕ್ಕೆ ಸ್ವಾತಂತ್ರ್ಯ ಬಂದು ಮುಕ್ಕಾಲು ಶತಮಾನವಾಯಿತು. ದೇಶ ಇನ್ನೂ ಬಹಳಷ್ಟು ಸುಧಾರಿಸಬೇಕಿದೆ! (ಬದಲಿಗೆ ಹೆಚ್ಚು ಹೆಚ್ಚು ಕೆಡುತ್ತಿದೆಯಲ್ಲವೆ?)

ಗಾಂಧಿ ಹಾಸ್ಯ: ಗಾಂಧೀಜಿ ಅರೆಬೆತ್ತಲಾಗಿ ಇಂಗ್ಲೆಂಡಿಗೆ ಹೋಗಿ ಜಾರ್ಜ್ ಚಕ್ರವರ್ತಿಯನ್ನು ಭೇಟಿ ಮಾಡಿ ಬಂದ ಮೇಲೆ, ಯಾರೋ ಕೇಳಿದರಂತೆ: "ಇಷ್ಟು ಕಡಿಮೆ ವಸ್ತ್ರದಲ್ಲಿ ಚಕ್ರವರ್ತಿಯನ್ನು ನೋಡಬಹುದೆ?" ಗಾಂಧಿ ಹೇಳಿದರಂತೆ : "ನಮ್ಮಿಬ್ಬರಿಗೂ ಆಗುವಷ್ಟು ವಸ್ತ್ರವನ್ನು ಆ ಮಾರಾಯನೊಬ್ಬನೇ ಧರಿಸಿದ್ದ!"


ಅಲ್ಪ ಪ್ರಾಣ : ಮುರುಘಾಶರಣರು 'ಮೃಗಶರಣ'ರಾದುದೇಕೆ?

–ಸಿಪಿಕೆ, ದತ್ತಪೀಠ ಆಸ್ಥಾನ ವಿದ್ವಾನ್, ಮೈಸೂರು.



ಪೊಲೀಸ್ ವಾದ್ಯಮೇಳಕ್ಕೆ ಮಾರುಹೋದ ಜನಸಮೂಹ

ಅರಮನೆ ಅಂಗಳದಲ್ಲಿ ರಂಗಗೀತೆ, ಜಾನಪದ ಗೀತೆಗಳ ಸುಶ್ರಾವ್ಯ ಲಹರಿ





ಮೈಸೂರು, ಅ.1(ಎಸ್‌ಬಿಡಿ)– ಕರ್ನಾಟಕ ಪೊಲೀಸ್ ಸಮೂಹ ವಾದ್ಯಮೇಳ, ರಂಗಗೀತೆ ಹಾಗೂ ಜಾನಪದ ಗೀತೆಗಳ ಝೇಂಕಾರ ಅರಮನೆ ಅಂಗಳದಲ್ಲಿ ಸಾಂಸ್ಕೃತಿಕ ವೈಭವವನ್ನು ಇಮ್ಮಡಿಗೊಳಿಸಿತು.

ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ 6ನೇ ದಿನವಾದ ಇಂದು ಅರಮನೆ ಆವರಣದಲ್ಲಿ ಕಿಕ್ಕಿರಿದಿದ್ದ ಜನಸಮೂಹ, ವಿಶೇಷ ಕಾರ್ಯಕ್ರಮಗಳ ರಸದೌತಣ ಸವಿದು ಉಲ್ಲಾಸಿತರಾದರು. ಪೊಲೀಸ್ ಬ್ಯಾಂಡ್‌ನಿಂದ ಹೊರಹೊಮ್ಮಿದ ಆಕರ್ಷಕ ಸಂಗೀತ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಆದ ರಂಗಭೂಮಿ ಹಾಗೂ ಚಲನಚಿತ್ರ ನಿರ್ದೇಶಕ, ನಟ ಟಿ.ಎಸ್.ನಾಗಾಭರಣ ಸಾರಥ್ಯದಲ್ಲಿ ಮಾರ್ಧನಿಸಿದ ರಂಗಗೀತೆ ಗಾಯನ, ಪನ್ನಗ ವಿಜಯ್‌ಕುಮಾರರ ನೇತೃತ್ವದಲ್ಲಿ ಮೂಡಿಬಂದ ಜಾನಪದ ಗಾಯನಕ್ಕೆ ಮನಸೋತು, ಚಪ್ಪಾಳೆ, ಉದ್ಘೋಷದ ಮೂಲಕ ಸಂಭ್ರಮ ವ್ಯಕ್ತಪಡಿಸಿದರು.

ಸಮೂಹ ವಾದ್ಯ ಮೇಳ: ಗೃಹ ಸಚಿವ ಆರಗ ಜ್ಞಾನೇಂದ್ರ ಸೇರಿದಂತೆ ಗಣ್ಯರ ಸಮ್ಮುಖದಲ್ಲಿ ಕರ್ನಾಟಕ ಪೊಲೀಸರ ಕರ್ನಾಟಕ ಹಾಗೂ ಇಂಗ್ಲಿಷ್ ವಾದ್ಯವೃಂದ ಪ್ರಸ್ತುತಪಡಿಸಿದ ಸಮೂಹ ವಾದ್ಯ ಮೇಳ ಅತ್ಯಾಕರ್ಷಕವಾಗಿತ್ತು ಪೊಲೀಸ್ ವಾದ್ಯಮೇಳಕ್ಕಾಗಿ ಅರಮನೆ ಎದುರಿಗೆ ಪ್ರತ್ಯೇಕ ವೇದಿಕೆ ನಿರ್ಮಿಸಲಾಗಿತ್ತು. ವಿಜಯ ಭಾರತಿ ಕೃತಿ ಪ್ರಸ್ತುತಿಯೊಂದಿಗೆ ಅರಮನೆ ಕಡೆಯಿಂದ ವೇದಿಕೆಯತ್ತ ಆಗಮಿಸಿದ ವಾದ್ಯಕಾರರು ಅಲ್ಲಿ ಆಸೀನರಾಗಿದ್ದ ಗಣ್ಯರಿಗೆ ಗೌರವ ವಂದನೆ ಸಲ್ಲಿಸಿ, ಅವರ ಅನುಮತಿಯೊಂದಿಗೆ ಸಂಗೀತ ಪಯಣ ಆರಂಭಿಸಿದರು.

ಸಮೂಹ ವಾದ್ಯದಿಂದ 'ಗಂಗೋತ್ರಿ' ಕೃತಿ, 'ಮೇರಿ ದೇಶ್ ಕೀ ಧರ್ತಿ...', 'ಸಾರೆ ಜಹಾನ್ ಸೇ ಅಚ್ಛಾ...' ಗೀತೆಗಳ ಪ್ರಸ್ತುತಿಯಿಂದ ನೆರೆದಿದ್ದವರಲ್ಲಿ ದೇಶಭಕ್ತಿ ಸಂಚಲನವುಂಟಾಯಿತು. ವಿಶೇಷ ವಾದ್ಯ ನುಡಿಸುತ್ತಾ, ಹೆಜ್ಜೆ ಹಾಕಿದ ಪೈಪ್ ಬ್ಯಾಂಡ್ ತಂಡ ಗಮನ ಸೆಳೆಯಿತು. 'ಅಪಾರ ಕೀರ್ತಿ ಮೆರೆದ ಭವ್ಯ ನಾಡಿದು...' ಕೃತಿ ಸುಶ್ರಾವ್ಯವಾಗಿ ಮೂಡಿಬಂದಿತು. ಸಮೂಹ ವಾದ್ಯಮೇಳದ ನಡುವೆ ಬಾಕ್ಸ್, ಡ್ರಮ್ ಲೈನ್ ಸೇರಿದಂತೆ ವಿವಿಧ ವಿನ್ಯಾಸಗಳನ್ನು ನಿರ್ಮಿಸಿದ್ದು ವಾದ್ಯಕಾರರ ಕಲಾಪ್ರವೀಣತೆಯನ್ನು ಸಾಕ್ಷೀಕರಿಸಿತು. ಈ ವೇಳೆ ಸುತ್ತಲೂ ಕಿಕ್ಕಿರಿದಿದ್ದ ಪ್ರೇಕ್ಷಕರು ಚಪ್ಪಾಳೆ ಮಳೆಗರೆದು ಪೊಲೀಸ್ ವಾದ್ಯವೃಂದವನ್ನು ಅಭಿನಂದಿಸಿದರು.

ಕರ್ನಾಟಕ ವಾದ್ಯವೃಂದದವರು 'ಸದಾಶಿವಂ ಉಪಾಸ್ಮಯೇ...' ಚಿಟ್ಟಿಬಾಬು ರಚನೆಯ 'ಬೆಲ್ಸ್' ಕೃತಿ, 'ತಿಲ್ಲಾನ' ಕೃತಿ, 'ರಾಗರಂಗ್' ಸೇರಿದಂತೆ ಅನೇಕ ಕೃತಿಗಳನ್ನು ಪ್ರತ್ಯೇಕವಾಗಿ ನುಡಿಸಿದರು. ಇಂಗ್ಲಿಷ್ ವಾದ್ಯ ವೃಂದದವರು 'ಮಿಷನ್ ಇಂಪಾಸಿಬಲ್...' ಥ್ರಿಲ್ಲರ್ ಆಲ್ಬಂನ 'ಬಿಲ್ಲಿ ಜೀನ್ ಮತ್ತು ಬೀಟ್ ಇಟ್' ಸಂಗೀತವನ್ನು ಉಣಬಡಿಸಿದರು. ವಾದ್ಯಮೇಳದ ನಂತರ ಬಿಗ್‌ಬ್ಯಾಂಡ್, ಮೀಡಿಯಂ ಬ್ಯಾಂಡ್ ಸೇರಿದಂತೆ ವಿವಿಧ ಸ್ಪರ್ಧೆಗಳಲ್ಲಿ ಆಯ್ಕೆಯಾದ ತಂಡಗಳಿಗೆ ಪಾರಿತೋಷಕ ನೀಡಲಾಯಿತು.

ಈ ವೇಳೆ ಗೃಹ ಸಚಿವರೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕ ಎಲ್.ನಾಗೇಂದ್ರ, ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಡಾ.ರಜನೀಶ್ ಗೋಯೆಲ್, ಡಿಜಿಪಿ ಪ್ರವೀಣ್ ಸೂದ್, ಮೈಸೂರು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಅರಗು ಮತ್ತು ಬಣ್ಣದ ಕಾರ್ಖಾನೆ ಅಧ್ಯಕ್ಷ ಆರ್.ರಘು ಕೌಟಿಲ್ಯ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್ ಗೌಡ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್ ಮತ್ತಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.



ರಂಗಗೀತೆಗಳ ರಂಗು: ಇದಕ್ಕೂ ಮುನ್ನ ಸಾಂಸ್ಕೃತಿಕ ವೇದಿಕೆ ರಂಗಗೀತೆಗಳಿಂದ ರಂಗೇರಿತ್ತು. ಟಿ.ಎಸ್.ನಾಗಾಭರಣ ಸಾರಥ್ಯದ 'ಬೆನಕ' ತಂಡದವರು ರಂಗಭೀಷ್ಮ ಬಿ.ವಿ.ಕಾರಂತರ ಭಾವಚಿತ್ರ ಧರಿಸಿ, ಪ್ರಸಿದ್ಧ ರಂಗಗೀತೆಗಳನ್ನು ಹಾಡಿ ರಂಜಿಸಿದರು. ಡೊಳ್ಳು ತಬಲ, ಕಂಸಾಳೆ, ತಮಟೆ, ಹಾರ್ಮೋನಿಯಂ ಇನ್ನಿತರ ದೇಸಿ ವಾದ್ಯಗಳ ಮೇಳದೊಂದಿಗೆ ಉದಯೋನ್ಮುಖ ಸಂಗೀತ ನಿರ್ದೇಶಕ, ಗಾಯಕ ವಾಸುಕಿ ವೈಭವ್ ಸೇರಿದಂತೆ 15ಕ್ಕೂ ಹೆಚ್ಚು ಗಾಯಕರು ರಂಗ ಲಹರಿ ಹರಿಸಿದರು.

'ಉಘೇ ಉಘೇ ಚಾಮುಂಡಾಂಬೆಗೆ' ಎಂದು ಟಿ.ಎಸ್.ನಾಗಾಭರಣ ಉದ್ಘೋಷಿಸುತ್ತಿದ್ದಂತೆ ನೆರೆದಿದ್ದವರು ಹೋ.. ಎಂದು ಪ್ರತಿಕ್ರಿಯಿಸಿದರು. 'ಇಂದಿನ ವಾರ ಶುಭವಾರ,', 'ಗಜವದನ ಹೇ ರಂಬಾ ವಿಜಯಧ್ವಜ..', 'ಶರಣು ಹೇಳೀವಿ ಸ್ವಾಮಿ ನಾವು ನಿಮಗಾ, ಸದ್ದು ಗದ್ದಲ ಮಾಡಬೇಡಿ ಆಟದೊಳಗಾ...', 'ಡೊಂಕು ಬಾಲದ ನಾಯಕರೇ ನೀವೇ ನೂಟವ ಮಾಡುವಿರಿ..' 'ನಗೆಯೂ ಬರುತಿದೆ ಹೋ ಎನಗೆ ನಗೆಯು ಬರುತಿದೆ ಜಗದೊಳಗಿರುವ ಜಾಣರೆಲ್ಲಾ ಹಗರಣ ಮಾಡುವುದಾ ಕಂಡು...', ರಂಗಗೀತೆಗಳನ್ನು ಆಕರ್ಷಕ ಶೈಲಿಯಲ್ಲಿ ಹಾಡಿ ರಂಜಿಸಿದರು.

ಆಹಾರಮೇಳದಲ್ಲಿ ನಾನಾ ಖಾದ್ಯಕ್ಕಾಗಿ ಮುಗಿಬಿದ್ದ ಸವಿಪ್ರಿಯರು

ಜನವೋ ಜನ; ವ್ಯಾಪಾರಿಗಳೂ ಫುಲ್ ಖುಷ್



ಮೈಸೂರು, ಅ.1(ಜಿಎ)– ಆಹಾರ ಮೇಳ ದಿನದಿಂದ ದಿನಕ್ಕೆ ಆಹಾರ ಪ್ರಿಯರನ್ನೂ ತನ್ನತ್ತ ಸೆಳೆಯುತ್ತಿದ್ದು, ಶನಿವಾರವೂ ಕೂಡ ಅಪಾರ ಸಂಖ್ಯೆಯಲ್ಲಿ ಭೇಟಿ ನೀಡಿ ರುಚಿ–ರುಚಿಯಾದ ಆಹಾರವನ್ನು ಸವಿದರು.

ಭಾರತ್ ಸ್ಕೌಟ್ ಮತ್ತು ಗೈಡ್ಸ್ ಮೈದಾನದಲ್ಲಿ ನಡೆಯುತ್ತಿರುವ ದಸರಾ ಆಹಾರ ಮೇಳದಲ್ಲಿ ಬೆಳಗ್ಗಿನಿಂದ ಸಂಜೆವರೆಗೂ ಸಾವಿರಾರು ಸಂಖ್ಯೆಯಲ್ಲಿ ಜನತೆ ಆಗಮಿಸಿ ಬಂಬೂ ಬಿರಿಯಾನಿ, ಮಡಕೆ ಬಿರಿಯಾನಿ, ಕಾಲ್ ಸೂಪ್, ಉತ್ತರ ಕರ್ನಾಟಕದ ಪ್ರಸಿದ್ಧ ಜೋಳದ ರೊಟ್ಟಿ–ಎಣ್ಣೆಗಾಯಿ, ಚಟ್ನಿ ಪುಡಿ, ಗಿರ್ಮಿಟ್, ಮಿರ್ಚಿ ಬಜ್ಜಿ, ದಾವಣಗೆರೆ ಬೆಣ್ಣೆದೋಸೆ, ಬೆಳಗಾವಿ ಕುಂದ ಪೇಡ ಸೇರಿದಂತೆ ಭಾರತದ ವಿವಿಧ ರಾಜ್ಯಗಳ ಶೈಲಿಯ ಆಹಾರ ಪದಾರ್ಥಗಳನ್ನು ಬಾಯಿ ಚಪ್ಪರಿಸಿಕೊಂಡು ತಿಂದು ಸಂತಸ ಪಟ್ಟರು.

ಮಂದಹಾಸ : ಕಳೆದ ಎರಡು ವರ್ಷಗಳಿಂದ ಕೊರೊನಾ ಹಿನ್ನೆಲೆಯಲ್ಲಿ ಆಹಾರ ಮೇಳ ನಡೆದಿರಲಿಲ್ಲ. ಈ ವರ್ಷ ದಸರಾ ಮಹೋತ್ಸವ ಆಹಾರ ಮೇಳವನ್ನು ಆಯೋಜಿಸಿದ್ದು, ಆಹಾರ ಪ್ರಿಯರು ತಮಗಿಷ್ಟವಾದ ಖಾದ್ಯ ಸವಿದು ವಾವ್ ಎನ್ನುತ್ತಿದ್ದರೆ, ವ್ಯಾಪಾರಿಗಳು ಹರಿದು ಬರುತ್ತಿರುವ ಜನಸಾಗರವನ್ನು ಕಂಡು ಹರ್ಷ ವ್ಯಕ್ತಪಡಿಸುತ್ತಿದ್ದಾರೆ.

ನಾವು ಕಳೆದ 12 ವರ್ಷಗಳಿಂದ ಆಹಾರ ಮೇಳದಲ್ಲಿ ಭಾಗವಹಿಸುತ್ತಿದ್ದು, ಪ್ರತಿ ವರ್ಷವೂ ಜನತೆಯಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದೆ ಆದರೆ, ಕಳೆದ ಎರಡು ವರ್ಷ ಆಹಾರ ಮೇಳ ನಡೆದಿರಲಿಲ್ಲ ಈ ಬಾರಿ ಜನತೆಗೆ ಭಾರೀ ನಿರೀಕ್ಷೆ ಇದೆ. ಅದನ್ನು ನಾವು ಪೂರೈಸಲು ಪ್ರಯತ್ನಿಸುತ್ತಿದ್ದೇವೆ ಎಂದು ಬಾಗಲಕೋಟೆ ರೊಟ್ಟಿ ಮಳಿಗೆಯ ಸಾವಿತ್ರಿ ಐಹೊಳ್ಳಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಯಾವ್ಯಾವುದು ಎಷ್ಟು ಪ್ಲೇಟ್ ಮಾರಾಟವಾಗುತ್ತಿದೆ ಎಂಬುದು ಲೆಕ್ಕಕ್ಕೆ ಸಿಗುತ್ತಿಲ್ಲ. ರೊಟ್ಟಿ, ಎಣ್ಣೆಗಾಯಿ, ಚಟ್ನಿ ಪುಡಿ, ಗಿರ್ಮಿಟ್ ಸವಿದವರು ಮೆಚ್ಚುಗೆಯ ಮಾತುಗಳನ್ನಾಡುತ್ತಿದ್ದು, ಕೆಲವರು ಮನೆಗೂ ಪಾರ್ಸೆಲ್ ತೆಗೆದುಕೊಂಡು ಹೋಗುತ್ತಿದ್ದಾರೆ ಎಂದರು.

ಮೇಲುಕೋಟೆ ಪುಳಿಯೋಗರೆ ಮಳಿಗೆಯ ಮಾಲೀಕ ರಮೇಶ್ ಮಾತನಾಡಿ, ನಾವು ಕಳೆದ 6 ವರ್ಷಗಳಿಂದ ದಸರಾ ಆಹಾರ ಮೇಳದಲ್ಲಿ ಮಳಿಗೆಯನ್ನು ಹಾಕುತ್ತಿದ್ದು, ಈ ಬಾರಿ ದಿನಕ್ಕೆ 300ಕ್ಕೂ ಹೆಚ್ಚು ಪ್ಲೇಟ್ ಪುಳಿಯೋಗರೆ ಮಾರಾಟವಾಗುತ್ತಿದೆ. ನಮ್ಮಲ್ಲಿ ಪುಳಿಯೋಗರೆ, ಖಾರ ಪೊಂಗಲ್, ಸಿಹಿ ಪೊಂಗಲ್ ಹಾಗೂ ಮದ್ದೂರು ವಡೆಯನ್ನು ಮಾರಾಟ ಮಾಡುತ್ತಿದ್ದೇವೆ ಕಳೆದ ಬಾರಿ ರುಚಿ ನೋಡಿದ ಕೆಲವರು ಹುಡುಕಿಕೊಂಡು ಬಂದು ತಿನ್ನುತ್ತಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.

ಕಿರುತೆರೆ ಕಲಾವಿದರ ಮೆರುಗು : ಆಹಾರ ಮೇಳ ಉಪಸಮಿತಿ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ 'ಸ್ಟಾರ್ ಸುವರ್ಣ' ಖಾಸಗಿ ವಾಹಿನಿಯ ಧಾರಾವಾಹಿಗಳ ಕಲಾವಿದರು ಧಾರಾವಾಹಿ ಸಂಬಂಧ ಜನತೆ ಕೇಳಿದ ಕೆಲ ಪ್ರಶ್ನೆಗಳಿಗೆ ಉತ್ತರಿಸಿದರು. ಜೊತೆಗೆ ಸಿಹಿ ಕಹಿ ಚಂದ್ರು ಆಹಾರ ಪ್ರಿಯರನ್ನು ನಗೆಗಡಲಿನಲ್ಲಿ ತೇಲಿಸಿ ಮೇಳಕ್ಕೆ ವಿಶೇಷ ಮೆರುಗು ತಂದರು.

ಹೆಬ್ಬಾಳು ದಸರಾ ಉತ್ಸವಕ್ಕೆ ಸಂಭ್ರಮದ ಚಾಲನೆ

● ಮನರಂಜನೆಯ ಆಟೋಟ, ಸಾಂಸ್ಕೃತಿಕ ಕಾರ್ಯಕ್ರಮ, ಕ್ರೀಡಾ ಚಟುವಟಿಕೆಯಲ್ಲಿ ಮಕ್ಕಳು, ಮಹಿಳೆಯರು, ಹಿರಿಯ ನಾಗರಿಕರು ಉತ್ಸಾಹದಿಂದ ಭಾಗಿ ● ಮೈಸೂರು ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್ ವಿನೂತನ ಚಿಂತನೆ ಸಾಕಾರಕ್ಕೆ ಅಭೂತಪೂರ್ವ ಸ್ಪಂದನೆ







ಮೈಸೂರು, ಅ.1(ಪಿಎಂ)– ಮನರಂಜನೆಯ ಆಟೋಟಗಳು, ಸಾಂಸ್ಕೃತಿಕ ಸಡಗರ, ಕ್ರೀಡಾ ಚಟುವಟಿಕೆ ಮತ್ತು ಯುವ ದಸರಾ ಮಾದರಿಯ ಗಾಯನ ಸೇರಿದಂತೆ ವೈವಿಧ್ಯಮಯ ಕಾರ್ಯಕ್ರಮಗಳೊಂದಿಗೆ ಇದೇ ಪ್ರಥಮ ಬಾರಿಗೆ ಆಯೋಜಿಸಿರುವ ಎರಡು ದಿನಗಳ ಹೆಬ್ಬಾಳು ದಸರಾ ಉತ್ಸವಕ್ಕೆ ಶನಿವಾರ ಸಂಭ್ರಮದ ಚಾಲನೆ ದೊರೆಯಿತು.



ಹೆಬ್ಬಾಳು ಗ್ರಾಮದ ಶ್ರೀಮಂತ ಪರಂಪರೆ ಪ್ರತಿಬಿಂಬಿಸಲು ಮತ್ತು ದಸರಾ ವೈಭವವು ಹೆಬ್ಬಾಳು ಮತ್ತು ಇದರ ಸುತ್ತಮುತ್ತ ಪ್ರದೇಶದಲ್ಲೂ ಕಳೆಗಟ್ಟುವ ಮೂಲಕ ಇಲ್ಲಿನ ಜನತೆಗೂ ದಸರಾ ಸಂಭ್ರಮ ಉಣಬಡಿಸುವ ಸದುದ್ದೇಶದಿಂದ ಹೆಬ್ಬಾಳು ದಸರಾ ಉತ್ಸವ ಹಮ್ಮಿಕೊಳ್ಳಲಾಗಿದೆ. ಮೈಸೂರು ಮಹಾನಗರ ಪಾಲಿಕೆ ಸದಸ್ಯರೂ ಆದ ಹೆಬ್ಬಾಳಿನ ಮುಖಂಡ, ಜೆಡಿಎಸ್ ನಾಯಕ ಕೆ.ವಿ.ಶ್ರೀಧರ್ ನೇತೃತ್ವದಲ್ಲಿ ಹೆಬ್ಬಾಳು ದಸರಾಗೆ ಈ ವರ್ಷದಿಂದ ಚಾಲನೆ ಸಿಕ್ಕಿದೆ.

ಕೆ.ವಿ.ಶ್ರೀಧರ್ ಸಾರಥ್ಯದ ನವಭಾರತ ನಿರ್ಮಾಣ್ ಸೇವಾ ಟ್ರಸ್ಟ್ ವತಿಯಿಂದ ಇಂತಹ ಬೃಹತ್ ಉತ್ಸವ ನಡೆಯುತ್ತಿದ್ದು, ಮೈಸೂರಿನ ವಿಜಯನಗರದ ರೈಲ್ವೆ ಲೇಔಟ್ ಮೈದಾನದಲ್ಲಿ ಹಮ್ಮಿಕೊಂಡಿರುವ ಹೆಬ್ಬಾಳು ದಸರಾದಲ್ಲಿ ಇಂದು ಮಕ್ಕಳು, ಮಹಿಳೆಯರು ಹಾಗೂ ಹಿರಿಯ ನಾಗರಿಕರು ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಉತ್ಸಾಹ ಮೆರೆದರು. ಮ್ಯೂಸಿಕಲ್ ಚೇರ್, ಹಗ್ಗ–ಜಗ್ಗಾಟ, ಓಟ, ಮಕ್ಕಳ ಫ್ಯಾನ್ಸಿ ಡ್ರೆಸ್, ಗುಂಡು ಎಸೆತ, ರಂಗೋಲಿ ಸ್ಪರ್ಧೆ, ಏಕಪಾತ್ರಾಭಿನಯ, ಮಕ್ಕಳ ವೇಷಭೂಷಣ ಸ್ಪರ್ಧೆ ಸೇರಿದಂತೆ ವೈವಿಧ್ಯಮಯ ಕಾರ್ಯಕ್ರಮಗಳಲ್ಲಿ 500ಕ್ಕೂ ಹೆಚ್ಚು ಮಂದಿ ಪಾಲ್ಗೊಂಡು ಸಂಭ್ರಮಿಸಿದರು.

ಇದಕ್ಕೂ ಮುನ್ನ ಹೆಬ್ಬಾಳು ದಸರಾ ಉತ್ಸವಕ್ಕೆ ಚಾಲನೆ ನೀಡಿದ ಕೆ.ವಿ.ಶ್ರೀಧರ್ ಮಾತನಾಡಿ, ಹೆಬ್ಬಾಳು ಐತಿಹಾಸಿಕ ಗ್ರಾಮ. ಮೈಸೂರಿನ ಅತ್ಯಂತ ಪುರಾತನ ಪರಂಪರೆ ಹೊಂದಿದೆ. ಹೆಬ್ಬಾಳಿನ ಶ್ರೀ ಲಕ್ಷ್ಮಿಕಾಂತ ಸ್ವಾಮಿ ದೇವಸ್ಥಾನ ಒಳಗೊಂಡಂತೆ ಇಲ್ಲಿನ ಆಸುಪಾಸು ಹೆಬ್ಬಾಳಿನ ಮೂಲಗ್ರಾಮ. ಕುಂಬಾರಕೊಪ್ಪಲು, ಲಕ್ಷ್ಮೀಕಾಂತನಗರ, ಮಂಚೇಗೌಡನಕೊಪ್ಪಲು, ಲೋಕನಾಯಕ ನಗರ, ಮೇಟಗಳ್ಳಿ ಹಾಗೂ ವಿಜಯನಗರ (ಭಾಗಶಃ) ಈ ಎಲ್ಲಾ ಪ್ರದೇಶಗಳು ನಿರ್ಮಾಣಗೊಳ್ಳಲು ಮೂಲ ಹೆಬ್ಬಾಳು. ಹೀಗಾಗಿ ಈ ಎಲ್ಲವನ್ನೂ ಒಗ್ಗೂಡಿಸಿ, ಹಿಂದಿನ ಶ್ರೀಮಂತಿಕೆಯ ಹೆಬ್ಬಾಳು ಪ್ರತಿಬಿಂಬಿಸಲು ಈ ದಸರಾ ಉತ್ಸಾಹ ಆಯೋಜಿಸಲಾಗಿದೆ ಎಂದು ಹೇಳಿದರು.

ಈ ಹೆಬ್ಬಾಳು ಗ್ರಾಮದಲ್ಲಿ ಕಾಲಕ್ರಮೇಣ ರೋಗ–ರುಜಿನಗಳು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಗ್ರಾಮಸ್ಥರು ವಲಸೆ ಹೋದ ಕಾರಣ ಕುಂಬಾರಕೊಪ್ಪಲು, ಮಂಚೇಗೌಡನ ಕೊಪ್ಪಲು ಮೊದಲಾದ ಗ್ರಾಮಗಳು ತಲೆ ಎತ್ತಿದವು. ಇದೀಗ ಹೆಬ್ಬಾಳು ಒಂದು ಬಡಾವಣೆಯಾಗಿ ಉಳಿದಿದೆ. ಮಂಡ್ಯ, ಚಾಮರಾಜನಗರ, ಹಾಸನ, ಬೆಂಗಳೂರು ಸೇರಿದಂತೆ ವಿವಿಧ ಜಿಲ್ಲೆಗಳಿಂದ ಬಂದ ಜನತೆ ಹೆಬ್ಬಾಳಿನಲ್ಲಿ ಬದುಕು ಕಂಡುಕೊಂಡಿದ್ದಾರೆ. ವಿವಿಧ ಸಮುದಾಯಗಳು ಇಲ್ಲಿ ಸಾಮರಸ್ಯದಿಂದ ಬದುಕುತ್ತಿವೆ. ಇಲ್ಲಿ ಯಾವುದೇ ಧರ್ಮ–ಜಾತಿ ಆಧಾರದಲ್ಲಿ ಸಂಘರ್ಷ ನಡೆದಿಲ್ಲ. ಸೌಹಾರ್ದತೆಗೆ ಹೆಬ್ಬಾಳು ಹೆಸರಾಗಿದೆ ಎಂದು ತಿಳಿಸಿದರು.

ಮೈಸೂರು ಹೃದಯಭಾಗಕ್ಕೆ ದಸರಾ ಸೀಮಿತ: ಮೈಸೂರು ದಸರಾ ಕೇವಲ ನಗರದ ಹೃದಯಭಾಗಕ್ಕೆ ಸೀಮಿತಗೊಳ್ಳುತ್ತಿದೆ. ಎಷ್ಟೇ ಅದ್ಧೂರಿ ದಸರಾ ಆಯೋಜಿಸಿದರೂ ಅದು ನಗರ ಮಧ್ಯೆ ಭಾಗದಿಂದ ಹೊರ ಬರುತ್ತಿಲ್ಲ. ನಗರದ ಎಲ್ಲಾ ಭಾಗಗಳು ಹಾಗೂ ಜಿಲ್ಲೆಯ ಮೂಲೆ ಮೂಲೆಯಲ್ಲಿ ಅದರ ಸಂಭ್ರಮ ವ್ಯಾಪಿಸಿಲ್ಲ. ಅದ್ಧೂರಿ ದಸರಾ ಎಂದರೆ ಮೈಸೂರು ನಗರ ಸೇರಿದಂತೆ ಜಿಲ್ಲೆಯ ಮೂಲೆ ಮೂಲೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಬೇಕಿತ್ತು ಎಂದರು.

ನಾಳೆ (ಅ.2) ಸಂಜೆ 6ಕ್ಕೆ ಖ್ಯಾತ ಗಾಯಕ, ರ‍್ಯಾಪರ್, ನಟ ಅಲೋಕ್ ಆರ್.ಬಾಬು ಅವರಿಂದ ಸಂಗೀತ ಸಂಜೆ ಏರ್ಪಡಿಸಿದ್ದು, ಇದು ಯುವ ದಸರಾ ಮಾದರಿಯಲ್ಲಿ ನಡೆಯುವ ವಿಶೇಷ ಕಾರ್ಯಕ್ರಮ ಎಂದು ಕೆ.ವಿ.ಶ್ರೀಧರ್ ತಿಳಿಸಿದರು. ಹೆಬ್ಬಾಳಿನ ಮುಖಂಡರಾದ ಬಿಳಿಗೌಡ, ರಾಮಚಂದ್ರ, ಪುಟ್ಟರಾಜ್, ರೋಹಿತ್ ಸೇರಿದಂತೆ ಹೆಬ್ಬಾಳು ಹಾಗೂ ಇಲ್ಲಿನ ಸುತ್ತಮುತ್ತಲ ಪ್ರದೇಶಗಳ ನಾಗರಿಕರು ಪಾಲ್ಗೊಂಡಿದ್ದರು.


ಪ್ರತಿ ವರ್ಷ ಹೆಬ್ಬಾಳು ದಸರಾ ಉತ್ಸವ...


ಸ್ನೇಹಿತರು, ಹಿತೈಷಿಗಳು ಸೇರಿ ಹೆಬ್ಬಾಳು ದಸರಾ ಉತ್ಸವವೆಂಬ ಬೃಹತ್ ಕಾರ್ಯಕ್ರಮ ಆಯೋಜಿಸಲಾಗಿದೆ. ಪ್ರತಿವರ್ಷ ಇನ್ನೂ ದೊಡ್ಡ ಮಟ್ಟದಲ್ಲಿ ಇದನ್ನು ಮುಂದುವರೆಸಲು ಉದ್ದೇಶಿಸಲಾಗಿದೆ. ಮೈಸೂರಿನ ವಿವಿಧ ಭಾಗಗಳಲ್ಲೂ ಈ ರೀತಿಯ ಕಾರ್ಯಕ್ರಮ ನಡೆಸಬೇಕು. ಆ ನಿಟ್ಟಿನಲ್ಲಿ ಇದೊಂದು ಪ್ರೇರಣೆಯಾಗಲಿ ಎಂಬ ಆಶಯ ಹೊಂದಲಾಗಿದೆ. ನಾಳೆ (ಅ.2) ಎಲ್ಲಾ ಸ್ಪರ್ಧೆಗಳ ವಿಜೇತರಿಗೆ ಪ್ರಥಮ, ದ್ವಿತೀಯ, ತೃತೀಯ ಮತ್ತು ಸಮಾಧಾನಕರ ಬಹುಮಾನ ನೀಡಲಾಗುವುದು. ವಿಶೇಷವೆಂದರೆ ಇಂದು 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಮತ್ತು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

-ಕೆ.ವಿ.ಶ್ರೀಧರ್

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com


ಭಾರತ್ ಜೋಡೊ ಐಕ್ಯತಾ ಪಾದಯಾತ್ರೆಗೆ
ಆಗಮಿಸುತ್ತಿರುವ ಎಲ್ಲಾ ಕಾಂಗ್ರೆಸ್ ಮುಖಂಡರುಗಳಿಗೆ ಸುಸ್ವಾಗತ
ಹೊಸಹುಂಡಿ ರಘು
ಎ.ಪಿ.ಎಂ.ಸಿ ಮಾಜಿ ಅಧ್ಯಕ್ಷರು ಮೈಸೂರು
ಹಾಗೂ ಕಾಂಗ್ರೆಸ್ ಮುಖಂಡರು
ಡಾ. ಹೆಚ್.ಸಿ.ಕೃಷ್ಣಕುಮಾರ್ ಸಾಗರ್
ಅಭಿಮಾನಿ ಬಳಗ, ಚಾಮುಂಡೇಶ್ವರಿ ಕ್ಷೇತ್ರ, ಮೈಸೂರು


Azadi Ka Amrit Mahotsav
Government of India
2 ಅಕ್ಟೋಬರ್
ಗಾಂಧೀಜಿ ಮತ್ತು ಶಾಸ್ತ್ರೀಜಿ
ಅವರ ಜಯಂತಿಯಂದು ಅವರಿಗೆ
ರಾಷ್ಟ್ರವು ಗೌರವ ನಮನ ಸಲ್ಲಿಸುತ್ತದೆ
ಪೂಜ್ಯ ಬಾಪು ಅವರ ಜೀವನ ಮತ್ತು ಆದರ್ಶಗಳು ದೇಶದ ಪ್ರತಿ ಪೀಳಿಗೆಯನ್ನು ಕರ್ತವ್ಯದ ಹಾದಿಯಲ್ಲಿ ನಡೆಯುವಂತೆ ಪ್ರೇರೇಪಿಸುತ್ತಲೇ ಇರುತ್ತವೆ. ಅಂತೆಯೇ, ಮೌಲ್ಯಗಳು ಮತ್ತು ತತ್ವಗಳ ಆಧಾರದ ಮೇಲೆ ರೂಪುಗೊಂಡ ಶಾಸ್ತ್ರೀಜಿಯವರ ಜೀವನವು ದೇಶವಾಸಿಗಳಿಗೆ ಎಂದೆಂದೂ ಸ್ಫೂರ್ತಿಯ ಸೆಲೆಯಾಗಿರುತ್ತದೆ.
- ನರೇಂದ್ರ ಮೋದಿ
CBC 22201/13/0123/2223


ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು
ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು
"ನನ್ನ ಜೀವನವೇ ನನ್ನ ಸಂದೇಶ."
- ಮಹಾತ್ಮ ಗಾಂಧಿ
ಮಹಾತ್ಮ ಗಾಂಧಿಯವರ 154ನೇ ಜನ್ಮದಿನಾಚರಣೆ
ಹಾಗೂ
ಗಾಂಧಿ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭ
ಅಕ್ಟೋಬರ್ 2, 2022 । ಬೆಳಗ್ಗೆ 11.00 ಗಂಟೆಗೆ
ಸ್ಥಳ: ಗಾಂಧಿ ಭವನ, ಕುಮಾರ ಕೃಪಾ ರಸ್ತೆ, ಬೆಂಗಳೂರು
ನಮ್ಮ ಬದುಕುವ ರೀತಿ ಇತರರಿಗೆ ಆದರ್ಶಪ್ರಾಯವಾಗಬೇಕು ಎಂಬ ತತ್ವದಲ್ಲಿ ಗಾಂಧೀಜಿ ನಂಬಿಕೆಯಿಟ್ಟಿದ್ದರು. ಗಾಂಧೀಜಿಯವರ ಆದರ್ಶಗಳಿಂದ ಪ್ರೇರಿತರಾಗಿ ಅವರ ಹೆಜ್ಜೆಯಲ್ಲಿ ನಡೆಯುವುದೇ ನಾವು ಅವರಿಗೆ ಸಲ್ಲಿಸುವ ಗೌರವ.
ನಾಡಿನ ಜನತೆಗೆ ಗಾಂಧಿ ಜಯಂತಿಯ ಶುಭಾಶಯಗಳು.
- ಬಸವರಾಜ ಎಸ್. ಬೊಮ್ಮಾಯಿ
"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ
ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ



ದಸರಾ ಪ್ರಾದೇಶಿಕ ಕವಿಗೋಷ್ಠಿ ; ಕವಿಗಳ ಸ್ಮೃತಿಯಲ್ಲಿದ್ದ ಕಳಕಳಿ ಚಿಂತನೆ ಅನಾವರಣ

● ಅಮ್ಮನ ಅಕ್ಕರೆ, ಪ್ರಕೃತಿ ಸಂರಕ್ಷಣೆಯ ಅರಿವು, ಅನ್ನದಾತನ ಪರಿಶ್ರಮ, ಸಮಾಜ ಸುಧಾರಕರ ಸಂದೇಶ ಕವಿತೆಯ ಸಾಲುಗಳಲ್ಲಿ ಸಂಗಮ ● ಕವಿತೆಯಲ್ಲೂ ಹೃದಯವಂತ ಪುನೀತ್ ರಾಜ್‌ಕುಮಾರ್ ಸ್ಮರಣೆ

ಮೈಸೂರು,ಅ.1(ಪಿಎಂ)– ಅಮ್ಮನ ಅಕ್ಕರೆ, ಅವ್ವನ ಮಮತೆಯ ಗುಣಗಾನದ ಸಾಲುಗಳು, ಪ್ರಸ್ತುತ ಸಮಾಜವನ್ನು ಕಾಡುತ್ತಿರುವ ನಾನಾ ಪಿಡುಗುಗಳ ವಿರುದ್ಧ ಕಿಡಿನುಡಿ, ಪ್ರಕೃತಿ ಸಂರಕ್ಷಣೆಯ ಅರಿವಿನ ಕೂಗು, ಅನ್ನದಾನದ ಪರಿಶ್ರಮದ ಚಿತ್ರಣ ಹಾಗೂ ಸಮಾಜ ಸುಧಾರಕರ ಸ್ಮರಣೆ ಹೀಗೆ ಅಲ್ಲಿ ನೆರೆದಿದ್ದ ಕವಿಗಳಿಂದ ಅವರ ಸ್ಮೃತಿಯಲ್ಲಿದ್ದ ಕಳಕಳಿಯ ಚಿಂತನೆಗಳು ಕವಿತೆಗಳಾಗಿ ಹೊರಹೊಮ್ಮಿದವು.

ಮೈಸೂರಿನ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಮೈಸೂರು ದಸರಾ ಪ್ರಾದೇಶಿಕ ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದ 40ಕ್ಕೂ ಹೆಚ್ಚು ಕವಿಗಳು ಹೀಗೆ ತಮ್ಮ ತಮ್ಮ ಕವಿತೆಗಳನ್ನು ವಾಚಿಸಿ ಗಮನ ಸೆಳೆದರು.

ಅಮ್ಮ ತನ್ನ ಕಂದಮ್ಮನಲ್ಲಿ ಹೊಂದಿರುವ ಕಾಳಜಿ–ಮಮತೆ–ಪ್ರೀತಿಯ ಕುರಿತು ಡಾ.ಎನ್.ಎಸ್.ಅನ್ನಪೂರ್ಣ 'ಅಮ್ಮನ ಹೆಬ್ಬೆರಳು' ಶೀರ್ಷಿಕೆಯ ಕವಿತೆ ವಾಚಿಸಿ ತಾಯಿಯ ಮಹತ್ವ ಸಾರಿದರು. 'ಅಮ್ಮನ ಹೆಬ್ಬೆರಳು... ಚೇಷ್ಟೆ ಹೆಚ್ಚಾದಾಗ ಚಿವುಟಿ... ಒಳಶುಂಟಿ ಕೊಟ್ಟು... ರಸ್ತೆದಾಟುವಾಗ ಆಸರೆಯ ಗಟ್ಟಿ ಮುಷ್ಠಿಗೆ ಒಳಹೊಕ್ಕು... ಅಪ್ಪನ ಬೆವರಿನ ಹಣವ ಗಣಿತವಿಲ್ಲದೇ ಎಣಿಸಿ ಉಳಿಸಿ... ತುತ್ತುಣಿಸಿ ನಮ್ಮೆಲ್ಲರ ತಣಿಸಿ ತೂಗಿದಾ ಕೈ ಬೆರಳು...' ಎಂಬಿತ್ಯಾದಿ ಸಾಲುಗಳ ಮೂಲಕ ಅಮ್ಮನ ಆರೈಕೆಯ ಚಿತ್ರಣವನ್ನು ಅಕ್ಷರದಲ್ಲಿ ಹೆಣೆದು ಪುಳಕವಿಟ್ಟರು.

ಅತಿಥಿ ಉಪನ್ಯಾಸಕ ಡಾ.ಚಂದ್ರಗುಪ್ತ ತಮ್ಮ ಕವಿತೆಯಲ್ಲಿ ಮಹನೀಯರ ಸ್ಮರಿಸುವ ಮಹತ್ವವನ್ನು ಸಭಿಕರ ಮುಂದಿಟ್ಟರು. 'ಮಹಾತ್ಮರನ್ನು ನೆನೆಯಿರೋ' ಶೀರ್ಷಿಕೆಯಡಿ ಕವಿತೆ ವಾಚಿಸಿದ ಅವರು, 'ನೆನೆಯಿರೋ ಸ್ಮರಿಸಿರೋ, ಮಾನವತೆ ಮೆರೆಯಿರೋ... ಸಮಸಮಾಜ ನಿರ್ಮಾಣಕ್ಕೆ ಬುದ್ಧ ತತ್ವ ಬಿತ್ತಿರೋ... ಬುದ್ಧರ ಸನ್ಮಾರ್ಗ ಪಥ... ಬಸವಣ್ಣನ ಕಲ್ಯಾಣ ಪಥ... ನಾಲ್ವಡಿಯವರ ರಾಜಪಥ... ಅಂಬೇಡ್ಕರರ ಜ್ಞಾನಪಥ... ಕುವೆಂಪು ಅವರ ವಿಶ್ವಪಥ... ಸ್ಮರಿಸಿರೋ...'



ಎನ್ನುವ ಕವನದ ಮೂಲಕ ಸಮಾಜ ಸುಧಾರಣೆಗೆ ಮಹಾತ್ಮರು ನೀಡಿದ ತತ್ವಾದರ್ಶ ಅನಾವರಣಗೊಳಿಸಿದರು.

'ಮಣ್ಣಿನ ಮಗ' ಶೀರ್ಷಿಕೆಯ ಕವಿತೆ ಮೂಲಕ ಜಲಾ ಕಾಳಪ್ಪ, ಅನ್ನದಾನದ ಅಪರಿಮಿತ ಪರಿಶ್ರಮವನ್ನು ಕಣ್ಮುಂದೆ ತಂದರು. 'ಮಳೆ ಬಿಸಿಲೆನ್ನದೆ ಬೆವರ ಹರಿಸಿ.. ಬಿತ್ತುವನು ಬೆಳೆಯ ಮಣ್ಣಿನ ಮಗ... ಒಪ್ಪತ್ತು ಉಂಡು ಕಷ್ಟದಲ್ಲಿ ನೂಕುವನು ಸಂಸಾರದ ನೊಗ... ಪ್ರಕೃತಿ ಮಾತೆ ಮುನಿದರೆ ಬೆಳೆದ ಬೆಳೆ ಸರ್ವನಾಶ.. ಮಾಡಿದ ಸಾಲ ತೀರಿಸಲು ಪಡುವನು ಹರಸಾಹಸ.. ನಿರಾಶೆ ಬೇಸರದಿಂದ ಅನ್ನದಾತ... ಕೊನೆಗೆ ಹಾಕಿಕೊಳ್ಳುವನು ಕೊರಳಿಗೆ ಪಾಶ.. ಮೂಡಿಬರಲಿ ಅನ್ನದಾತನ ಮೊಗದಲ್ಲಿ ವಿಶ್ವಾಸದ ಅಲೆ...' ಎಂಬುದೂ ಸೇರಿದಂತೆ ಇನ್ನು ಅನೇಕ ಸಾಲುಗಳಲ್ಲಿ ಅನ್ನದಾತನ ಕಷ್ಟಕಾರ್ಪಣ್ಯ ಕಟ್ಟಿಕೊಟ್ಟರು.

ಡಾ.ಅನ್ನಪೂರ್ಣ ಹಿರೇಮಠ ತಮ್ಮ 'ಕಾಪಾಡು ಶಿವಹರನೆ' ಕವಿತೆ ಮೂಲಕ ನಮ್ಮ ದೇಶದಲ್ಲಿನ ಭ್ರಷ್ಟಾಚಾರದ ವಿರುದ್ಧ ವಾಕ್ಸಮರ ನಡೆಸಿದರು. 'ಆರ್ಭಟ' ಕವನದ ಮೂಲಕ ಉಮೇಶ ಬಾಬುಮಠದ ಅವರು, ಮಾನವ ಸ್ವಾರ್ಥದಿಂದ ಪ್ರಕೃತಿ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಕಟುನುಡಿಗಳಲ್ಲಿ ಖಂಡಿಸಿದರು. ಗಣೇಶ್ ನಿಲುವಾಗಿಲು ತಮ್ಮ ಕವಿತೆ 'ಲಕ್ಷ್ಮಣ ತೀರ್ಥ ನದಿ' ವಾಚಿಸಿ ಈ ಜೀವನದಿಯ ಉಪಯುಕ್ತೆ ಹಾಗೂ ಅದರ ಪ್ರಾಕೃತಿಕ ಸೌಂದರ್ಯದ ಪ್ರತಿಬಿಂಬ ಮೂಡಿಸಿದರು.

ಕವಿಗೋಷ್ಠಿಯಲ್ಲೂ ಪುನೀತನ ಪುಣ್ಯಸ್ಮರಣೆ!: ಇತ್ತೀಚೆಗೆ ನಿಧನ ಹೊಂದಿದ ನಟ ಪುನೀತ್ ರಾಜ್‌ಕುಮಾರ್ ಅವರ ಸ್ಮರಣೆಯ ಸಾಲುಗಳು 'ಹೃದಯವಂತ' ಶೀರ್ಷಿಕೆಯಡಿ ಮೂಡಿಬಂದಿತು. ಪ್ರೇಮಾ ಮಾದಪ್ಪ ತಮ್ಮ ಕವಿತೆ ಸಾಲುಗಳಲ್ಲಿ ಪುನೀತನ ಪುಣ್ಯಸ್ಮರಣೆ ಮಾಡಿದರು. 'ಪುನೀತ ರಾಜಕುಮಾರ ಬದುಕಿ ಬಾಳುವ ವಯಸ್ಸು... ಬಾರದ ಊರಿಗೆ ಹೋದೆಯಾ...' ಎಂಬಿತ್ಯಾದಿ ಮನಕಲುಕುವ ಸಾಲುಗಳಿಂದ ಭಾವನಾತ್ಮಕವಾಗಿ ಕರುನಾಡಿನ ನೆಚ್ಚಿನ ನಟನ ಸ್ಮರಿಸಿದರು.

'ಮತ್ತೆ ಬಾ ಬುದ್ಧ' ಕವಿತೆ ಮೂಲಕ ಬಸವರಾಜ ದಯಾ ಸಾಗರ, ನಾಡಿನಲ್ಲಿ ಬುದ್ಧನ ಬೆಳಕು ಮತ್ತೆ ಮೂಡಬೇಕೆಂದು ಅಭಿಮತ ವ್ಯಕ್ತಪಡಿಸಿದರು. 'ಶಾಂತಿ ಸಾರಿದ ನಾಡಿಂದು ಅಶಾಂತಿಯಲ್ಲಿ ನಲುಗುತ್ತಿದೆ... ಸರ್ವ ಧರ್ಮೀಯರು ಪ್ರೀತಿಯ ಸಂದೇಶ ಸಾರಬೇಕಿದೆ...' ಎಂದು ಕವಿತೆ ಮೂಲಕ ಶಾಂತಿ–ಸಾಮರಸ್ಯದ ಅಗತ್ಯತೆಯನ್ನು ಒತ್ತಿ ಹೇಳಿದರು.

ಶಾಸಕ ಸಿ.ಎಸ್.ನಿರಂಜನ್‌ಕುಮಾರ್ ಕಾರ್ಯಕ್ರಮಕ್ಕೆ ಭೇಟಿ ನೀಡಿದ್ದರು. ಇದಕ್ಕೂ ಮುನ್ನ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಕವಿಗೋಷ್ಠಿ ಉದ್ಘಾಟಿಸಿದರು. ಖ್ಯಾತ ಕವಿ ಡಾ.ಯಲ್ಲಪ್ಪ ಕೆ.ಕೆ.ಪುರ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಖ್ಯಾತ ಕವಯಿತ್ರಿ ನೂತನ ದೋಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಬಿಜೆಪಿ ಮುಖಂಡರಾದ ಅಪ್ಪಣ್ಣ ಬಿ.ಎಂ.ರಘು, ದಸರಾ ಕವಿಗೋಷ್ಠಿ ಉಪಸಮಿತಿಯ ಉಪವಿಶೇಷಾಧಿಕಾರಿ ಡಾ.ಎಂ.ದಾಸೇಗೌಡ, ಕಾರ್ಯಾಧ್ಯಕ್ಷ ಡಾ.ಎಂ.ಜಿ.ಮಂಜುನಾಥ್, ಉಪಾಧ್ಯಕ್ಷೆ ರಾಜಮಣಿ ಮತ್ತಿತರರು ಹಾಜರಿದ್ದರು.

ಕವಿತೆ ಆಲಿಸುವುದು ಆಸಕ್ತಿದಾಯಕ ; ಸಚಿವ ಎಸ್.ಟಿ.ಸೋಮಶೇಖರ್

ಮೈಸೂರು,ಅ.1(ಪಿಎಂ)– ಕವಿಗಳು ವಾಚಿಸುವ ಕವಿತೆಗಳನ್ನು ಆಲಿಸುವುದು ಅದೃಷ್ಟ ಹಾಗೂ ಆಸಕ್ತಿದಾಯಕ ವಿಚಾರ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ದಸರಾ ಪ್ರಾದೇಶಿಕ ಕವಿಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಕವಿಗೋಷ್ಠಿಯಲ್ಲಿ ಅನೇಕ ಕವಿಗಳು ಉತ್ತಮ ಕವಿತೆಗಳನ್ನು ವಾಚನ ಮಾಡುತ್ತಿದ್ದಾರೆ. ಇಂತಹ ಕವಿತೆಗಳನ್ನು ಆಲಿಸುವುದೊಂದು ಸುವರ್ಣಾವಕಾಶ. ಕೆಲವರಿಗೆ ಮಾತ್ರ ಕೇಳುವ ಈ ಅವಕಾಶ ಸಿಗುತ್ತದೆ ಎಂದರು.

ನಾನು ಬಿಡುವು ಮಾಡಿಕೊಂಡು ಕೇಳಬೇಕು ಅನಿಸುತ್ತಿದೆ. ಆದರೆ ಕಾರ್ಯದೊತ್ತಡದಿಂದ ಹೆಚ್ಚು ಕವಿತೆಗಳನ್ನು ಕೇಳಲಾಗುತ್ತಿಲ್ಲ. ಕವಿಗೋಷ್ಠಿಯಲ್ಲಿ ಆಸಕ್ತಿದಾಯಕವಾದ ಕವಿತೆಗಳನ್ನು ವಾಚಿಸುತ್ತಿರುವುದು ನಾಡಹಬ್ಬ ದಸರಾ ಮೆರಗು ಹೆಚ್ಚಿಸಿದೆ. ಕಾರ್ಯಕ್ರಮವು ಅಚ್ಚುಕಟ್ಟಾಗಿ ಮೂಡಿಬರುತ್ತಿದ್ದು, ಬಹಳ ವ್ಯವಸ್ಥಿತವಾಗಿ ಪ್ರತಿಯೊಂದು ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯದಲ್ಲಿ ಜೀವನೋತ್ಸಾಹವಿದೆ ; ಖ್ಯಾತ ಕವಿ ಡಾ.ಯಲ್ಲಪ್ಪ ಕೆ.ಕೆ.ಪುರ

ಮೈಸೂರು,ಅ.1(ಪಿಎಂ)– ಕನ್ನಡ ಸಾಹಿತ್ಯ ಜೀವನೋತ್ಸಾಹ ತರಲಿದ್ದು, ಅಂತಹ ಜೀವಸತ್ವ ಕನ್ನಡ ಸಾಹಿತ್ಯಕ್ಕಿದೆ ಎಂದು ಖ್ಯಾತ ಕವಿ ಡಾ.ಯಲ್ಲಪ್ಪ ಕೆ.ಕೆ.ಪುರ ಅಭಿಪ್ರಾಯಪಟ್ಟರು.

ದಸರಾ ಪ್ರಾದೇಶಿಕ ಕವಿಗೋಷ್ಠಿಯಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಕನ್ನಡ ಸಾಹಿತ್ಯದಲ್ಲಿನ ಆಸಕ್ತಿಯಿಂದ ನಾನು ಬದುಕಿದ್ದು, ಇಲ್ಲವಾಗಿದ್ದರೆ ಎಂದೂ ಮರೆಯಾಗುತ್ತಿದ್ದೆ. ಕನ್ನಡ ಸಾಹಿತ್ಯ ಓದುವುದರಿಂದ ಚೈತನ್ಯ ಉಂಟಾಗಲಿದ್ದು, ಬದುಕಲು ಭರವಸೆ ಮೂಡುತ್ತದೆ ಎಂದು ಹೇಳಿದರು.

ಕವಿ ನಿಜವಾದ ಶಾಸನಕಾರ: ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಇತಿಹಾಸವಿದ್ದು, ಜಗದಗಲ–ಮುಗಿಲಗಲ ಕನ್ನಡ ಸಾಹಿತ್ಯ ಪರಂಪರೆ ಬೆಳೆದು ನಿಂತಿದೆ. ಮನೆ ಮನೆಗಳಲ್ಲಿ ಕವಿಗಳು ಹುಟ್ಟಬೇಕು. ಏಕೆಂದರೆ ಕವಿ ನಿಜವಾದ ಶಾಸನಕಾರ. ಕವಿ ಮನಸ್ಸು ಇದ್ದವರಿಗೆ ಹೃದಯ ವೈಶಾಲ್ಯತೆ ಇರುತ್ತದೆ. ಪ್ರತಿಯೊಂದು ಮನೆಯಲ್ಲಿ ಕವಿ ಹುಟ್ಟುವ ಮೂಲಕ ಕನ್ನಡ ನಾಡು, ಪರಂಪರೆ ಮತ್ತಷ್ಟು ಬೆಳೆಯಬೇಕಿದೆ ಎಂದು ಡಾ.ಯಲ್ಲಪ್ಪ ಕೆ.ಕೆ.ಪುರ ಆಶಯ ವ್ಯಕ್ತಪಡಿಸಿದರು.

ಮೈಸೂರಿನ ರಸ್ತೆಗಳಲ್ಲಿ ವಿಂಟೇಜ್ ಕಾರುಗಳ ಆಕರ್ಷಕ ರ್‍ಯಾಲಿ

ಮೈಸೂರು, ಅ. 1(ಆರ್‌ಕೆ)– ದಸರಾ ಮಹೋತ್ಸವದ ಅಂಗವಾಗಿ ಮೈಸೂರಲ್ಲಿ ಅತೀ ಹಳೆಯ ವಿಂಟೇಜ್ ಕಾರುಗಳ ರ್‍ಯಾಲಿ ಮೂಲಕ ಪ್ರದರ್ಶನ ಮಾಡಲಾಯಿತು. ಈ ಒಂದು ರ್‍ಯಾಲಿ ಸಾರ್ವಜನಿಕರ ಗಮನ ಸೆಳೆಯಲಾಯಿತು.

ಕೋವಿಡ್–19 ಪರಿಸ್ಥಿತಿಯಿಂದಾಗಿ ಎರಡು ವರ್ಷ ಬೀದಿಗಿಳಿಯದ ಪಾರಂಪರಿಕ ಕಾರುಗಳು ಇಂದು ಮೈಸೂರಿನ ರಸ್ತೆಗಳಲ್ಲಿ ಸಂಚರಿಸಿದ್ದು ವಿಶೇಷವಾಗಿತ್ತು. ಮೈಸೂರಿನ ಹೆಸರಾಂತ ಉದ್ಯಮಿ ಎಂ. ಗೋಪಿನಾಥ ಶೆಣೈ ನೇತೃತ್ವದಲ್ಲಿ ದಸರಾ ಅಂಗವಾಗಿ ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದ ಇನ್‌ಫೋಸಿಸ್ ಕ್ಯಾಂಪಸ್ ಬಳಿಯ ನ್ಯಾಷನಲ್ ಮಾರ್ಬಲ್ಸ್ ಆವರಣದಿಂದ ಆರಂಭವಾದ ವಿಂಟೇಜ್ ಕಾರ್ ರ್‍ಯಾಲಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಹಳೇ ವಿಂಟೇಜ್ ಕಾರುಗಳ ಬಗ್ಗೆ ಅತೀವ ಆಸಕ್ತಿ ಹೊಂದಿರುವ ಉದ್ಯಮಿ ಎಂ. ಗೋಪಿನಾಥ ಶೆಣೈ ಎಂಜಿಎಸ್ ವಿಂಟೇಜಸ್ ವತಿಯಿಂದ ವಿವಿಧ ಮಾದರಿ, ಬಣ್ಣಗಳ 30 ಹಳೇ ಕಾರುಗಳು ಹಾಗೂ 10 ದ್ವಿಚಕ್ರ ವಾಹನಗಳನ್ನು ನ್ಯಾಷನಲ್ ಮಾರ್ಬಲ್ಸ್‌ನಲ್ಲಿ ಪ್ರದರ್ಶಿಸಿದ್ದಾರೆ.

ರಿಂಗ್ ರಸ್ತೆ, ಹಿನಕಲ್ ಜಂಕ್ಷನ್, ಹುಣಸೂರು ರಸ್ತೆ, ಮೆಟ್ರೋಪೋಲ್ ಸರ್ಕಲ್, ಜೆಎಲ್‌ಬಿ



ರಸ್ತೆ, ರಾಮಸ್ವಾಮಿ ಸರ್ಕಲ್, ಆರ್‌ಟಿಓ ಸರ್ಕಲ್, ಮಹಾತ್ಮಗಾಂಧಿ ರಸ್ತೆ, ಅಗ್ರಹಾರ, ಲಲಿತಮಹಲ್ ರಸ್ತೆ ಮೂಲಕ ಕುರುಬಾರಹಳ್ಳಿ ಸರ್ಕಲ್ ಬಳಿ ರ್‍ಯಾಲಿಯು ಅಂತ್ಯಗೊಂಡಿತು. ಸಮೀಪದಲ್ಲಿರುವ ಶೆಣೈ ಅವರ ಜಾಗದಲ್ಲಿ ವಿಂಟೇಜ್ ಕಾರುಗಳನ್ನು ಪ್ರದರ್ಶಿಸಲಾಗಿದೆ.

ರ್‍ಯಾಲಿಗೆ ಚಾಲನೆ ನೀಡಿದ ಸಚಿವ ಸೋಮಶೇಖರ್, ವಿಂಟೇಜ್ ಕಾರಿನಲ್ಲಿ ಕುಳಿತು ಒಂದು ಸುತ್ತು ಸವಾರಿ ಮಾಡಿದ ಬಳಿಕ ಮಾಧ್ಯಮದವರೊಂದಿಗೆ ಅನುಭವ ಹಂಚಿಕೊಂಡರು. ಹಳೇ ಕಾರಿನಲ್ಲಿ ಓಡಾಡುವುದು ವಿಶೇಷ ಅನುಭವ ನೀಡುತ್ತದೆ ಇಷ್ಟೊಂದು ಬಗೆಯ ವಿಂಟೇಜ್ ಕಾರುಗಳನ್ನು ಹೊಂದಿರುವ ಉದ್ಯಮಿ ಗೋಪಿನಾಥ ಶೆಣೈ, ದಸರಾ ಮಹೋತ್ಸವದ ಅಂಗವಾಗಿ ಕಾರುಗಳ ರ್‍ಯಾಲಿ ನಡೆಸುತ್ತಿರುವುದು ನಾಡಹಬ್ಬಕ್ಕೆ ಮೆರುಗು ತಂದಿದೆ ಎಂದರು.

ಅಮೇರಿಕ, ಆಸ್ಟ್ರೇಲಿಯಾ, ಜರ್ಮನಿ, ಜಪಾನ್ ಸೇರಿದಂತೆ ಹಲವು ದೇಶಗಳ ಸುಮಾರು 80 ವರ್ಷಗಳ ಹಳೆಯ ಕಾರುಗಳನ್ನು ಕ್ರೋಢೀಕರಿಸಿ ನಿರ್ವಹಣೆ ಮಾಡುವುದು ಸುಲಭದ ಕೆಲಸವಲ್ಲ. ಅದರಲ್ಲೂ ವಿವಿಧ ರಾಜ್ಯಗಳ ಮಹಾರಾಜರು ಬಳಸಿದ ಕಾರುಗಳನ್ನು ಯಥಾಸ್ಥಿತಿಯಲ್ಲಿ ಕಾಪಾಡಿಕೊಂಡು ಪ್ರದರ್ಶಿಸುತ್ತಿರುವ ಗೋಪಿನಾಥ ಶೆಣೈ ಅವರಿಗೆ ಸರ್ಕಾರದ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಡೋಡ್ಜ್, 1930 ಫೋರ್ಡ್, 1930 ಕಾಡಿಲಾಕ್, ಬಿಹಾರದ ರಾಮ್‌ಗರ್ ಮಹಾರಾಜರ ರೋಲ್ಸ್ ರಾಯ್ಸ್, ಬಾಲಿವುಡ್ ನಟ ಅಶೋಕ್‌ಕುಮಾರ್ ಹೊಂದಿದ್ದ ಡಯಾಮ್ಲರ್ ಸಲೂನ, ರೋಲ್ಸ್ ರಾಯ್ಸ್ ಫಾಂಟಮ್ 2–1935 ಮಾಡೆಲ್, ಫೋರ್ಡ್ ಮಾಡೆಲ್ 'ಎ' ರಂಬಲ್ ಸೀಟ್–1930 ಮಾಡೆಲ್, ಮರ್ಸಿಡಿಸ್ ಬೆಂಝ್ ಡಬ್ಲ್ಯೂ 111 220ಎಸ್ ಫಿಂಟೇಲ್ 1965 ಮಾಡೆಲ್, ಡೋಡ್ಜ್ ಕಿಂಗ್ಸ್‌ವೇ ಸಲೂನ 1957 ಮಾಡೆಲ್, ಡೈಮ್ಲರ್ ಸಲೂನ್ 1965 ಮಾಡೆಲ್, ಬ್ಯೂಕ್ ಎಲೆಕ್ಟ್ರಾ ಇನ್‌ವಿಕ್ಟಾ 1959 ಮಾಡೆಲ್, ಇಟಾಲಿಯನ್ ಫಿಯಟ್ 1962 ಮಾಡೆಲ್, ಆಸ್ಟಿನ್8 1954 ಮಾಡೆಲ್, ಫಿಯಟ್ 1956 ಮಾಡೆಲ್, ಬೀಟಲ್ 1963 ಮಾಡೆಲ್, ಸ್ಟ್ಯಾಂಡರ್ಡ್, ಬ್ಯೂಕ್ ರೋಡ್, ಸ್ಟ್ಯಾಂಡರ್ಡ್ ವೆಂಗಾರ್ಡ್, ಚೆವರ್‌ಲೆಟ್, ಮಿನಿ ಕೂಪರ್ ವಿಲ್ಲೀಸ್ ಜೀಪ್, ಲ್ಯಾಂಡ್ ರೋವರ್ ಸೇರಿದಂತೆ ಹಲವು ಕಂಪನಿಗಳ ಕಾರುಗಳನ್ನು ಗೋಪಿನಾಥ ಶೆಣೈ ಪ್ರದರ್ಶಿಸಿದ್ದಾರೆ.



ಕಾರುಗಳಷ್ಟೇ ಅಲ್ಲದೆ, ಲ್ಯಾಂಬಿ, ಲ್ಯಾಮ್‌ಬ್ರೆಟಾ, ವಿಕ್ಟೋರಿಯಾ, ವೆಸ್ಪಾ 150, ಯಮಹಾ, ಲೂನಾ ಸೇರಿದಂತೆ ಶೆಣೈ ವಿವಿಧ ಮಾದರಿಯ ಹಳೇ ಸ್ಕೂಟರ್, ಮೊಪೆಡ್‌ಗಳನ್ನೂ ಸಂಗ್ರಹಿಸಿದ್ದಾರೆ. ವಿಂಟೇಜ್ ಕಾರು ಮತ್ತು ದ್ವಿಚಕ್ರ ವಾಹನಗಳನ್ನು ಶೆಣೈ ಅವರು ಕುರುಬಾರಹಳ್ಳಿ ಸರ್ಕಲ್ ಬಳಿ ಇರುವ ಪ್ಲಷ್ ಯೂರೋಪಿಯನ್ ಶೈಲಿಯ ಬಂಗಲೋದಲ್ಲಿ ಪ್ರದರ್ಶಿಸಿದ್ದಾರೆ.

ಸಂಸದ ಪ್ರತಾಪ್ ಸಿಂಹ, ಎಂ. ಗೋಪಿನಾಥ ಶೆಣೈ, ಪತ್ನಿ ಶ್ರೀಮತಿ ಸಾವಿತ್ರಿ ಶೆಣೈ, ಪುತ್ರ ಎಂ.ಜಿ. ಮಾಧವ ಶೆಣೈ, ಶಾಸಕ ಎಲ್. ನಾಗೇಂದ್ರ, ಬಿಜೆಪಿ ನಗರಾಧ್ಯಕ್ಷ ಟಿ.ಎಸ್. ಶ್ರೀವತ್ಸ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ಸ್ ಮಾಜಿ ಅಧ್ಯಕ್ಷ ಎಂ. ಅಪ್ಪಣ್ಣ, ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್ ಹಾಗೂ ಇತರರು ವಿಂಟೇಜ್ ಕಾರ್ ರ್‍ಯಾಲಿಗೆ ಚಾಲನೆ ನೀಡುವ ವೇಳೆ ಉಪಸ್ಥಿತರಿದ್ದರು.

ರೈತ ದಸರಾ ಜಿಲ್ಲಾ ಮಟ್ಟದ ಕ್ರೀಡಾಕೂಟ; ಪ್ರೇಕ್ಷಕರ ರಂಜಿಸಿದ ರೋಮಾಂಚನಕಾರಿ ಸ್ಪರ್ಧೆಗಳು

ಕೆಸರಿನಲ್ಲಿ ಬಿದ್ದು, ಎದ್ದು ಓಡಿದರು... ಗೋಣಿ ಚೀಲದೊಳಗೆ ಕಾಲಿಟ್ಟು ಜಿಗಿದರು...

ಮೈಸೂರು, ಅ.1(ಆರ್‌ಕೆಬಿ)– ಮೈಸೂರು ದಸರಾ ಹಿನ್ನೆಲೆಯಲ್ಲಿ ರೈತ ದಸರಾ ಜಿಲ್ಲಾ ಮಟ್ಟದ ಕ್ರೀಡಾಕೂಟ ಶನಿವಾರ ಮೈಸೂರಿನ ಓವಲ್ ಮೈದಾನದಲ್ಲಿ ನಡೆದು, ಪ್ರೇಕ್ಷಕರಿಗೆ ಭರಪೂರ ಮನರಂಜನೆ ಒದಗಿಸಿತು. ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಸ್ಪರ್ಧಿಗಳು ಗೆಲ್ಲುವ ಛಲದೊಂದಿಗೆ ಸ್ಪರ್ಧೆಯಲ್ಲಿ ಭಾಗವಹಿಸಿ, ಪ್ರೇಕ್ಷಕರಲ್ಲಿ ಕುತೂಹಲ ಮೂಡಿಸಿದರು.

ಪುರುಷರ ವಿಭಾಗದಲ್ಲಿ ಗೊಬ್ಬರದ ಮೂಟೆ ಹೊತ್ತು ಓಡುವುದು, ಗೋಣಿ ಚೀಲದ ಓಟ, ಗೋಣಿ ಚೀಲದಲ್ಲಿ ಮೂರು ಕಾಲಿನ ಓಟ, ಮಹಿಳೆಯರ ವಿಭಾಗದಲ್ಲಿ ನೀರಿನ ಬಿಂದಿಗೆ ಹೊತ್ತು ಓಡುವುದು, ಒಂಟಿ ಕಾಲಿನ ಓಟ, ಹೀಗೆ ನಾನಾ ಸ್ಪರ್ಧೆಗಳು ನಡೆದವು.

ಸ್ಪರ್ಧಿಗಳು ಗೋಣಿ ಚೀಲದೊಳಗೆ ಕಾಲಿಟ್ಟು ಎಗರಿ, ಎಗರಿ ಓಡಿದಾಗ ನೆರೆದಿದ್ದ ಪ್ರೇಕ್ಷಕರು ಕರತಾಡನ, ಶಿಳ್ಳೆಗಳ ಮೂಲಕ ಸ್ಪರ್ಧಿಗಳನ್ನು ಉತ್ತೇಜಿಸುತ್ತಿದ್ದರು. ಮತ್ತೊಂದೆಡೆ ಇಬ್ಬರು ತಮ್ಮ ಒಂದೊಂದು ಕಾಲಿಗೆ ಹಗ್ಗ ಕಟ್ಟಿಕೊಂಡು ಓಡುವ ಸ್ಪರ್ಧೆಯಲ್ಲಿ ಜೊತೆಯಾಗಿ ಪರಸ್ಪರ ಹಿಡಿದುಕೊಂಡು ಓಡಿದರು. ಇದು ಬಹಳ ರೋಮಾಂಚನಕಾರಿ ಆಟವಾಗಿತ್ತು. ಇಂದಿನ ಸ್ಪರ್ಧೆಯಲ್ಲಿ ತಿ.ನರಸೀಪುರ ತಾಲೂಕಿನ ಸ್ಪರ್ಧಿಗಳು ಹೆಚ್ಚು ಬಹುಮಾನಗಳನ್ನು ಬಾಚಿಕೊಂಡರು.

ಉಸ್ತುವಾರಿ ಸಚಿವರ ಸಮ್ಮುಖದಲ್ಲೇ ನಾಡಗೀತೆಗೆ ಅಗೌರವ...!?

ಮೈಸೂರು: 'ಜಯ ಭಾರತ ಜನನಿಯ ತನುಜಾತೆ...' ಸರ್ಕಾರಿ ಕಾರ್ಯಕ್ರಮಗಳ ಆರಂಭದಲ್ಲಿ ಈ ನಾಡಗೀತೆಯನ್ನು ಹಾಡಿ, ಎಲ್ಲರೂ ಎದ್ದು ನಿಂತು ಗೌರವ ಸಲ್ಲಿಸುವುದು ವಾಡಿಕೆ. ಆದರೆ ಶನಿವಾರ ಮೈಸೂರಿನ ಓವಲ್ ಮೈದಾನದಲ್ಲಿ ರೈತ ದಸರಾ ಕ್ರೀಡಾಕೂಟ ಸಂದರ್ಭದಲ್ಲಿ ನಾಡಗೀತೆಗೆ ಅಗೌರವ ತೋರಿಸಲಾಯಿತು.

ರೈತ ದಸರಾ ಕ್ರೀಡಾಕೂಟದ ಉದ್ಘಾಟನೆಗೆ ಜಿಲ್ಲಾ ಉಸ್ತುವಾರಿ ಸಚಿವರು ಆಗಮಿಸಿದ್ದರು. ವಾಡಿಕೆಯಂತೆ ಧ್ವನಿವರ್ಧಕದಲ್ಲಿ ನಾಡಗೀತೆ ಹಾಕಲಾಯಿತು. ಆದರೆ ನಾಡಗೀತೆಯ ಒಂದೆರಡು ಸಾಲು ಬರುತ್ತಿದ್ದಂತೆ ಸ್ಥಗಿತಗೊಂಡಿತು. ಮತ್ತೆ ಹಾಕಲಾಯಿತು. ಆಗಲೂ ಒಂದೆರಡು ಸಾಲು ಬಂದು ಮತ್ತೆ ಸ್ಥಗಿತಗೊಂಡಿತು. ಸಚಿವರಾದಿಯಾಗಿ ಎಲ್ಲರೂ ಧ್ವನಿವರ್ಧಕ ಹಾಕುವವನತ್ತ ತೀಕ್ಷ್ಣ ನೋಟ ಬೀರಿದರು. ಅಷ್ಟರಲ್ಲಿ ಮತ್ತೊಮ್ಮೆ ಗೀತೆ ಪ್ರಸಾರ ಮಾಡಲಾಯಿತು.

ಧ್ವನಿವರ್ಧಕಕ್ಕೆ ಮೊಬೈಲ್ ಸಂಪರ್ಕ ನೀಡಿ, ಹಾಡು ಹಾಕಲಾಗಿತ್ತು. ಆದರೆ ಹಾಡಿನ ಮಧ್ಯೆ, ಮಧ್ಯೆ ಫೋನು ಕರೆ ಬಂದಿತ್ತೆಂದು ಕಾಣುತ್ತದೆ. ಹಾಗಾಗಿ ನಾಡಗೀತೆ ಮಧ್ಯದಲ್ಲೇ ಸ್ಥಗಿತಗೊಳ್ಳುತ್ತಿತ್ತು.

ಒಟ್ಟಾರೆ ನಾಡಗೀತೆಗೆ ಯಾವುದೇ ಅಪಮಾನ, ಅಗೌರವ ಆಗದ ರೀತಿಯಲ್ಲಿ ಮೊದಲೇ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ಹಾಡಿಸಬೇಕು ಎಂಬುದು ನಿಯಮ. ಆದರೆ ಸಚಿವರೆದುರೇ ಇಲ್ಲಿ ನಾಡಗೀತೆಗೆ ಅಗೌರವ ತೋರಲಾಗಿತ್ತು.



ಕ್ರೀಡೆಗಳಿಗೆ ಸಚಿವರಿಂದ ಚಾಲನೆ

ಮೈಸೂರು: ರೈತರಿಗಾಗಿ ಆಯೋಜಿಸಿದ್ದ ದಸರಾ ಕ್ರೀಡೆಗಳಿಗೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶನಿವಾರ ಚಾಲನೆ ನೀಡಿದರು. ಓವಲ್ ಮೈದಾನದಲ್ಲಿ ಗೊಬ್ಬರದ ಮೂಟೆ ಹೊತ್ತು ಓಡುವ ಸ್ಪರ್ಧೆಗೆ ಚಾಲನೆ ನೀಡಿದ ಅವರು, ಬಳಿಕ ಆರ್ಚರ್ ಸ್ಪರ್ಧೆಯಲ್ಲಿ ಬಾಣದ ಮೂಲಕ ಗುರಿ ಇಟ್ಟು, ಬಾಣ ಬಿಟ್ಟು ಆರ್ಚರ್ ಸ್ಪರ್ಧೆಗೂ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಉಪ ವಿಶೇಷಾಧಿಕಾರಿ ಡಾ.ಎಂ.ಕೃಷ್ಣರಾಜು, ರೈತ ದಸರಾ ಉಪ ಸಮಿತಿ ಅಧ್ಯಕ್ಷ ಮಹೇಶ್‌ಕುಮಾರ್, ಉಪಾಧ್ಯಕ್ಷರಾದ ಸ್ವಾಮಿಗೌಡ, ರಮೇಶ್‌ಕುಮಾರ್, ಹೆಚ್.ಎಂ.ಪರಶಿವಮೂರ್ತಿ, ಡಾ.ಬಿ.ಎಸ್. ಚಂದ್ರಶೇಖರ್, ಸದಸ್ಯ ಕಾರ್ಯದರ್ಶಿ ಡಾ.ಷಡಕ್ಷರಮೂರ್ತಿ ಇನ್ನಿತರರು ಉಪಸ್ಥಿತರಿದ್ದರು.







ಕೆಸರು ಗದ್ದೆ ಓಟದ ಸ್ಪರ್ಧೆ

ಮೈಸೂರು ತಾಲೂಕಿನ ವರುಣಾದಲ್ಲಿ ಶನಿವಾರ ನಡೆದ ಕೆಸರು ಗದ್ದೆ ಓಟ ಸ್ಪರ್ಧೆಯಲ್ಲಿ ಪುರುಷರ ವಿಭಾಗದಲ್ಲಿ 14 ಮಂದಿ ಹಾಗೂ ಮಹಿಳೆಯರ ವಿಭಾಗದಲ್ಲಿ 15 ಮಂದಿ ಸ್ಪರ್ಧಿಗಳು ಭಾಗವಹಿಸಿದ್ದರು. ಕೆಸರಿನಲ್ಲಿ ಓಡಿದ ಸ್ಪರ್ಧಿಗಳು ಬಿದ್ದು, ಎದ್ದು ಓಡಿದರು. ತುಂಬಾ ರೋಚಕವಾಗಿದ್ದ ಸ್ಪರ್ಧೆ, ವೀಕ್ಷಕರಿಗೆ ಮನರಂಜನೆ ದೊರೆಯಿತು. ವಿಜೇತರ ವಿವರ ಹೀಗಿದೆ.

ಪುರುಷರ ವಿಭಾಗ: ನಂಜನಗೂಡು ತಾಲೂಕಿನ ಕೆ.ಅಭಿಷೇಕ್ (ಪ್ರಥಮ), ತಿ.ನರಸೀಪುರ ತಾಲೂಕಿನ ಮನೋಜ್‌ಕುಮಾರ್ (ದ್ವಿತೀಯ), ತಿ.ನರಸೀಪುರದ ಸುಹಾಸ್ (ತೃತೀಯ).

ಮಹಿಳೆಯರ ವಿಭಾಗ: ತಿ.ನರಸೀಪುರದ ಶಿಲ್ಪಾಶ್ರೀ (ಪ್ರಥಮ), ಪಿರಿಯಾಪಟ್ಟಣದ ಮಾಲಿನಿ (ದ್ವಿತೀಯ), ತಿ.ನರಸೀಪುರದ ಆರ್.ಶೋಭಾ (ತೃತೀಯ).

ಪುರುಷರ ವಿಭಾಗ

ಗೊಬ್ಬರದ ಮೂಟೆ ಹೊತ್ತು ಓಡುವ ಸ್ಪರ್ಧೆ: ಹುಣಸೂರು ತಾಲೂಕಿನ ಗುರುಮೂರ್ತಿ (ಪ್ರಥಮ), ನಂಜನಗೂಡಿನ ಎನ್.ಮನು (ದ್ವಿತೀಯ), ತಿ.ನರಸೀಪುರ ತಾಲೂಕಿನ ಮನೋಜ್‌ಕುಮಾರ್ (ತೃತೀಯ).

ಮೂರು ಕಾಲಿನ ಓಟ: ನಂಜನಗೂಡು ತಾಲೂಕಿನ ಉಮೇಶ್–ಮಹೇಶ್ ಜೋಡಿ (ಪ್ರಥಮ), ತಿ.ನರಸೀಪುರ ತಾಲೂಕಿನ ಮನೋಜ್ ಕುಮಾರ್– ಲೋಹಿತ್ ಜೋಡಿ (ದ್ವಿತೀಯ), ಮೈಸೂರು ತಾಲೂಕಿನ ಕೆ.ಶಿವಶಂಕರ್–ಚಂದ್ರಶೇಖರ್ ಜೋಡಿ (ತೃತೀಯ).

ಗೋಣಿ ಚೀಲದಲ್ಲಿ ಕಾಲಿಟ್ಟು ಓಡುವುದು: ತಿ.ನರಸೀಪುರ ತಾಲೂಕಿನ ಮನೋಜ್ ಕುಮಾರ್ (ಪ್ರಥಮ), ಹುಣಸೂರು ತಾಲೂಕಿನ ಗುರುಮೂರ್ತಿ (ದ್ವಿತೀಯ), ನಂಜನಗೂಡಿನ ಆರ್.ಉಮೇಶ್ (ತೃತೀಯ).

ಮಹಿಳೆಯರ ವಿಭಾಗ

ನೀರಿನ ಬಿಂದಿಗೆ ಹೊತ್ತು ಓಡುವುದು: ಸರಗೂರು ತಾಲೂಕಿನ ಸುಚಿತ್ರ (ಪ್ರಥಮ), ನಂಜನಗೂಡಿನ ರಶ್ಮಿ (ದ್ವಿತೀಯ), ಪಿರಿಯಾಪಟ್ಟಣದ ಮಾಲಿನಿ (ತೃತೀಯ).

ಒಂಟಿ ಕಾಲಿನ ಓಟ: ನಂಜನಗೂಡಿನ ರಶ್ಮಿ (ಪ್ರಥಮ), ಪಿರಿಯಾಪಟ್ಟಣ ತಾಲೂಕಿನ ಕಾವ್ಯ (ದ್ವಿತೀಯ), ಪಿರಿಯಾಪಟ್ಟಣ ತಾಲೂಕಿನ ಶೀಲಾ (ತೃತೀಯ).

ಗೋಣಿ ಚೀಲದೊಳಗೆ ಕಾಲಿಟ್ಟು ಓಡುವುದು: ಸರಗೂರು ತಾಲೂಕಿನ ಸುಚಿತ್ರ (ಪ್ರಥಮ), ಪಿರಿಯಾಪಟ್ಟಣ ತಾಲೂಕಿನ ಮಾಲಿನಿ (ದ್ವಿತೀಯ), ನಂಜನಗೂಡು ತಾಲೂಕಿನ ರಶ್ಮಿ (ತೃತೀಯ).

ಇಂದು ಕಾವೇರಿ ಕೊಡಗು ಮಹಿಳಾ ಸಂಘದ ವಾರ್ಷಿಕ ಸಭೆ

ಮೈಸೂರು, ಅ.1–ಮೈಸೂರಿನ ಕಾವೇರಿ ಕೊಡಗು ಮಹಿಳಾ ಸಂಘದ 2021–22ನೇ ಸಾಲಿನ 16ನೇ ವಾರ್ಷಿಕ ಮಹಾ ಸಭೆಯನ್ನು ಅ.2ರಂದು ಬೆಳಗ್ಗೆ 10.30ಕ್ಕೆ ವಿಜಯನಗರದಲ್ಲಿರುವ ಕೊಡವ ಸಮಾಜದಲ್ಲಿ ಏರ್ಪಡಿಸಲಾಗಿದೆ ಎಂದು ಸಂಘದ ಗೌರವ ಕಾರ್ಯದರ್ಶಿ ನಿರ್ಮಲಾ ಸುಬ್ರಮಣಿ ತಿಳಿಸಿದ್ದಾರೆ.

ಪ್ರಸ್ತುತ ವರ್ಷ ಮೃತಪಟ್ಟ ಸದಸ್ಯರಿಗೆ ಸಂತಾಪ ಸೂಚನೆ, ಮಹಾಸಭೆಯ ನಡಾವಳಿ ಓದಿ ದಾಖಲಿಸುವುದು, ಆಡಳಿತ ಮಂಡಳಿ ವರದಿ ಓದಿ ಅಂಗೀಕರಿಸುವುದು, ವಾರ್ಷಿಕ ಲೆಕ್ಕ ಪರಿಶೋಧನಾ ವರದಿ ಅಂಗೀಕರಿಸುವುದು, ಮುಂಗಡ ಪತ್ರ ಮಂಜೂರು ಮಾಡುವುದು, ಮುಡಾ ನಿವೇಶನದ ಬಗ್ಗೆ ಚರ್ಚೆ, ಎಂಬಿಎಫ್ ಡಿವಿಡೆಂಟ್ ಬಗ್ಗೆ ಸಂಘದ ಸದಸ್ಯತ್ವ ಹೆಚ್ಚಿಸುವ ಬಗ್ಗೆ ಮತ್ತು ವಿದ್ಯಾರ್ಥಿವೇತನ ಕುರಿತು ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಪ್ರಕಟಣೆಯಲ್ಲಿ ಅವರು ತಿಳಿಸಿದ್ದಾರೆ.




ಸರಿಯಾದ ಬೆಲೆ /ಸರಿಯಾದ ಸರ್ವಿಸ್
ಕಾಪರ್ ಗ್ಯಾಸ್ ಪೈಪ್ - 120 Per ft.
ಚಿಮಿನಿ ಕ್ಲೀನಿಂಗ್ - 399 Per ft.
ಗ್ಯಾಸ್‌ಸ್ಟೌವ್ ಕ್ಲೀನಿಂಗ್ - 99 Per
ಸೇಲ್ಸ್ & ಸರ್ವಿಸ್
www.app2serv.com
8088888115



ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು



IN THE COURT OF II ADDITIONAL DISTRICT & SESSION JUDGE AT MYSURU

Com.O.S.Number : 80/2022

PLAINTIFF: INDUSTRIAL DEVELOP MENT BANK OF INDIA LIMITED,

A company incorprated and registered under companies act of 1956 (1 of 1956)and a banking company within the section 5(c) under the banking regulation Act of 1949 carrying the business of banking and having its registered office at IDBI tower , WTC Complex. Cuffee parade, Mumbai 400005 and a branch office at Kuvempunagar branch Mysuru by its branch Manager

V/S

DEFENDANT/S 1.Sri .Ravindra.R Son of Sri Changi Ramachandra Rao S. Aged about 56 years. Prop.M/s.Bhaskar Enterprises No 335, A& B Block, Navilu Road, Kuvempunagar, Mysuru 570023

PUBLIC NOTICE


That the Plaintiff-bank has filed the above suit against the defendent for Recovery of a sum of Rs. 12,19,671/- and future intrest and cost if the suit.

The summons issued by this court and also through R.P.A.D to the Defendants was returned un-served. Now the above case is posted for taking of steps by substituted service . Hence you are hereby summoned to appear before the court in the person or through a pleader duly instructed and able to answer all material questions relating to the above said suit,on the 15th day of November 2022 at 11.00A.M In default of your appearence before the court on said date the suit will proceed further treating you ex-parte.

Given under my hand & seal on this the 29th day of September 2022

By order of the Court
Sd/- Chief Administrative officer , District & Session Court, Mysuru

Sd/-Sri. P.K .Ponnaiah, Sri B.P Vignesh, Sri Naveen Ponnaiah Advocate, No. 1662/1A, First floor, Radhamadhav connect Narayana shastry Road, Beside Vathsalya Nursing Home, Mysuru-570004
Place: Mysuru









ಸೈಟು ಮಾರಾಟಕ್ಕಿದೆ
5000 ಚದರ ಅಡಿ–ವಾಣಿಜ್ಯ ಸೈಟು ಸಂಖ್ಯೆ. 1205/1, ಕಾಂತರಾಜೇ ಅರಸ್ ರಸ್ತೆ, ಕೃಷ್ಣಮೂರ್ತಿಪುರಂ (ಬಲ್ಲಾಳ್ ವೃತ್ತ ಮತ್ತು ಕೆಳ ಸೇತುವೆ ಮಧ್ಯೆ, ರಾಮಮಂದಿರದ ಎದುರು)
9845022730

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೊಳ್ಳೇಗಾಲ

ಕೆಂಪನಪಾಳ್ಯ ರಸ್ತೆ, ಕೊಳ್ಳೇಗಾಲ– 571 440
ದೂರವಾಣಿ ಸಂಖ್ಯೆ: 08224–295221 –
Email id: apmckollegala@rediffmail.com

ಸಂಖ್ಯೆ:ಕೃಉಮಾಸ/ಕೊ/429/2022–23 ದಿನಾಂಕ: 01.10.2022

ಪ್ರಕಟಣೆ

ಈ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಿವೇಶನವನ್ನು ಲೀಸ್ ಕಂ ಸೇಲ್ ಆಧಾರದ ಮೇಲೆ ಹಂಚಿಕೆ ಪಡೆದು ಕಟ್ಟಡ ನಿರ್ಮಿಸಿಕೊಳ್ಳದೆ ಇರುವ ಪೇಟೆ ಕಾರ್ಯಕರ್ತರುಗಳಿಗೆ ತಿಳಿಸುವುದೇನೆಂದರೆ, ಮಾನ್ಯ ನಿರ್ದೇಶಕರು, ಕೃಮಾಇ, ಬೆಂಗಳೂರು ಇವರ ದಿ: 09.09.2022ರ ಸುತ್ತೋಲೆಯನ್ವಯ ಆಸ್ತಿ ಹಂಚಿಕೆ ನಿಯಮಗಳು 2004ರ ಸೇರ್ಪಡೆ ನಿಯಮ 7(4) ರಲ್ಲಿನ ಅವಕಾಶದಂತೆ ಕಟ್ಟಡ ನಿರ್ಮಿಸಿಕೊಳ್ಳಲು ಒಂದು ಬಾರಿ ಅವಕಾಶ ಮಾಡಿ ಕೊಡಲಾಗಿರುತ್ತದೆ ಮತ್ತು ಈ ಸಂಬಂಧ ಸಂಬಂಧಪಟ್ಟ ವರ್ತಕರು ದಿ: 30.10.2022 ರೊಳಗೆ ಅವಶ್ಯಕ ದಾಖಲೆಗಳೊಂದಿಗೆ ಮನವಿಯನ್ನು ಈ ಕಛೇರಿಗೆ ಸಲ್ಲಿಸುವುದು ಹಾಗೂ ಹೆಚ್ಚಿನ ಮಾಹಿತಿ ಹಾಗೂ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು, ನಿಗಧಿತ ಅವಧಿ ಮೀರಿ ಬಂದ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಕಾರ್ಯದರ್ಶಿ
ಕೃ.ಉ.ಮಾ.ಸ, ಕೊಳ್ಳೇಗಾಲ

ಸಹಿ/– ಅಧ್ಯಕ್ಷರು
ಕೃ.ಉ.ಮಾ.ಸ, ಕೊಳ್ಳೇಗಾಲ





ಮೈಸೂರು ಮಿತ್ರ
ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com

IN THE COURT OF VIII ADDITIONAL CIVIL JUDGE & JMFC AT MYSURU

O.S.Number : 1057/2019

PLAINTIFF: INDUSTRIAL DEVELOPMENT BANK OF INDIA LIMITED,

A company incorporated and registered under companies act of 1956 (1 of 1956)and a banking company within the section 5(c) under the banking regulation Act of 1949 carrying the business of banking and having its registered office at IDBI tower , WTC Complex. Cuffee parade, Mumbai 400005 and a branch office at Kuvempunagar branch Mysuru by its branch Manager V/S DEFENDENT/S 1.Sri .Nataraju M.R Son of Sri Ramaseva Aged about 45 years Residing at 1159/2, 1-5/1, Milk Centre Road, 2nd Cross, Vidyaranya puram, Mysuru.

PUBLIC NOTICE

That the Plaintiff-bank has filed the above suit against the defendents For recovery of a sum of Rs. 3,39,217.38/- and future interest and cost if the suit.

The summons issued by this court and also through R.P.A.D to Defendants no.1 was returned un-served. Now the above case is posted for taking of steps by substituted service. Hence you are hereby summoned to appear before the court in person or through a pleader duly instructed and be able to answer all material questions relating to the above said suit,on the 21st day of october 2022 at 11.00A.M in default of your appearance before the court on the said date the suit will proceed further treating you ex-parte.

Given under my hand & seal on this the 9th day of September 2022

By order of the Court
Sd/- Chief Ministerial officer Civil Judge & JMFC Court, Mysuru

Sd/-Sri. P.K .Ponnaiah, Advocate, No 1662/1A, First floor, Radhamadhav connect Narayana shastry Road, Beside vathsalya Nursing Home, Mysore-570004
Place: Mysuru
Date : 09.09.2022

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಇ–ಪೋರ್ಟಲ್‌ನಲ್ಲಿ ಮಾತ್ರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,

ನಂ.2 ವರುಣಾ ನಾಲಾ ನಿರ್ಮಾಣ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ, ಕಾವೇರಿ ಭವನ ಸಂಕೀರ್ಣ, ಗೋಕುಲಂ ನಾಲ್ಕನೇ ಹಂತ, ಯಾದವಗಿರಿ ಅಂಚೆ, ಮೈಸೂರು–570020

CIN-U45205KA2003SGC032044
Email: eevccdn2@gmail.com Ph. 0821-2515598

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಸಂಖ್ಯೆ : 07/2022–23, ದಿನಾಂಕ: 30.09.2022


ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್,ನಂ.2.ವರುಣಾ ನಾಲಾ ನಿರ್ಮಾಣ ವಿಭಾಗ, ಮೈಸೂರು ಇವರು ರೂ2.99 ಲಕ್ಷದಿಂದ 3.17 ಲಕ್ಷದವರೆಗಿನ 04 ಸಂಖ್ಯೆಯ ಮಾನವ ಸಂಪನ್ಮೂಲ ಒದಗಿಸುವ ಕಾಮಗಾರಿಗಳನ್ನು ಕೈಗೊಳ್ಳಲು ಶೇಕಡವಾರು/ಐಟಂವಾರು ಟೆಂಡರ್ ಕರೆಯಲಾಗಿದ್ದು, ಟೆಂಡರ್ ಫಾರಂಗಳಿಗೆ ಅರ್ಜಿಯನ್ನು ಸ್ವೀಕರಿಸುವ ಕಡೆಯ ದಿನಾಂಕ: 10.10.2022 ಸಂಜೆ.4.00 ರವರೆಗೆ ಭರ್ತಿಮಾಡಿ ಟೆಂಡರ್‌ಗಳನ್ನು ತೆರೆಯುವ ದಿನಾಂಕ: 12.10.2022 ಸಂಜೆ : 04–10 ಘಂಟೆಗೆ. ಖಾಲಿ ಟೆಂಡರಿನ ಪುಸ್ತಕದ ಬೆಲೆ ಇ–ಪೋರ್ಟಲ್‌ನಲ್ಲಿ ಇದ್ದಂತೆ. ಸದರಿ ಕಾಮಗಾರಿಗಳಿಗೆ ಅದರ ಮೊತ್ತಕ್ಕೆ ಅನುಗುಣವಾಗಿ ವ್ಯವಸ್ಥಾಪಕರು, ಕಾವೇರಿ ನೀರಾವರಿ ನಿಗಮ, ಮೈಸೂರು ಇಲ್ಲಿ ನೋಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗಳನ್ನು www.eproc.karnataka.gov.in ವೆಬ್ ಸೈಟ್ ಅಥವಾ

ಸಹಿ/–ಕಾರ್ಯಪಾಲಕ ಇಂಜಿನಿಯರ್
ನಂ.2 ವರುಣಾ ನಾಲಾ ನಿರ್ಮಾಣ ವಿಭಾಗ, ಮೈಸೂರು.

ORANGE CITY - MYSORE
RESIDENTIAL PLOTS
@ JUST Rs. 525/ SQFT
NEAR TO NEW KIADB LAND
DIMENSION:
30x40 30x50 40x60
MADIKERI – MYSORE HIGHWAY
Contact: 9740391228

BOOKINGS OPEN FOR
Construction of
Brand New Architecture
Designed Houses
MUDA APPROVED
20'x40' - 30 Lakhs
30'x40' - 44.99 Lakhs
Near St. Joseph's Central School, Hunsur Road, Mysore.
9740767576, 8884001233





ಮಡಿಕೇರಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನಲ್ಲಿ ಕೊಡಗು ವಿವಿ ಕೇಂದ್ರ ಕಚೇರಿ

ಮಂಗಳೂರು ವಿಶ್ವವಿದ್ಯಾನಿಲಯದಿಂದ ಸಕಾರಾತ್ಮಕ ಸ್ಪಂದನೆ



ಮಡಿಕೇರಿ, ಅ.1– ಕುಶಾಲನಗರದ ಚಿಕ್ಕ ಅಳುವಾರದಲ್ಲಿ ಪ್ರಾರಂಭವಾಗಲಿರುವ ಕೊಡಗು ವಿಶ್ವವಿದ್ಯಾನಿಲಯದ ಕೇಂದ್ರ ಕಚೇರಿಯನ್ನು ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನಲ್ಲಿ ತೆರೆಯುವ ಬೇಡಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸುವುದಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಪಿ.ಸುಬ್ರಹ್ಮಣ್ಯ ಯಡಪಡಿತ್ತಾಯ ಭರವಸೆ ನೀಡಿದ್ದಾರೆ.

ಮಂಗಳೂರು ವಿಶ್ವವಿದ್ಯಾನಿಲಯ ಕೊಡವ ಸಾಂಸ್ಕೃತಿಕ ಅಧ್ಯಯನ ಪೀಠ ಪ್ರಾರಾಂಗ ಮತ್ತು ಕೊಡವ ಮಕ್ಕಡ ಕೂಟದ ಜಂಟಿ ಆಶ್ರಯದಲ್ಲಿ ನಗರದ ಪತ್ರಿಕಾ ಭವನದಲ್ಲಿ ನಡೆದ ಪಟ್ಟೋಲೆ ಪಳಮೆ (ಕೊಡವ–ಕನ್ನಡ–ಇಂಗ್ಲಿಷ್ ಆವೃತ್ತಿ) ಕೃತಿ ಬಿಡುಗಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೊಡಗಿನಲ್ಲಿ ಕೊಡವತನ ಉಳಿಯಬೇಕು, ಆ ನಿಟ್ಟಿನಲ್ಲಿ ಎಲ್ಲಾ ಸಹಕಾರವನ್ನು ನೀಡಲಾಗುವುದು. ಕೊಡಗಿನ ಶೈಕ್ಷಣಿಕ ಪ್ರಗತಿಯ ಬೇಡಿಕೆಗೆ ಸ್ಪಂದಿಸುವುದಾಗಿ ತಿಳಿಸಿದರು. ಪಟ್ಟೋಲೆ ಪಳಮೆ ಕೃತಿ ಕೊಡವರಿಗೆ ಭಗವದ್ಗೀತೆ ಇದ್ದಂತೆ. ಪ್ರಸ್ತುತ ಕನ್ನಡ, ಇಂಗ್ಲಿಷ್‌ಗೆ ತರ್ಜುಮೆ ಆಗುವ ಮೂಲಕ ಸಪ್ತಸಾಗರದಾಚೆಗೆ ಹೋಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೃತಿ ಬಿಡುಗಡೆ ಮಾಡಿ ಮಾತನಾಡಿದ ಸಾಹಿತಿ ಬಾಚರಣಿಯಂಡ ಅಪ್ಪಣ್ಣ ಪಟ್ಟೋಲೆ ಪಳಮೆ ಕೃತಿಯಲ್ಲಿ ಕೊಡವರ ಪ್ರಾಚೀನ ಕಾಲದ ಪದ್ಧತಿ, ಪರಂಪರೆ, ಸಂಸ್ಕೃತಿಯನ್ನು ಸಂಗ್ರಹಿಸಲಾಗಿದ್ದು, ಕಾವೇರಿ ಪುರಾಣ, ವಿವಾಹ ಪದ್ಧತಿ, ಸಾವಿನ ಪದ್ಧತಿ, ಕೊಡಗಿನ ಐತಿಹಾಸಿಕ ವಿವರ, ಕೊಡವ ಗಾದೆ, ಒಗಟು, ಮೂಢನಂಬಿಕೆ ಸೇರಿದಂತೆ ಹುಟ್ಟಿನಿಂದ ಸಾವಿನವರೆಗಿನ ಎಲ್ಲಾ ವಿವರಗಳನ್ನು ನೀಡಲಾಗಿದೆ. ಇದರಿಂದ ಕೊಡಗಿನ ಸಂಸ್ಕೃತಿ, ಆಚಾರ–ವಿಚಾರಗಳು ಇನ್ನೂ ಜೀವಂತವಾಗಿ ಉಳಿಯಲು ಸಹಕಾರಿಯಾಗಿದೆ ಎಂದು ತಿಳಿಸಿದರು.

ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಮಾತನಾಡಿ, ಕೊಡವ ಮಕ್ಕಡ ಕೂಟದಿಂದ ಏಳು ವರ್ಷ ನಡೆಸಲಾದ ಆಟ್ ಪಾಟ್ ಪಡಿಪು ಕಾರ್ಯಕ್ರಮದಲ್ಲಿ ಪಟ್ಟೋಲೆ ಪಳಮೆ ಪುಸ್ತಕವನ್ನು ವಿದ್ಯಾರ್ಥಿಗಳಿಗೆ ಹಾಗೂ 4 ಸಾವಿರ ಆಟುಪಾಟ್ ಪಡಿಪು ಪುಸ್ತಕಗಳನ್ನು ಶಾಲೆಗಳಿಗೆ ಉಚಿತವಾಗಿ ನೀಡುವ ಮೂಲಕ ಯುವ ಪೀಳಿಗೆಗೆ ಕೊಡವ ಆಚಾರ, ವಿಚಾರ, ಪದ್ಧತಿಯನ್ನು ತಿಳಿಸುವ ಕೆಲಸ ಮಾಡಲಾಗಿದೆ ಎಂದರು. ಅಲ್ಲದೆ ಪಟ್ಟೋಲೆ ಪಳಮೆ ಅತೀ ಹೆಚ್ಚು ಬಾರಿ ಮುದ್ರಣವಾಗಿರುವ ಪುಸ್ತಕವಾಗಿದ್ದು, ಇದು ಕೊಡವರ ಧರ್ಮಗ್ರಂಥವಾಗಿದೆ ಎಂದು ಅಭಿಪ್ರಾಯಪಟ್ಟರು.

ಚಿಕ್ಕಅಳುವಾರದಲ್ಲಿ ಪ್ರಾರಂಭಿಸಲಾಗುವ ಕೊಡಗು ವಿಶ್ವವಿದ್ಯಾನಿಲಯದ ಕೇಂದ್ರ ಕಚೇರಿಯನ್ನು ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನಲ್ಲಿ ತೆರೆಯಲು ಅವಕಾಶ ಕಲ್ಪಿಸುವಂತೆ ಇದೇ ಸಂದರ್ಭ ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಿಗೆ ಮನವಿ ಮಾಡಿದರು.

ಮುಂಬೈ ಎಸ್.ಎನ್.ಡಿ.ಟಿ ಮಹಿಳಾ ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕರಾದ ಡಾ.ವೀಣಾ ಪೂಣಚ್ಚ ಪಟ್ಟೋಲೆ ಪಳಮೆ ಕೃತಿಯ ಕುರಿತು ಪರಿಚಯ ಮಾಡಿದರು.

ಕಾರ್ಯಕ್ರಮದಲ್ಲಿ ಪಟ್ಟೋಲೆ ಪಳಮೆ ಕೃತಿಯ ಕೊಡವ–ಕನ್ನಡ–ಇಂಗ್ಲಿಷ್ ಆವೃತ್ತಿಯ ಅನುವಾದಕರಾದ ಬೊವ್ವೇರಿಯಂಡ ನಂಜಮ್ಮ ಮತ್ತು ಚಿಣ್ಣಪ್ಪ ವರ್ಚುವಲ್ ಮೂಲಕ ಮಾತನಾಡಿ, ಕೊಡವ ಭಾಷೆ, ಸಂಸ್ಕೃತಿ, ಆಚಾರ, ವಿಚಾರ, ಜನಪದ ಕಲೆಗಳ ಕುರಿತು ಅಭಿಪ್ರಾಯ ಹಂಚಿಕೊಂಡರು. ಈ ಸಂದರ್ಭ ಪಾಲೆಯಂಡ ಕಾವ್ಯ, ಕೊಡವ ಸಾಂಸ್ಕೃತಿಕ ಅಧ್ಯಯನ ಪೀಠದ ಸಂಯೋಜಕಿ ಡಾ. ಎಂ.ಎಂ.ಮೀನಾಕ್ಷಿ, ಚೋಕಿರ ಅನಿತಾ ದೇವಯ್ಯ, ಐಚಂಡ ರಶ್ಮಿ ಮೇದಪ್ಪ ಹಾಜರಿದ್ದರು.

ಅಂತಾರಾಷ್ಟ್ರೀಯ ಕಾಫಿ ದಿನ ಆಚರಣೆ



ಮಡಿಕೇರಿ,ಅ.1– ಕೊಡಗು ಮಹಿಳಾ ಕಾಫಿ ಜಾಗೃತಿ ವೇದಿಕೆ ವತಿಯಿಂದ ಅಂತಾರಾಷ್ಟ್ರೀಯ ಕಾಫಿ ದಿನವನ್ನು ಆಚರಿಸಲಾಯಿತು.

ಕುರಗುಂದ ಗ್ರಾಮದ ಕುಮಾರೀಸ್ ಕಿಚನ್ ಸಭಾಂಗಣದಲ್ಲಿ ನಡೆದ ಅಂತರ್‌ರಾಷ್ಟ್ರೀಯ ಕಾಫಿ ದಿನಾಚರಣೆ ಕಾರ್ಯಕ್ರಮವನ್ನು ಕಾಫಿ ಬೆಳೆಗಾರ, ಉದ್ಯಮಿ ತೇಲಪಂಡ ಪ್ರದೀಪ್ ಪೂವಯ್ಯ ಅವರು ಜ್ಯೋತಿ ಬೆಳಗುವ ಮೂಲಕ ಉದ್ಘಾಟಿಸಿದರು.

ಬಳಿಕ ಮಾತನಾಡಿದ ತೇಲಪಂಡ ಪ್ರದೀಪ್ ಪೂವಯ್ಯ, ಮಾನವನ ದೈಹಿಕ ಆರೋಗ್ಯ ಕಾಪಾಡಲು ನಿಗದಿತ ಪ್ರಮಾಣದ ಕಾಫಿ ಸೇವನೆ ಅತ್ಯಗತ್ಯವಾಗಿದೆ. ಯುರೋಪಿಯನ್ ದೇಶಗಳಲ್ಲಿ ಕಾಫಿ ಸೇವಿಸುವವರ ಸಂಖ್ಯೆ ಹೆಚ್ಚಿದೆ. ಹೀಗಾಗಿ ಅವರು ದೈಹಿಕವಾಗಿ ಆರೋಗ್ಯವಂತರಾಗಿದ್ದಾರೆ ಎಂದು ಹೇಳಿದರು.

ರಾಜ್ಯಗಳಲ್ಲಿ ಹಸಿರು ಪರಿಸರದ ನೆರಳಲ್ಲಿ ಕಾಫಿ ಬೆಳೆಸಲಾಗುತ್ತಿದೆ ಈ ಕಾಫಿಯ ಗುಣಮಟ್ಟ ಉತ್ಕೃಷ್ಟತೆಯೊಂದಿಗೆ ಉತ್ತಮ ಸ್ವಾದವನ್ನು ಹೊಂದಿರುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಕಾಫಿ ಬೆಳೆಯುವ ಸಂದರ್ಭ ಹೆಚ್ಚಿನ ರಾಸಾಯನಿಕಗಳನ್ನು ಬಳಸದೇ ಸುಸ್ಥಿರವಾಗಿ ಬೆಳೆಯಬೇಕು ಎಂದು ಸಲಹೆ ನೀಡಿದ ಪ್ರದೀಪ್ ಪೂವಯ್ಯ, ಕಾಫಿ ಬೀಜ ಮತ್ತು ಕಾಫಿಯನ್ನು ಯಾವುದೇ ಕಾರಣಕ್ಕೂ ಗೊಬ್ಬರದ ಚೀಲಗಳಲ್ಲಿ ಸಂಗ್ರಹಿಸಬಾರದು. ಇದರಿಂದ ಕಾಫಿ ತನ್ನ ಗುಣಮಟ್ಟವನ್ನು ಕಳೆದುಕೊಳ್ಳುವ ಸಾಧ್ಯತೆ ಹೆಚ್ಚಿರುತ್ತದೆ. ಬೆಳೆಗಾರರು ಇದನ್ನು ಗಮನದಲ್ಲಿಟ್ಟು ಕೊಳ್ಳುವಂತೆ ಸಲಹೆ ನೀಡಿದರು.

ಇದೀಗ ಸರಕಾರ 10 ಹೆಚ್.ಪಿ.ವರೆಗಿನ ಪಂಪ್‌ಸೆಟ್‌ಗೆ ಉಚಿತ ವಿದ್ಯುತ್ ನೀಡಲು ಮುಂದಾಗಿದೆ. ಇದರಿಂದಾಗಿ ಮಲೆನಾಡು ಭಾಗದ ಕಾಫಿ ಬೆಳೆಗಾರರಿಗೆ ಪ್ರಯೋಜನವಾಗಲಿದೆ. 10 ಹೆಚ್.ಪಿ.ವರೆಗೆ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಿದಲ್ಲಿ ಅದು 20 ಹೆಚ್.ಪಿ.ವರೆಗೆ ಬಳಕೆಯಾಗುವ ಮೋಟಾರ್ ಯಂತ್ರದ ಆರ್ಥಿಕ ವೆಚ್ಚವನ್ನು ಕಡಿತಗೊಳಿಸುತ್ತದೆ ಎಂದು ಹೇಳಿದರು.

ಮಹಿಳಾ ಕಾಫಿ ಬೆಳೆಗಾರರು ಸರಕಾರದ ಸಬ್ಸಿಡಿ, ಕೇಂದ್ರ ಮತ್ತು ರಾಜ್ಯ ಸರಕಾರಗಳ ಸಾಲ ಯೋಜನೆ, ಕಾಫಿ ಮಂಡಳಿಯ ವಿವಿಧ ಸೌಲಭ್ಯಗಳು ಹಾಗೂ ಗುಣಮಟ್ಟದ ಕಾಫಿ ಉತ್ಪಾದನೆಯ ಬಗ್ಗೆ ಜಾಗೃತಿ ಮೂಡಿಸಬೇಕೆಂದು ಕಿವಿಮಾತು ಹೇಳಿದರು.

ಕಾಫಿ ಬೆಳೆಗೆ ಬಳಸಬೇಕಿರುವ ಗೊಬ್ಬರಗಳು, ಕಾಫಿ ಉದುರುವುದನ್ನು ತಡೆಗಟ್ಟುವ ವಿಧಾನ, ಕ್ರಿಮಿ ಹಾಗೂ ಕೀಟ ನಾಶಕಗಳ ಬಳಕೆಯ ಪ್ರಮಾಣ, ತೋಟ ನಿರ್ವಹಣೆ, ಕಾಫಿ ಔಟ್‌ಟರ್ನ್ ಮತ್ತಿತರ ವಿಚಾರಗಳ ಕುರಿತು ವೇದಿಕೆ ಸದಸ್ಯರ ಪ್ರಶ್ನೆಗಳಿಗೆ ಪ್ರದೀಪ್ ಪೂವಯ್ಯ ಉತ್ತರಿಸಿದರು.

ಇದೇ ಸಂದರ್ಭ ವಿಶ್ವ ಕಾಫಿ ದಿನಾಚರಣೆ ಅಂಗವಾಗಿ ಕೊಡಗು ಮಹಿಳಾ ಕಾಫಿ ಜಾಗೃತಿ ವೇದಿಕೆ ವತಿಯಿಂದ ಸಾರ್ವಜನಿಕರಿಗೆ ಉಚಿತವಾಗಿ ಗುಣಮಟ್ಟದ ಸ್ವಾದಿಷ್ಟ ಕಾಫಿಯನ್ನು ವಿತರಿಸಲಾಯಿತು. ಪ್ರವಾಸಿಗರು ಸೇರಿದಂತೆ ಸಾರ್ವಜನಿಕರು ಕಾಫಿ ಸೇವಿಸಿ ಸ್ವಾದದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ವೇದಿಕೆ ಅಧ್ಯಕ್ಷೆ ಜ್ಯೋತಿಕಾ ಬೋಪಣ್ಣ ಉಪಸ್ಥಿತರಿದ್ದರು. ಸದಸ್ಯೆ ಶರಿನ್ ನಂಜಪ್ಪ ಪ್ರಾರ್ಥಿಸಿದರೆ, ಖಜಾಂಚಿ ಕುಮಾರಿ ಕುಂಞಪ್ಪ ಕಾರ್ಯಕ್ರಮ ಮೇಲ್ವಿಚಾರಣೆ ನಡೆಸಿದರು. ಸದಸ್ಯೆ ಅನಿತಾ ಗಣಪತಿ ವಂದಿಸಿದರು. ಕಾರ್ಯದರ್ಶಿ ಅನಿತಾನಂದ ಇತರರಿದ್ದರು.

ಅ.4, ಖಾಸಗಿ ಬಸ್ ಕಾರ್ಮಿಕರ ಸಂಘದಿಂದ ಆಯುಧ ಪೂಜೆ

ವಿರಾಜಪೇಟೆ, ಅ.1– ಕೊಡಗು ಖಾಸಗಿ ಬಸ್ ಕಾರ್ಮಿಕರ ಸಂಘದ 15ನೇ ವರ್ಷದ ಆಯುಧ ಪೂಜೆ ಕಾರ್ಯಕ್ರಮವು ಅ.4ರಂದು ವಿರಾಜಪೇಟೆ ಖಾಸಗಿ ಬಸ್ ನಿಲ್ದಾಣದ ವೇದಿಕೆಯಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಕುಂಬೆಯಂಡ ಸುರೇಶ್ ದೇವಯ್ಯ ತಿಳಿಸಿದ್ದಾರೆ.

ಖಾಸಗಿ ಬಸ್ ಕಾರ್ಮಿಕರ ಸಂಘದ ವತಿಯಿಂದ ವಿರಾಜಪೇಟೆ ಪ್ರೆಸ್ ಕ್ಲಬ್‌ನಲ್ಲಿ ಕರೆದಿದ್ದ ಗೋಷ್ಠಿಯಲ್ಲಿ ಮಾತನಾಡಿದ ಅವರು, ಅ.4 ರಂದು ಬೆಳಗ್ಗೆ 10–30 ಗಂಟೆಗೆ ಆಯುಧ ಪೂಜೆ, ನಂತರ 12–30ಕ್ಕೆ ಅನ್ನ ಸಂತರ್ಪಣೆ ನಡೆಯಲಿದ್ದು, ಸಂಜೆ 5 ಗಂಟೆಗೆ ಸ್ಥಳೀಯ ಕಲಾತಂಡಗಳಿಂದ ಸಾಂಕೃತಿಕ ಕಾರ್ಯಕ್ರಮ ಇರಲಿದೆ. ಬಳಿಕ ನಿವೃತ್ತ ಕಾರ್ಮಿಕರಿಗೆ ಮತ್ತು ಎಸ್‌ಎಸ್‌ಎಲ್‌ಸಿ–ಪಿಯುಸಿ ಮತ್ತು ಡಿಗ್ರಿಯಲ್ಲಿ ಹೆಚ್ಚು ಅಂಕ ಪಡೆದ ಸಂಘದ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಸನ್ಮಾನ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ದೇವಯ್ಯ ಹೇಳಿದರು. ಸಂಘದ ಕಾರ್ಯದರ್ಶಿ ಜೂಡಿವಾಜ್ ಮಾತನಾಡಿ, ಅ.4 ರಂದು ಸಂಜೆ 7 ಗಂಟೆಗೆ ಸಮಾರೋಪ ಸಮಾರಂಭವನ್ನು ಸ್ಥಳೀಯ ಶಾಸಕ ಕೆ.ಜಿ.ಬೋಪಯ್ಯ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ವಿಧಾನಪರಿಷತ್ ಸದಸ್ಯ ಎಂ.ಪಿ.ಸುಜಾ ಕುಶಾಲಪ್ಪ, ಕೆ.ಪಿ.ಸಿ.ಸಿ. ರಾಜ್ಯ ಕಾನೂನು ಘಟಕದ ಅಧ್ಯಕ್ಷ ಎ.ಎಸ್.ಪೊನ್ನಣ್ಣ, ನಗರ ಕಾಂಗ್ರೆಸ್ ಅಧ್ಯಕ್ಷ ಮಾದಂಡ ತಿಮ್ಮಯ್ಯ, ಬಿಜೆಪಿಯ ತೇಲಪಂಡ ಶಿವಕುಮಾರ್, ಜಿಪಂ ಮಾಜಿ ಸದಸ್ಯ ಅಚ್ಚಪಂಡ ಮಹೇಶ್ ಗಣಪತಿ, ಕಸಾಪ ತಾಲೂಕು ಅಧ್ಯಕ್ಷ ಡಿ.ಪಿ.ರಾಜೇಶ್, ನಿವೃತ್ತ ಸೈನಿಕ ಪಟ್ಟಚೇರಿರ ಪೂಣಚ್ಚ ಮುಂತಾದವರು ಭಾಗವಹಿಸಲಿದ್ದಾರೆ.

ಬ್ರಹ್ಮ ಬಂದರೂ ಬಿಜೆಪಿ ಧೂಳೀಪಟ ಅಸಾಧ್ಯ

ಹಿಂದುಳಿದ ವರ್ಗಗಳ ಜಾಗೃತಿ ಸಮಾವೇಶದಲ್ಲಿ ಮಾಜಿ ಸಚಿವ ಈಶ್ವರಪ್ಪ ಸವಾಲು



ಮಂಡ್ಯ,ಅ.1– ಬ್ರಹ್ಮ ಬಂದರೂ ದೇಶದಲ್ಲಿ ಬಿಜೆಪಿ ಪಕ್ಷವನ್ನು ಧೂಳೀಪಟ ಮಾಡಲು ಕಾಂಗ್ರೆಸ್‌ನಿಂದ ಅಸಾಧ್ಯ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಹೇಳಿದರು.

ನಗರದ ಖಾಸಗಿ ಸಮುದಾಯ ಭವನದಲ್ಲಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಆಯೋಜಿಸಿದ್ದ ಹಿಂದುಳಿದ ವರ್ಗಗಳ ಜಾಗೃತಿ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಭಾರತ್ ಜೋಡೋ ಯಾತ್ರೆ ಎರಡನೇ ದಿನಕ್ಕೆ ಕಾಲಿಟ್ಟಿದೆ. ಈಗಲಾದರೂ ಡಿಕೆಶಿ ಹಾಗೂ ಸಿದ್ದರಾಮಯ್ಯ ಒಂದಾಗಲಿ. ರಾಹುಲ್ ಭಾರತ್ ಜೋಡೋ ನಡೆಸುತ್ತಿದ್ದರೆ ಮತ್ತೊಂದೆಡೆ ಕಾಂಗ್ರೆಸ್‌ನ ಪರಿಸ್ಥಿತಿ ನೋಡಿ ಅಯ್ಯೋ ಪಾಪ ಎನಿಸುತ್ತದೆ. ಸಿದ್ದರಾಮಯ್ಯ ಕಾಡು ಮೇಡಲ್ಲಿ ಹೋಗಿ ಡಿಕೆಶಿಗೆ ಟಾಂಗ್ ಕೊಟ್ಟು ರಾಹುಲ್ ಜೊತೆಗೆ ತಿಂಡಿ ಮಾಡಿದರೆ, ಆಮೇಲೆ ಡಿಕೆಶಿ ರಾಹುಲ್ ಭೇಟಿ ಮಾಡುತ್ತಾರೆ. ಭಾರತ್ ಜೋಡೋ ಮೊದಲು ರಾಹುಲ್ ಡಿಕೆಶಿ ಸಿದ್ದರಾಮಯ್ಯರನ್ನು ಒಂದುಗೂಡಿಸಲಿ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಹಾಳು ಮಾಡಿದ್ದು ಆಗಿದೆ. ಸರ್ಕಾರ ತೆಗೆದು ಆಯ್ತು, ಸಿಎಂ ಸ್ಥಾನ ಸಹ ಕಳೆದುಕೊಂಡಿದ್ದೀರಿ. ಈಗಲಾದರೂ ಸಹ ನೀವು ಒಂದಾಗುತ್ತಿಲ್ಲ. ಕಾಂಗ್ರೆಸ್ ಜೋಡೋ ಸಹ ನಿಮ್ಮಿಂದ ಯಶಸ್ವಿಯಾಗಲ್ಲ. ನೀವಿಬ್ಬರು ಒಂದಾಗಲಿ ಅಂತ ರಾಹುಲ್ ಗಾಂಧಿ ಏನೇ ಸರ್ಕಸ್ ಮಾಡಿದರೂ ಅದು ಸಾಧ್ಯವಾಗುತ್ತಿಲ್ಲ. ಕಾಂಗ್ರೆಸ್ಸಿಗರು ತಮ್ಮ ಮನೆಗೆ ಹೋದರೂ ಹೆಂಡತಿ ಮಕ್ಕಳ ಬಾಯಲ್ಲಿ ಮೋದಿ ಮೋದಿ ಅಂತ ಬರುತ್ತದೆ. ಯಾರಾದರೂ ಒಬ್ಬರು ರಾಹುಲ್ ಗಾಂಧಿ ಅಂತ ಹೇಳಲು ಸಾಧ್ಯವೇ ಎಂದು ಟೀಕಿಸಿದರು. ಉತ್ತರ ಪ್ರದೇಶದಲ್ಲಿ 394 ಸೀಟು ಪೈಕಿ 4 ಸೀಟು ಕಾಂಗ್ರೆಸ್ ಗೆದ್ದಿದೆ. ಬಿಜೆಪಿ ಧೂಳಿಪಟ ಮಾಡುವ ಶಕ್ತಿ ಕಾಂಗ್ರೆಸ್‌ಗಿಲ್ಲ. ಬ್ರಹ್ಮ ಬಂದರು ಕಾಂಗ್ರೆಸ್ಸಿಗರ ಕೈಲಿ ಇದು ಸಾಧ್ಯವಿಲ್ಲ ಎಂದು ನುಡಿದರು.

ಸಿದ್ದರಾಮಯ್ಯ ಮುಸ್ಲೀಮರಿಗೆ ಹೀರೊ, ಹಿಂದೂಗಳಿಗೆ ವಿಲನ್ ಆಗಿದ್ದಾರೆ. ಕರ್ನಾಟಕ ರಾಜ್ಯದ ಏಕೈಕ ವಿಲನ್ ಸಿದ್ದರಾಮಯ್ಯ. ಕೈಲಾಗದವನು ಎದುರು ಬರುವ ಪೈಲ್ವಾನ್‌ಗೆ ಒದೆಯುತ್ತೀನಿ ಅಂತಾನೆ. ಅವನು ಎದ್ದೇಳುವುದಿಲ್ಲ. ಒದೆಯುವುದಕ್ಕೆ ಹಾಗಲ್ಲ ಎಂದರು.

ದೇಶದಲ್ಲಿ ಭಾರತಾಂಬೆಯ ಆಶೀರ್ವಾದ ತೆಗೆದುಕೊಂಡು ಪ್ರತಿ ಹಳ್ಳಿಯಲ್ಲಿ ಭಾರತ ಮಾತೆಗೆ ಜೈ ಅಂತಾರೆ. ಕಾಂಗ್ರೆಸ್‌ನವರಿಗೆ ಆರ್‌ಎಸ್‌ಎಸ್‌ನವರ ಕಂಡರೆ ತಡೆದುಕೊಳ್ಳಲು ಆಗುತ್ತಿಲ್ಲ. ಸಿದ್ದರಾಮಯ್ಯ ಹಾಗೂ ಇಬ್ರಾಹಿಂ ಆರ್‌ಎಸ್‌ಎಸ್ ಬಗ್ಗೆ ಮಾತನಾಡುತ್ತಾರೆ. ಸಿದ್ದು–ಇಬ್ರಾಹಿಂ ಒಂದು ಥರ ಬೀಗರು ಇಬ್ಬರಿಗೂ ಸಹ ಮುಸ್ಲಿಂ ಮತ ಬೇಕು. ಪಿಎಫ್‌ಐ ಬ್ಯಾನ್ ಮಾಡಿದ ಬಗ್ಗೆ ತಪ್ಪು ಅಂತಾರೆ. ಸ್ಪಷ್ಟವಾಗಿ ಹೇಳಲಿ ಕಾಂಗ್ರೆಸ್ಸಿಗರಿಗೆ ಹಿಂದೂಗಳ ಮತ ಬೇಡವೆ ಎಂದು ಪ್ರಶ್ನಿಸಿದರು.

ಸಿದ್ದರಾಮಯ್ಯ, ಡಿಕೆಶಿ, ಇಬ್ರಾಹಿಂ ತಮಗೆ ಹಿಂದೂಗಳ ಮತ ಬೇಡ ಎಂದು ತಾಕತ್ತಿದ್ದರೆ ಹೇಳಲಿ. ರಾಷ್ಟ್ರ ಭಕ್ತ ಮುಸ್ಲೀಮರು ಇವತ್ತು ಸಹ ಬಿಜೆಪಿ ಪರ ಇದ್ದಾರೆ. ಕಾಂಗ್ರೆಸ್ಸಿಗರಿಗೆ ಏನು ಮಾಡಬೇಕೆಂಬುದು ತೋಚುತ್ತಿಲ್ಲ. ಬಾಯಿಗೆ ಬಂದ ಹಾಗೆ ಒದರುತ್ತಾರೆ. ಕಟೀಲ್ ಅವರನ್ನು ಸಿದ್ದು ವಿದೂಷಕ ಅಂತಾರೆ. ಸಿದ್ದರಾಮಯ್ಯ ಕೇವಲ ಹಿಂದೂಗಳಿಗೆ ಮಾತ್ರವಲ್ಲ ದಲಿತರು, ಹಿಂದುಳಿದವರಿಗೂ ವಿಲನ್ ಆಗಿದ್ದಾರೆ. ಮುಸ್ಲೀಮರಿಗೆ ಮಾತ್ರ ಸಿದ್ದು ಹೀರೋ ಎಂದು ಹೇಳಿದರು.

ಕ್ರೀಡಾ ಹಾಗೂ ರೇಷ್ಮೆ ಸಚಿವ ಕೆ.ಸಿ.ನಾರಾಯಣಗೌಡ ಮಾತನಾಡಿ, ಮಂಡ್ಯದಲ್ಲಿ 4 ಸೀಟು ಗೆದ್ದರೆ ಇಂಡಿಯಾ ಗೆದ್ದಾಗೆ. ಮಂಡ್ಯಕ್ಕೆ ಮೋದಿ ಕರೆಸಿ ಶಕ್ತಿ ತುಂಬುವ ಕೆಲಸ ಮಾಡುತ್ತೇವೆ. ಕೆ.ಆರ್.ಪೇಟೆ ಶಾಸಕನಾಗಬೇಕಾದರೆ ನಿಮ್ಮೆಲ್ಲರ ಆಶೀರ್ವಾದ ಇದೆ. ಈ ಋಣ ತೀರಿಸಲು ಎಲ್ಲಾ ಸಮುದಾಯ ಭವನ ಕಟ್ಟಿದ್ದೇನೆ. 20ಕ್ಕೂ ಹೆಚ್ಚು ಸಮುದಾಯ ಭವನ ಕಟ್ಟಲು ಮುಂದಾಗಿದ್ದು, ಹಣ ತರುವ ಕೆಲಸ ನಡೆಯುತ್ತಿದೆ. ಮಂಡ್ಯ ಉಸ್ತುವಾರಿಯಾಗಿದ್ದ ನನ್ನನ್ನ ಶಿವಮೊಗ್ಗಕ್ಕೆ ಹಾಕಿದ್ದಾರೆ. ದೊಡ್ಡ ದೊಡ್ಡ ಹುಲಿಗಳು ಅಲ್ಲಿ ಇದ್ದಾವೆ. ಚಿಕ್ಕವನಾಗಿ ನನ್ನ ಮಿತಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಕೆ.ಆರ್.ಪೇಟೆಯಿಂದ ಹೋಗಿ ಶಿವಮೊಗ್ಗ ಉಸ್ತುವಾರಿ ಸಚಿವನಾಗಿರುವುದು ನನ್ನ ಪುಣ್ಯ ಎಂದರು.

ಶಿವಮೊಗ್ಗದಲ್ಲಿ ನಾನು ಮಾಡುವ ಕೆಲಸ ಏನು ಇಲ್ಲ. ಎಲ್ಲವನ್ನು ಬುಗರಿ ತಿರುಗಿಸಿದ ಹಾಗೆ ಈಶ್ವರಪ್ಪ ಮಾಡುತ್ತಿದ್ದಾರೆ. ಆದರೆ ಮಂಡ್ಯದಲ್ಲಿ ಕೆಲಸದ ಕೊರತೆ ಇದೆ. ಮಂಡ್ಯಕ್ಕೆ ಮೋದಿ ಕರೆಸಿ ಪಕ್ಷಕ್ಕೆ ಶಕ್ತಿ ತುಂಬುವ ಕೆಲಸ ಆಗಬೇಕಿದೆ. ಲಕ್ಷಾಂತರ ಜನರನ್ನು ಸೇರಿಸಿ ಬೃಹತ್ ಸಮಾವೇಶ ಮಾಡುವೆ. ಕೆ.ಆರ್.ಪೇಟೆಯಲ್ಲಿ ಕುಂಭಮೇಳ ನಡೆಯುತ್ತಿದ್ದು, ಉತ್ತರ ಪ್ರದೇಶದ ಸಿಎಂ ಯೋಗಿ ಆದಿತ್ಯನಾಥ್ ಬರುತ್ತಾರೆ. ಎಲ್ಲರೂ ಸಹ ಅಂದು ಭಾಗವಹಿಸಬೇಕೆಂದರು. ವೇದಿಕೆಯಲ್ಲಿ ಮಾಜಿ ಸಂಸದ ಸಿ.ಹೆಚ್. ವಿಜಯಶಂಕರ್, ಮುಡಾ ಅಧ್ಯಕ್ಷ ಶ್ರೀನಿವಾಸ್, ಬಿಜೆಪಿ ಮುಖಂಡ ಕಾ.ಪು.ಸಿದ್ದಲಿಂಗಸ್ವಾಮಿ ಇತರರಿದ್ದರು.

> 6 ವಿಧಾನಪರಿಷತ್ ಸದಸ್ಯ ಸಿ.ಪಿ. ಯೋಗೀಶ್ವರ್ ಕಾರಿನ ಮೇಲೆ ಜೆಡಿಎಸ್ ಕಾರ್ಯಕರ್ತರು ದಾಳಿ ಮಾಡಿದ್ದಾರೆ. ಜೆಡಿಎಸ್ ಗೂಂಡಾಗಿರಿಗೆ ಬಿಜೆಪಿ ಹೆದರಲ್ಲ. ಗೂಂಡಾಗಿರಿಯನ್ನು ಮಟ್ಟ ಹಾಕ್ತೇವೆ. ಪಿಎಫ್‌ಐ ಅನ್ನು ಮಟ್ಟಹಾಕಿದ ನಮಗೆ ಜೆಡಿಎಸ್ ಗೂಂಡಾಗಿರಿ ತಡೆಯುವುದು ದೊಡ್ಡದಲ್ಲ. ಯೋಗೀಶ್ವರ್ ಮೇಲೆ ಗೂಂಡಾಗಿರಿ ಮಾಡಿದ್ರೆ ಬಿಡ್ತೀವಾ? ಎಲ್ಲಾ ಮುಸ್ಲೀಮರು ಗೂಂಡಾಗಳಲ್ಲ. ರಾಷ್ಟ್ರ ದ್ರೋಹಿಗಳು ಮಾತ್ರ ಗೂಂಡಾಗಳು.
>
> –ಕೆ.ಎಸ್.ಈಶ್ವರಪ್ಪ, ಶಾಸಕ

ಪತ್ರಿಕೆ ಪ್ರತಿನಿಧಿ ಜಯರಾಮ್ ನಿಧನ



ಕೆ.ಆರ್.ಪೇಟೆ,ಅ.1– ತಾಲೂಕಿನ ಶೀಳನೆರೆ ಹೋಬಳಿಯ ಪತ್ರಿಕಾ ಪ್ರತಿನಿಧಿ ಜಯರಾಮ್(55) ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಶೀಳನೆರೆ ಗ್ರಾಮದಲ್ಲಿ ಶನಿವಾರ ಸಂಜೆ ನಡೆಯಿತು.

ಗಾಯಿತ್ರಮ್ಮ



ಕೆ.ಆರ್.ಪೇಟೆ,ಅ.1– ತಾಲೂಕಿನ ಅಗ್ರಹಾರಬಾಚಹಳ್ಳಿ ಹಿರಿಯ ಮುಖಂಡ ನಾಗೇಗೌಡರ ಧರ್ಮಪತ್ನಿ, ಗಾಯಿತ್ರಮ್ಮ(55) ನಿಧನರಾದರು. ಮೃತರು ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನಡೆಯಿತು.

ರಕ್ತದಾನದಿಂದ ಜೀವ ಉಳಿಸುವ ಕಾರ್ಯ ನಿರಂತರವಾಗಲಿ



ಮಂಡ್ಯ,ಅ.1– ರಕ್ತದಾನದಿಂದ ಜೀವ ಉಳಿಸುವ ಸುಕಾರ್ಯ ನಿರಂತರವಾಗಿರಲಿ ಎಂದು ತಹಶೀಲ್ದಾರ್ ಕುಂಞ ಅಹಮದ್ ಹೇಳಿದರು.

ನಗರದ ಮಾಂಡವ್ಯ ಬಿ.ಎಡ್ ಕಾಲೇಜು ಆವರಣದಲ್ಲಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ, ಕೃಷಿಕ ಲಯನ್ಸ್ ಸಂಸ್ಥೆ ಆಯೋಜಿಸಿದ್ದ ರಾಷ್ಟ್ರೀಯ ಸ್ವಯಂ ಪ್ರೇರಿತ ರಕ್ತದಾನ ದಿನಾಚರಣೆ ಅಂಗವಾಗಿ ಸ್ವಯಂ ಪ್ರೇರಿತ ರಕ್ತದಾನ–ರಕ್ತದಾನಿಗಳ ಅಭಿನಂದನಾ ಸಮಾರಂಭಕ್ಕೆ ಗಣ್ಯರೊಂದಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಆಧುನಿಕತೆ ಹೆಚ್ಚಾಗುತ್ತಿದ್ದಂತೆ ವೈಜ್ಞಾನಿಕ ಆಲೋಚನೆಗಳು ಹೆಚ್ಚಾಗುತ್ತವೆ, ಹಿಂದೆ ಅನ್ನದಾನ ಸರ್ವಶ್ರೇಷ್ಠ ಎನ್ನುತ್ತಿದ್ದ ಕಾಲಮಾನ ದೂರವಾಗಿ, ನೇತ್ರದಾನ, ರಕ್ತದಾನ ಸರ್ವಶ್ರೇಷ್ಠ ಸ್ಥಾನ ಪಡೆಯುತ್ತಿವೆ, ಮಾನವೀಯ ಮೌಲ್ಯಗಳು ಯುವಜನತೆಯಲ್ಲಿ ದಾನದ ರೂಪ ಪಡೆಯುತ್ತಿವೆ ಎಂದು ನುಡಿದರು. ಬಳಿಕ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ ಸಭಾಧ್ಯಕ್ಷೆ ಮೀರಾ ಶಿವಲಿಂಗಯ್ಯ ಮಾತನಾಡಿ, ರಕ್ತಕ್ಕೆ ರಕ್ತವೇ ಔಷಧ, ರಕ್ತವನ್ನು ಕೃತಕವಾಗಿ ತಯಾರಿಸಲು ಸಾಧ್ಯವಿಲ್ಲ, ಇಂದು ರಾಷ್ಟ್ರಾದ್ಯಂತ ಸಂಘ ಸಂಸ್ಥೆಗಳು–ರಕ್ತದಾನಿಗಳು ರಾಷ್ಟ್ರೀಯ ಸ್ವಯಂ ಪ್ರೇರಿತ ರಕ್ತದಾನ ದಿನಾಚರಣೆ ಆಚರಿಸುವ ಮೂಲಕ ರಕ್ತದಾನ ಮಾಡಲಾಗುತ್ತಿದೆ ಎಂದು ಪ್ರಶಂಸಿಸಿದರು.

ನಂತರ ಕೃಷಿಕ ಲಯನ್ಸ್ ಸಂಸ್ಥೆ ಆಡಳಿತಾಧಿಕಾರಿ ಕೆ.ಟಿ.ಹನುಮಂತು ಮಾತನಾಡಿ, ನಿಜವಾದ ದೈವಿಸ್ವರೂಪಿಗಳು ರಕ್ತದಾನಿಗಳು, ಸುಮಾರು ವಾರ್ಷಿಕ 5–6 ಬಾರಿ ರಕ್ತದಾನ ಮಾಡಿ ಸಾಕಷ್ಟು ಜೀವ ಉಳಿವಿಗೆ ಶಕ್ತಿತುಂಬಿದ್ದಾರೆ ಎಂದರು.

ಇಂತಹ ಮಾನವೀಯತೆಯುಳ್ಳ ರಕ್ತದಾನಿಗಳನ್ನು ಸ್ಮರಿಸಲು ರಾಷ್ಟ್ರೀಯ ರಕ್ತದಾನಿಗಳ ದಿನ ಆಚರಿಸಲಾಗುತ್ತಿದೆ, ಭಾರತ ಸರ್ಕಾರ ರಕ್ತದಾನಿಗಳಿಗೂ ಒಂದು ದಿನ ಮೀಸಲಿರಿಸಿರುವುದು ಶ್ಲಾಘನೀಯ ಎಂದು ನುಡಿದರು. ಭಾರತ ದೇಶದಲ್ಲಿ ರಕ್ತದ ಕೊರತೆ ನೀಗಿಸುತ್ತಿರುವುದು ಸ್ಥಳೀಯ ರಕ್ತದಾನಿಗಳು, ರಕ್ತದಾನಿಗಳೇ ಇಲ್ಲದಿದ್ದರೆ ಅಪಾರ ಪ್ರಮಾಣದಲ್ಲಿ ಜೀವಗಳು ಪ್ರಾಣ ಕಳೆದುಕೊಳ್ಳುತ್ತವೆ, ರಕ್ತದಾನಿಗಳನ್ನು ಗೌರವಿಸಿ, ಅಭಿನಂದಿಸುವ ಕಾರ್ಯವು ನಡೆಯುವುದು ಸೂಕ್ತ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಆರ್.ಸಿ.ಎಚ್.ಅಧಿಕಾರಿ ಡಾ.ಅನಿಲ್‌ಕುಮಾರ್, ನಿವೃತ್ತ ಪ್ರಾಧ್ಯಾಪಕ ಡಾ.ಬಿ.ಎಸ್.ಶಿವಕುಮಾರ್, ರಕ್ತನಿಧಿ ಕೇಂದ್ರ ಮುಖ್ಯಸ್ಥ ಡಾ.ಮುರಳಿಧರ್ ಭಟ್, ರಕ್ತದಾನಿಗಳಾದ ಮಂಜುನಾಥ್ ಕಮ್ಮನಾಯಕನಹಳ್ಳಿ, ತಗ್ಗಹಳ್ಳಿ ರಘು, ಕೃಷಿಕ ಲಯನ್ಸ್ ಸಂಸ್ಥೆ ಅಧ್ಯಕ್ಷ ಮೋಹನ್‌ಕುಮಾರ್, ರೆಡ್‌ಕ್ರಾಸ್ ಸಂಸ್ಥೆಯ ಜಂಟಿ ಕಾರ್ಯದರ್ಶಿ ರಂಗಸ್ವಾಮಿ, ಕಾಲೇಜಿನ ಪ್ರಾಂಶುಪಾಲ, ಉಪನ್ಯಾಸಕರು ಹಾಜರಿದ್ದರು.

ಮದ್ಯ ಮಾರಾಟ ತಡೆಗೆ ಒತ್ತಾಯಿಸಿ

ರೈತರು, ಮಹಿಳೆಯರಿಂದ ಪೊರಕೆ ಚಳವಳಿ



ಕೊಳ್ಳೇಗಾಲ, ಅ.1–ಗ್ರಾಮೀಣ ಪ್ರದೇಶಗಳಲ್ಲಿ ಪೆಟ್ಟಿಗೆ ಅಂಗಡಿ ಸೇರಿದಂತೆ ಎಲ್ಲೆಡೆ ಅಕ್ರಮ ಮದ್ಯ ಮಾರಾಟ ನಡೆಯುತ್ತಿದ್ದು, ಅಬಕಾರಿ ಇಲಾಖಾಧಿಕಾರಿಗಳು ಜಾಣ ಮೌನ ವಹಿಸಿದ್ದಾರೆ ಎಂದು ಆರೋಪಿಸಿ ರೈತ ಸಂಘದ ಮುಖಂಡರು, 50ಕ್ಕೂ ಅಧಿಕ ಮಹಿಳೆಯರು ಪೊರಕೆ ಹಿಡಿದು ಅಬಕಾರಿ ಕಚೇರಿ ಮುಂದೆ ಶನಿವಾರ ಚಳವಳಿ ನಡೆಸಿದರು.

ಬೆಳಗ್ಗೆ ಪೊರಕೆ ಹಿಡಿದು ವಿವಿಧ ರಸ್ತೆಗಳಲ್ಲಿ ಮೆರವಣಿಗೆ ಸಾಗಿದ ಮಹಿಳೆಯರು, ರೈತ ಸಂಘದ ಮುಖಂಡರು ಅಬಕಾರಿ ಇಲಾಖೆ ಎದುರು ಜಮಾಯಿಸಿ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಗ್ರಾಮಾಂತರ ಪ್ರದೇಶಗಳಲ್ಲಿ ಅಕ್ರಮ ಮದ್ಯ ಮಾರಾಟ ರಾಜಾರೋಷವಾಗಿ ನಡೆಯುತ್ತಿದ್ದರೂ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿಲ್ಲ. ಇದರಿಂದ ಯುವಕರು, ಹಿರಿಯರು ಮದ್ಯ ವ್ಯಸನಿಗಳಾಗುತ್ತಿದ್ದಾರೆ. ಹಲವು ಸಾರ್ವಜನಿಕ ಸಭೆಗಳಲ್ಲಿ ಈ ವಿಚಾರ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈ ವೇಳೆ ಅಬಕಾರಿ ನಿರೀಕ್ಷಕ ಸುನೀಲ್ ಮಾತನಾಡಿ, 2 ವರ್ಷಗಳಲ್ಲಿ 656 ಕಡೆ ದಾಳಿ ನಡೆಸಿ ಅಕ್ರಮ ತಡೆಗೆ ಕ್ರಮ ವಹಿಸಲಾಗಿದೆ. ಈಗಲೂ ದೂರು ಬಂದರೆ ಕ್ರಮ ವಹಿಸುತ್ತೇವೆ ಎಂದು ಸಮಜಾಯಿಷಿ ನೀಡಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ರೈತ ಸಂಘದ ಮುಖಂಡರು, ನೀವು ಮುಂದಿನ ದಿನಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಅಕ್ರಮ ಮದ್ಯ ಮಾರಾಟ ತಡೆಯದಿದ್ದರೆ ನಿಮ್ಮ ಕಚೇರಿಗೆ ಬೀಗ ಜಡಿದು ಉಪವಾಸ ಸತ್ಯಾಗ್ರಹ ಹೂಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ, ರೈತ ಸಂಘದ ಹಿರಿಯ ಮುಖಂಡ ಶೈಲೇಂದ್ರ ಪ್ರತಿಭಟನೆ ನೇತೃತ್ವ ವಹಿಸಿದ್ದರು. ಮುಖಂಡರಾದ ಮಧುವನಹಳ್ಳಿ ಬಸವರಾಜು, ಗುರುಮಲ್ಲಯ್ಯ, ಕೆ.ಕೆ.ಮೂರ್ತಿ, ವಕೀಲ ಬಸವರಾಜು, ರಾಜಶೇಖರ್‌ಮೂರ್ತಿ, ಭಾಸ್ಕರ್, ಕ್ಯಾತ್ರಿನಾ, ಮಾದಮ್ಮ, ಸವರಿಯಮ್ಮ, ಪೊನ್ನಿ, ಜಯರಾಕಿಣಿ, ಸಗಯರಾಜ್, ಸವರಿಯಮ್ಮ, ರೀಟಾ ಮೇರಿ, ಅಂತೋಣಿಯಮ್ಮ, ಪೆರಿಯಾನಾಯಗಂ, ನಾಗೇಶ್ ನಾಯ್ಕ, ಸಿದ್ದರಾಜು ನಾಯಕ, ಜೆಮ್ಸ್, ಕೃಷ್ಣ ನಾಯಕ ಇನ್ನಿತರರಿದ್ದರು.

ಇಂದಿನಿಂದ ಶೃಂಗೇರಿ ಶಂಕರ ಮಠದಲ್ಲಿ ಪೂಜಾ ಕೈಂಕರ್ಯ

ಚಾಮರಾಜನಗರ, ಅ.1– ತಾಲೂಕಿನ ಹೆಬ್ಬಸೂರು ಗ್ರಾಮದಲ್ಲಿರುವ ಶ್ರೀ ಶೃಂಗೇರಿ ಶಂಕರಮಠದಲ್ಲಿ ನವರಾತ್ರಿ ಹಬ್ಬದ ಪ್ರಯುಕ್ತ ಅ.2ರಿಂದ 5ರವರೆಗೆ ವಿವಿಧ ಪೂಜಾ ಕಾರ್ಯಗಳನ್ನು ಏರ್ಪಡಿಸಲಾಗಿದೆ ಎಂದು ದೇವಸ್ಥಾನದ ಅಧ್ಯಕ್ಷ ಹೆಚ್.ಎಸ್. ಶ್ರೀಧರ್‌ಪ್ರಸಾದ್ ತಿಳಿಸಿದ್ದಾರೆ. ಅ.2ರಂದು ಬೆಳಗ್ಗೆ 8 ಗಂಟೆಗೆ ಸರಸ್ವತಿ ಹೋಮ, 3ರಂದು ಬೆಳಗ್ಗೆ 8 ಗಂಟೆಗೆ ದುರ್ಗಾ ಹೋಮ, 5ರಂದು ಬೆಳಗ್ಗೆ 7.30ಕ್ಕೆ, ನವಚಂಡಿಕಾಯಾಗ ಮತ್ತು ಲಕ್ಷ್ಮೀ ನಾರಾಯಣ ಹೃದಯ ಹೋಮ, ಸಂಜೆ 7 ಗಂಟೆಗೆ ಉಯ್ಯಲೋತ್ಸವ ಆಯೋಜಿಸಲಾಗಿದೆ. ಭಕ್ತಾದಿಗಳು ಸಕಾಲಕ್ಕೆ ಆಗಮಿಸುವಂತೆ ಶ್ರೀಧರ್‌ಪ್ರಸಾದ್ ಕೋರಿದ್ದಾರೆ.

ಇಂದು ಗಾಂಧಿ ಜಯಂತಿ

ಚಾಮರಾಜನಗರ, ಅ.1– ಚಾಮರಾಜನಗರ ಜಿಲ್ಲಾಡಳಿತ ವತಿಯಿಂದ ರಾಷ್ಟ್ರಪಿತ ಮಹಾತ್ಮಗಾಂಧಿ ಜಯಂತಿ ಆಚರಣೆ ಕಾರ್ಯಕ್ರಮವನ್ನು ಅಕ್ಟೋಬರ್ 2ರಂದು ಬೆಳಗ್ಗೆ 8.30ಕ್ಕೆ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕಿರಿಯರಿಗೆ ಹಿರಿಯರ ಮಾರ್ಗದರ್ಶನ ಅಗತ್ಯ

ಶಾಸಕ ಸಿ.ಪುಟ್ಟರಂಗಶೆಟ್ಟಿ



ಚಾಮರಾಜನಗರ,ಅ.1–ಹಿರಿಯರ ಅನುಭವ ಹಾಗೂ ಮಾರ್ಗದರ್ಶನವನ್ನು ಇಂದಿನ ಯುವ ಪೀಳಿಗೆಯವರು ಸದ್ಬಳಕೆ ಮಾಡಿಕೊಂಡು ಉತ್ತಮ ಜೀವನ ರೂಪಿಸಿಕೊಳ್ಳಬೇಕು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಸಲಹೆ ನೀಡಿದರು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಪಂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಹಿರಿಯ ನಾಗರಿಕರ ಸಬಲೀಕರಣ ಕ್ಷೇತ್ರದಲ್ಲಿ ಭಾಗಿಯಾಗಿರುವ ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ನಡೆದ ವಿಶ್ವ ಹಿರಿಯ ನಾಗರಿಕರ ದಿನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಹಿರಿಯರ ಮಾರ್ಗದರ್ಶನ ಇಂದಿನ ಯುವ ಪೀಳಿಗೆಗೆ ದಾರಿದೀಪವಾಗಬೇಕು. ಉತ್ತಮ ಶಿಕ್ಷಣ ಕೊಡಿಸಿ, ಭದ್ರ ಬದುಕು ಕಟ್ಟಿಕೊಳ್ಳಲು ನೆರವಾದ ತಂದೆ ತಾಯಿಯರನ್ನು ಸಲಹುವುದೇ ನಮ್ಮ ಕರ್ತವ್ಯ. ತನ್ನ ಕುಟುಂಬದ ಏಳಿಗೆಗೆ ಹಗಲಿರುಳು ದುಡಿದು ಬದುಕಿನ ಸಂಧ್ಯಾಕಾಲದಲ್ಲಿರುವ ಹಿರಿಯರಿಗೆ ಪ್ರೀತಿ, ಗೌರವಗಳಿಂದ ನೋಡಿಕೊಳ್ಳುವುದರ ಜೊತೆ ಮಕ್ಕಳು ತಂದೆ ತಾಯಿಯನ್ನು ದೇವರು ಎಂದು ಭಾವಿಸಬೇಕು ಎಂದರು.

ನಗರಸಭಾ ಅಧ್ಯಕ್ಷೆ ಆಶಾ ನಟರಾಜು, ಎಡಿಸಿ ಎಸ್.ಕಾತ್ಯಾಯಿನಿದೇವಿ, ಹಿರಿಯ ನಾಗರಿಕ ಹುಚ್ಚೇಗೌಡ ಮಾತನಾಡಿದರು. ಇದೇ ವೇಳೆ ಹಿರಿಯ ನಾಗರಿಕರು ಹಾಗೂ ಸ್ವಾತಂತ್ರ್ಯ ಹೋರಾಟಗಾರರಾದ ಲಲಿತಾ ಜಿ.ಟಾಗೆಟ್, ಹಿರಿಯ ನಾಗರಿಕರಾದ ಹುಚ್ಚೇಗೌಡ, ದಾಸಯ್ಯ, ಸಿ.ಮಾದಯ್ಯ, ಇಬ್ರಾಹಿಂ, ನಿವೃತ್ತ ಶಿಕ್ಷಕ ಸಿ.ಪುಟ್ಟಸ್ವಾಮಿ ಅವರನ್ನು ಜಿಲ್ಲಾಡಳಿತದ ಪರವಾಗಿ ಸನ್ಮಾನಿಸಲಾಯಿತು. ಜಿಪಂ ಮುಖ್ಯ ಯೋಜನಾಧಿಕಾರಿ ಪ್ರೇಮಕುಮಾರ್, ಸ್ವಯಂ ಸೇವಾ ಸಂಸ್ಥೆಗಳ ಮುಖ್ಯಸ್ಥರಾದ ಗುರುರಾಜ್, ಮಹದೇವಸ್ವಾಮಿ ಇತರರು ಸಮಾರಂಭದಲ್ಲಿದ್ದರು.

ಅರಣ್ಯ ಇಲಾಖೆ ನಿಯಮ ಉಲ್ಲಂಘನೆ

ಕಾಂಗ್ರೆಸ್ ವಿರುದ್ಧ ಬಿಜೆಪಿ ಆರೋಪ



ಗುಂಡ್ಲುಪೇಟೆ ಅ.1–ಪಟ್ಟಣದಿಂದ ಆರಂಭವಾದ ಭಾರತ ಐಕ್ಯತಾ ಯಾತ್ರೆಗೆ ಶನಿವಾರ ತಮಿಳುನಾಡಿನ ಗೂಡಲೂರಿನಿಂದ ಬಂಡೀಪುರ ರಾಷ್ಟ್ರೀಯ ಉದ್ಯಾನವನದ ಮೂಲಕ ಆಗಮಿಸುತ್ತಿದ್ದ ರಾಹುಲ್ ಗಾಂಧಿ ಅವರನ್ನು ಸ್ವಾಗತಿಸಲು ಬಂಡೀಪುರ ಅರಣ್ಯ ಪ್ರದೇಶದ ಹೆದ್ದಾರಿಯಲ್ಲಿ ವಾಹನಗಳನ್ನು ನಿಲ್ಲಿಸಿದ್ದ ಕಾಂಗ್ರೆಸ್ ನಾಯಕರ ವಿರುದ್ಧ ಕ್ರಮ ಕೈಗೊಳ್ಳುವಂತೆ ಬಿಜೆಪಿ ಮುಖಂಡರು ಅರಣ್ಯ ಇಲಾಖೆಗೆ ದೂರು ನೀಡಿದ್ದಾರೆ.

ಬಂಡೀಪುರ ಮಾರ್ಗವಾಗಿ ಗುಂಡ್ಲುಪೇಟೆಗೆ ಆಗಮಿಸುತ್ತಿದ್ದ ರಾಹುಲ್ ಗಾಂಧಿ ಅವರನ್ನು ಸ್ವಾಗತಿಸಲು ತೆರಳಿದ್ದ ವಿಪಕ್ಷ ನಾಯಕ ಸಿದ್ದರಾಮಯ್ಯ, ಕಾಂಗ್ರೆಸ್ ಮುಖಂಡರಾದ ಎಂ.ಬಿ.ಪಾಟೀಲ, ಕೆ.ಜೆ.ಜಾರ್ಜ್, ಹೆಚ್.ಸಿ.ಮಹದೇವಪ್ಪ ಮುಂತಾದ ನಾಯಕರು ಅರಣ್ಯ ಕಾಯ್ದೆ ಉಲ್ಲಂಘಿಸಿ ತಮ್ಮ ವಾಹನಗಳನ್ನು ಹುಲಿ ಸಂರಕ್ಷಿತಾ ಪ್ರದೇಶದ ಅರಣ್ಯದಲ್ಲಿ ನಿಲ್ಲಿಸಿದ್ದರು. ಅಲ್ಲದೆ ರಾಹುಲ್ ಸೇರಿ ಬಹುತೇಕರು ಕಾರುಗಳಿಂದ ಕೆಳಗಿಳಿದಿದ್ದರು. ಜನ ಸಾಮಾನ್ಯರು ಅರಣ್ಯ ಪ್ರದೇಶದ ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸಿದರೆ ದಂಡ ಹಾಕುವ ಅರಣ್ಯ ಇಲಾಖೆ ಅಧಿಕಾರಿಗಳು, ರಾಜಕಾರಣಿಗಳಿಗೆ ಯಾಕೆ ದಂಡ ಹಾಕಿಲ್ಲ ಎಂದು ಪ್ರಶ್ನಿಸಿರುವುದಲ್ಲದೆ, ಅರಣ್ಯ ಇಲಾಖೆ ನಿಯಮ ಉಲ್ಲಂಘಿಸಿದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಬಂಡೀಪುರ ಹುಲಿ ಯೋಜನೆ ವಿಭಾಗೀಯ ಕಚೇರಿಯಲ್ಲಿ ವ್ಯವಸ್ಥಾಪಕ ನಾಗೇಂದ್ರ ಅವರಿಗೆ ಸಲ್ಲಿಸಿರುವ ದೂರಿನಲ್ಲಿ ಬಿಜೆಪಿ ಮುಖಂಡರು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಬಿಜೆಪಿ ಮಂಡಲಾಧ್ಯಕ್ಷ ಡಿ.ಪಿಜಗದೀಶ್, ಮಾಧ್ಯಮ ಸಂಚಾಲಕ ಹೆಚ್.ಸಿ.ಮಂಜುನಾಥ್, ಹಂಗಳ ಗ್ರಾಪಂ ಸದಸ್ಯ ನಂದೀಶ್, ಪುರಸಭೆ ಸದಸ್ಯ ಕಿರಣ್‌ಗೌಡ, ಹೆಚ್.ವಿ.ಮಂಜು, ಬಸವೇಶ್, ಮಾಡ್ರಹಳ್ಳಿ ನಾಗೇಂದ್ರ ಹಾಗೂ ಇತರರಿದ್ದರು.

ಮೂರನೇ ಪುಟದಿಂದ

ಜಂಬೂಸವಾರಿ ತಾಲೀಮು

ಪ್ರಮಾಣದ ತಾಲೀಮು ನಡೆಸಲಾಗುತ್ತದೆ. ಇಂದು ಅಶ್ವಪಡೆ ಬಂದಿದ್ದ ಕಾರಣ, ಕೇವಲ ಮೂರು ಆನೆಗಳನ್ನಷ್ಟೇ ಕಳುಹಿಸಿಕೊಡುವಂತೆ ಕೇಳಿಕೊಂಡಿದ್ದರು. ಮಳೆ ಹಿನ್ನೆಲೆಯಲ್ಲಿ ದಸರಾ ಗಜಪಡೆಯನ್ನು ಇಂದು ಜಂಬೂಸವಾರಿ ಮಾರ್ಗದಲ್ಲಿ ತಾಲೀಮಿಗೆ ಕರೆದೊಯ್ಯದ ಕಾರಣ ಅಂಬಾರಿ ಆನೆ ಅಭಿಮನ್ಯು, ಕುಮ್ಕಿ ಆನೆಗಳಾದ ಕಾವೇರಿ, ಚೈತ್ರ ಆನೆಯನ್ನಷ್ಟೇ ಕಳುಹಿಸಿಕೊಡಲಾಗಿತ್ತು. ನಾಳೆಯಿಂದ ಜಂಬೂಸವಾರಿ ಮೆರವಣಿಗೆಯಲ್ಲಿ ಸಾಗುವ ಎಲ್ಲಾ ಆನೆಗಳು ತಾಲೀಮಿನಲ್ಲಿ ಪಾಲ್ಗೊಳ್ಳಲಿವೆ ಎಂದು ತಿಳಿಸಿದರು.



ಅ.7ರಂದು ಸರ್ವಪಕ್ಷ ಸಭೆ

ಮೀಸಲಾತಿಯನ್ನು ಹೆಚ್ಚಳ ಮಾಡಬೇಕು ಎಂಬ ಕೂಗು ಹೆಚ್ಚಾದ ಹಿನ್ನೆಲೆಯಲ್ಲಿ ನ್ಯಾಯಮೂರ್ತಿ ನಾಗಮೋಹನದಾಸ್ ಸಮಿತಿಯನ್ನು ಸರ್ಕಾರ ರಚಿಸಿತ್ತು. ಅದರನುಸಾರ ವ್ಯಾಪಕ ಚರ್ಚೆ, ಅಧ್ಯಯನ ನಡೆಸಿದ ನಾಗ ಮೋಹನದಾಸ್ ಸಮಿತಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಕಲ್ಪಿಸಲಾಗಿರುವ ಮೀಸಲಾತಿಯ ಪ್ರಮಾಣ, ಅವುಗಳ ಜನಸಂಖ್ಯೆಗಿಂತ ಕಡಿಮೆ ಎಂಬುದನ್ನು ಎತ್ತಿ ತೋರಿಸಿತ್ತು. ಪರಿಶಿಷ್ಟ ಜಾತಿಗೆ ಈಗ ನೀಡಲಾಗುತ್ತಿರುವ ಮೀಸಲಾತಿಯ ಪ್ರಮಾಣವನ್ನು ಶೇಕಡಾ ಹದಿನಾಲ್ಕರಿಂದ ಹದಿನೇಳಕ್ಕೆ ಹೆಚ್ಚಿಸಬೇಕು. ಪರಿಶಿಷ್ಟ ಪಂಗಡಕ್ಕೆ ನೀಡಲಾಗುತ್ತಿರುವ ಮೀಸಲಾತಿ ಈಗ ಶೇಕಡಾ ಮೂರರಷ್ಟಿದ್ದು, ಅದನ್ನು ಶೇ.7ಕ್ಕೆ ಏರಿಸಬೇಕು ಎಂದು ಶಿಫಾರಸು ಮಾಡಿತ್ತು. ಆದರೆ ಈ ವರದಿಯನ್ನು ಜಾರಿ ಮಾಡಲು ಸರ್ಕಾರಗಳು ಮನಸ್ಸು ಮಾಡಲಿಲ್ಲ. ಒಟ್ಟಾರೆ ಮೀಸಲಾತಿಯ ಪ್ರಮಾಣ ಶೇ. 50 ಮೀರಬಾರದು ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿದ್ದು, ಈ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿ, ಪಂಗಡಗಳ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವುದು ಹೇಗೆ ಎಂಬುದು ಸರ್ಕಾರಗಳಿಗೆ ಬಗೆಹರಿಯದ ಸಮಸ್ಯೆಯಾಗಿತ್ತು.

ಆದರೆ ಪರಿಶಿಷ್ಟರ ಮೀಸಲಾತಿಗೆ ಒತ್ತಾಯಿಸಿ ನಿರಂತರವಾಗಿ ಪ್ರತಿಭಟನೆಗಳು ನಡೆಯುತ್ತಾ ಬಂದಿದ್ದವಲ್ಲದೆ, ವಾಲ್ಮೀಕಿ ಸಮುದಾಯದ ಸ್ವಾಮೀಜಿ ಧರಣಿ ಕುಳಿತಿದ್ದರು. ಇಂತಹ ಪ್ರತಿಭಟನೆ, ಧರಣಿಗಳಿಗೆ ಮಣಿದ ಸರ್ಕಾರ ಸರ್ವಪಕ್ಷ ಸಭೆ ಕರೆದು ಈ ಕುರಿತು ಚರ್ಚಿಸುವುದಾಗಿ ವಿಧಾನಸಭೆಯಲ್ಲಿ ಭರವಸೆ ನೀಡಿತ್ತು. ಅಷ್ಟೇ ಅಲ್ಲ, ಮುಖ್ಯಮಂತ್ರಿ ಸೇರಿದಂತೆ ಪಕ್ಷಾತೀತವಾಗಿ ಎಲ್ಲಾ ನಾಯಕರು ಮೀಸಲಾತಿ ಹೆಚ್ಚಳಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿದ್ದರು. ಮುಂಬರುವ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಆಡಳಿತಾರೂಢ ಬಿಜೆಪಿ ರಾಜಕೀಯ ಲಾಭ ಪಡೆದುಕೊಳ್ಳಲು ಎಸ್‌ಟಿ ಸಮುದಾಯದ ಮೀಸಲಾತಿಯನ್ನು ಹೆಚ್ಚಳ ಮಾಡುವ ಎಲ್ಲಾ ಸಾಧ್ಯತೆಯು ಹೆಚ್ಚಿದೆ.

ಕರೆಂಟ್ ಶಾಕ್

ಎಲ್ಲಿ	ಹೆಚ್ಚಳ
●ಬೆಸ್ಕಾಂ	43 ಪೈಸೆ
●ಸೆಸ್ಕಾಂ	35 ಪೈಸೆ
●ಹೆಸ್ಕಾಂ	35 ಪೈಸೆ
●ಜೆಸ್ಕಾಂ	35 ಪೈಸೆ
●ಮೆಸ್ಕಾಂ	24 ಪೈಸೆ

ಆದರೆ ಬಾರಿ ಆಗಿರುವ ದರ ಏರಿಕೆ ತೀರಾ ಹೆಚ್ಚು ಅನ್ನುವ ಅಭಿಪ್ರಾಯ ಕೇಳಿಬಂದಿದೆ. ಅಲ್ಲದೇ ಎಸ್ಕಾಂಗಳು ಖರೀದಿ ಹೆಚ್ಚಳ ನೆಪ, ನಷ್ಟದ ನೆಪವನ್ನು ಒಡ್ಡುತ್ತಿವೆ. ಅಸಲಿಗೆ ಬೇರೆ ಮಾರ್ಗದಿಂದ ನಷ್ಟವನ್ನು ಸರಿತೂಗಿಸಬಹುದು. ಆದರೆ ಅದರ ಹತ್ತಿರ ಗಮನ ಹರಿಸದೇ ಕೇವಲ ದರ ಏರಿಕೆ ಮಾತ್ರ ಮಾಡಲಾಗುತ್ತಿದೆ ಎಂಬ ಟೀಕೆ ಕೇಳಿ ಬಂದಿದೆ.

ಎಷ್ಟು ಹೆಚ್ಚಳ: 2022-ಏಪ್ರಿಲ್‌ನಲ್ಲಿ ಪ್ರತಿ ಯೂನಿಟ್‌ಗೆ 33 ಪೈಸೆ ಹೆಚ್ಚಳ ಮಾಡ ಲಾಗಿತ್ತು. ವಾರ್ಷಿಕವಾಗಿ ವಿದ್ಯುತ್ ದರ ಹೆಚ್ಚಳ ಕಾರಣ ನೀಡಲಾಗಿತ್ತು. 2022-ಜೂನ್‌ನಲ್ಲಿ ಪ್ರತಿ ಯೂನಿಟ್‌ಗೆ 31 ಪೈಸೆ ಏರಿಕೆ ಮಾಡಲಾಗಿತ್ತು. ಇಂಧನ ಹೊಂದಾಣಿಕೆ ಶುಲ್ಕ ಎಂದು ಕಾರಣವನ್ನು ನೀಡಿತ್ತು. ಈಗ ಇಂಧನ ಇಲಾಖೆ ನೀಡುತ್ತಿರುವ ಕಾರಣ ಕಲ್ಲಿದ್ದಲು ಖರೀದಿ ವೆಚ್ಚದಲ್ಲಿ ಗಣನೀಯ ಏರಿಕೆ. ಪ್ರತಿ 3 ತಿಂಗಳಿಗೊಮ್ಮೆ ಇಂಧನ ಹೊಂದಾಣಿಕೆ ಶುಲ್ಕ ಪರಿಷ್ಕರಣೆ ಮಾಡಬೇಕು. ಆದರೆ ಗ್ರಾಹಕರಿಗೆ ಹೊರೆ ಬೀಳಬಾರದು ಎಂಬ ಕಾರಣಕ್ಕೆ 6 ತಿಂಗಳಿಗೊಮ್ಮೆ ಶುಲ್ಕ ಹೆಚ್ಚಳ ಮಾಡಲಾಗುತ್ತಿದೆ. 2022 ಏ-ಜೂ.ವರೆಗೆ ಬೆಸ್ಕಾಂ ವ್ಯಾಪ್ತಿಯಲ್ಲಿ 643 ಕೋಟಿ ವಿದ್ಯುತ್ ಖರೀದಿ ಹೆಚ್ಚಳವಾಗಿದೆ.

ನಷ್ಟ ತಗ್ಗಿಸಲು ಏನು ಮಾಡಬಹುದು

●ವಿದ್ಯುತ್ ಸೋರಿಕೆ ತಡೆಗಟ್ಟಬೇಕು. ಜಲವಿದ್ಯುತ್, ಸೌರಶಕ್ತಿ ವಿದ್ಯುತ್, ಪವನ ಶಕ್ತಿ ಬಳಕೆ ಹೆಚ್ಚಿಸಬೇಕು. ●ಥರ್ಮಲ್ ಪವರ್ ಪ್ಲ್ಯಾಂಟ್‌ಗೆ ಮಾತ್ರ ಇಂಧನ ಇಲಾಖೆ ಅವಲಂಬಿತವಾಗಿದ್ದು ದೀರ್ಘಕಾಲಿಕವಾಗಿ ವಿದ್ಯುತ್ ಖರೀದಿ ಒಪ್ಪಂದ ಕೈಬಿಡಬೇಕು. ●ರಾಜ್ಯ ಸರ್ಕಾರದ ಇಲಾಖೆ, ಕೇಂದ್ರದ ಇಲಾಖೆಗಳಿಂದ 6,670 ಕೋಟಿ ಬಿಲ್ ಬಾಕಿ ಉಳಿಸಿಕೊಂಡಿದ್ದು ಆ ಹಣವನ್ನು ಬಡ್ಡಿ ಸಮೇತ ವಸೂಲಿ ಮಾಡಬೇಕು. ●ಗುಣಮಟ್ಟದಲ್ಲಿ ವಿದ್ಯುತ್ ಸರಬರಾಜು, ಹೊಸ ತಂತ್ರಜ್ಞಾನ ಬಳಕೆ

ಐಕ್ಯತಾ ಯಾತ್ರೆ

ಬೇಗೂರಿನಿಂದ ಕಾರವಾನ್‌ನಲ್ಲಿ ತೊಂಡವಾಡಿ ಗೇಟ್‌ಗೆ ಆಗಮಿಸಿದ ರಾಹುಲ್ ಗಾಂಧಿಯವರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಪಕ್ಷ ನಾಯಕ ಸಿದ್ದರಾಮಯ್ಯ, ಪರಿಷತ್ ವಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್, ಮಾಜಿ ಸಚಿವರಾದ ಕೆ.ಜೆ.ಜಾರ್ಜ್, ಎಂ.ಬಿ.ಪಾಟೀಲ್, ಹೆಚ್.ಸಿ.ಮಹದೇವಪ್ಪ, ಶಾಸಕ ಡಾ.ಯತೀಂದ್ರ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಧ್ರುವನಾರಾಯಣ್, ಸಲೀಂ ಅಹಮದ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಸ್ವಾಗತಿಸಿದರು. ಅಲ್ಲಿಂದ ರಾಹುಲ್ ಗಾಂಧಿಯವರೊಂದಿಗೆ ಹಿರಿಯ ಮುಖಂಡರು ಸೇರಿದಂತೆ ಸುಮಾರು 20 ಸಾವಿರಕ್ಕೂ ಅಧಿಕ ಮಂದಿ ಕಾರ್ಯಕರ್ತರು ಹೆಜ್ಜೆ ಹಾಕಿದರು. ಸೇವಾ ದಳದವರು ಕಾಂಗ್ರೆಸ್ ಧ್ವಜ ಹಿಡಿದು ಸಾಗಿದರೆ, ಮಂಗಳವಾದ್ಯ, ಬ್ಯಾಂಡ್ ವಾದನ, ಆದಿವಾಸಿಗಳ ಕುಣಿತ, ಕಂಸಾಳೆ, ಡೊಳ್ಳು ಕುಣಿತ, ವೀರಗಾಸೆ, ಚಂಡೆ ಮದ್ದಳೆ, ನಗಾರಿ, ಗಾರುಡಿ ಗೊಂಬೆ, ಗೊರವರ ಕುಣಿತ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಲಾ ತಂಡಗಳು ಯಾತ್ರೆಗೆ ಮೆರಗು ನೀಡಿದವು.

ತೊಂಡವಾಡಿ ಗೇಟ್‌ನಿಂದ ಹೊರಟ ಪಾದಯಾತ್ರೆಯು ಹಿರೀಕಾಟಿ ಗೇಟ್, ಯಲಚಕೆರೆ ಗೇಟ್, ಸಿಂಧುವಳ್ಳಿಪುರ, ಮುದ್ದನಹಳ್ಳಿ ಗೇಟ್ ಮೂಲಕ ಕಳಲೆ ಗೇಟ್ ತಲುಪಿತು. ಈ ಮಧ್ಯೆ ಸಿಂಧುವಳ್ಳಿಯ ಸುರುಚಿ ಕಾರ್ಖಾನೆಯಲ್ಲಿ ರಾಹುಲ್ ಗಾಂಧಿ ಹಾಗೂ ಮುಖಂಡರು ಉಪಾಹಾರ ಸೇವಿಸಿದರು. ಕಳಲೆ ಗೇಟ್ ಬಳಿ ಹಾಕಲಾಗಿದ್ದ ತಾತ್ಕಾಲಿಕ ಟೆಂಟ್‌ನಲ್ಲಿ 30 ಸಾವಿರ ಮಂದಿಗೆ ಉಪಾಹಾರಕ್ಕಾಗಿ ವಾಂಗೀಬಾತ್, ಮಧ್ಯಾಹ್ನದ ಊಟಕ್ಕೆ ಅನ್ನ-ಸಾಂಬಾರ್, ಹಪ್ಪಳ ಹಾಗೂ ಮೈಸೂರ್‌ಪಾಕ್ ವ್ಯವಸ್ಥೆ ಮಾಡಲಾಗಿತ್ತು. ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ್ ಕಾರ್ಯಕರ್ತರಿಗೆ ಊಟ ಬಡಿಸುವ ಮೂಲಕ ಗಮನ ಸೆಳೆದರು.

ಕಳಲೆ ಗೇಟ್‌ನಲ್ಲಿ ರಾಹುಲ್ ಗಾಂಧಿಯವರು ಊಟ ಮಾಡಿದ ನಂತರ ಮಧ್ಯಾಹ್ನ 2.30 ರಿಂದ 3.30ರವರೆಗೆ ರೈತ ಮುಖಂಡರು, ವಕೀಲರು, ಕಾರ್ಮಿಕರೂ ಸೇರಿದಂತೆ ವಿವಿಧ ಕ್ಷೇತ್ರದ ಗಣ್ಯರೊಂದಿಗೆ ಸಂವಾದ ನಡೆಸಿದರು. ಈ ವೇಳೆ ರೈತ ಮುಖಂಡರು, ಕೃಷಿ ಚಟುವಟಿಕೆಗೆ ಬಳಸುವ ಯಂತ್ರೋಪಕರಣಗಳ ಬೆಲೆ ಏರಿಕೆ, ಕಬ್ಬಿಗೆ ವೈಜ್ಞಾನಿಕ ದರ ನಿಗದಿ, ಕೃಷಿ ಕಾಯಿದೆಗಳನ್ನು ರಾಜ್ಯದಲ್ಲಿ ರದ್ದುಪಡಿಸದಿರುವುದು, ಸ್ವಾಮಿನಾಥನ್ ವರದಿ ಜಾರಿಯಾಗದಿರುವುದು ಸೇರಿದಂತೆ ವಿವಿಧ ಸಮಸ್ಯೆಗಳನ್ನು ರಾಹುಲ್ ಗಾಂಧಿಯವರಿಗೆ ತಿಳಿಸಿದರು. ಇಂದಿನ ಪಾದಯಾತ್ರೆಯಲ್ಲಿ ಗುಂಡ್ಲುಪೇಟೆ, ನಂಜನಗೂಡು, ಮೈಸೂರು, ಹೆಚ್.ಡಿ.ಕೋಟೆ, ತಿ.ನರಸೀಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕನಕಪುರ, ರಾಮನಗರ, ಕೊಡಗು ಭಾಗಗಳಿಂದ ಆಗಮಿಸಿದ್ದ ಕಾರ್ಯಕರ್ತರು ಪಾಲ್ಗೊಂಡಿದ್ದರು. ಪಾದಯಾತ್ರೆ ಮಾರ್ಗದುದ್ದಕ್ಕೂ ರಸ್ತೆ ಇಕ್ಕೆಲಗಳಲ್ಲಿ ಕಾಂಗ್ರೆಸ್ ಹಾಗೂ ಭಾರತ ಐಕ್ಯತಾ ಯಾತ್ರೆಯ ಫ್ಲೆಕ್ಸ್‌ಗಳು ರಾರಾಜಿಸಿದವು. ಕಾರ್ಯಕರ್ತರು ರಾಹುಲ್ ಗಾಂಧಿ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರಿಗೆ ಅವರ ಪರ ಘೋಷಣೆಗಳನ್ನು ಕೂಗಿದರು. ಪಾದಯಾತ್ರೆಯಲ್ಲಿ ಹಿರಿಯ ಮುಖಂಡರು ಮಾತ್ರವಲ್ಲದೆ, ಶಾಸಕರಾದ ಪ್ರಿಯಾಂಕ ಖರ್ಗೆ, ಡಾ. ಯತೀಂದ್ರ, ಲಕ್ಷ್ಮೀ ಹೆಬ್ಬಾಳ್ಕರ್, ಮಾಜಿ ಸಚಿವರಾದ ಉಮಾಶ್ರೀ, ಮೋಟಮ್ಮ, ರೈತ ಮುಖಂಡ ಯೋಗೇಂದ್ರನಾಥ ಯಾದವ್, ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ. ವಿಜಯ ಕುಮಾರ್, ತಾಪಂ ಮಾಜಿ ಅಧ್ಯಕ್ಷ ಬಿ.ಎಂ.ನಾಗೇಶ್‌ರಾಜ್, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಗುಂಡ್ಲುಪೇಟೆ ಕಾಂಗ್ರೆಸ್ ಮುಖಂಡರಾದ ಗಣೇಶ್ ಪ್ರಸಾದ್, ನಂಜುಂಡ ಪ್ರಸಾದ್ ಮುಂತಾದವರು ಭಾಗವಹಿಸಿದ್ದರು. ಮಾರ್ಗದುದ್ದಕ್ಕೂ ಸ್ಥಳೀಯ ಕಾಂಗ್ರೆಸ್ ಮುಖಂಡರು ಪಾದಯಾತ್ರಿಗಳಿಗೆ ಮಜ್ಜಿಗೆ, ಪುಳಿಯೋಗರೆ, ಸಮೋಸಾ, ಕಬ್ಬಿನಹಾಲು, ಬಿಸ್ಕಟ್, ಹಣ್ಣುಗಳನ್ನು ವಿತರಿಸಿ ಉಪಚರಿಸಿದರು. ಸಂಜೆ 5.30ರ ವೇಳೆಗೆ ಪಾದಯಾತ್ರೆಯು ನಂಜನಗೂಡು ತಾಲೂಕಿನ ಚಿಕ್ಕಯ್ಯನ ಛತ್ರದ ಬಳಿ ಅಂತ್ಯಗೊಂಡಿತು. ರಾಹುಲ್ ಗಾಂಧಿ ತಾಂಡವಪುರ ಬಳಿಯ ಎಂಐಟಿ ಕಾಲೇಜು ಬಳಿ ವಾಸ್ತವ್ಯ ಹೂಡಿದ್ದಾರೆ.

ಪೇಸಿಎಂ ಟಿ-ಶರ್ಟ್ ಧರಿಸಿದ ಯುವಕನ ಬಂಧನ

ಗುಂಡ್ಲುಪೇಟೆ, ಅ.1- ರಾಹುಲ್ ಗಾಂಧಿಯವರ ಭಾರತ ಐಕ್ಯತಾ ಯಾತ್ರೆಯಲ್ಲಿ 'ಪೇಸಿಎಂ' ಟಿ-ಶರ್ಟ್ ಧರಿಸಿ, ಧ್ವಜ ಹಿಡಿದು ಸಾಗುತ್ತಿದ್ದ ವಿಜಯಪುರ ಜಿಲ್ಲೆ ಸಿಂಧಗಿಯ ಕಾಂಗ್ರೆಸ್ ಕಾರ್ಯಕರ್ತ ಅಕ್ಷಯ ಕುಮಾರ್‌ನನ್ನು ಚಾಮರಾಜನಗರ ಸೆನ್ ಠಾಣೆ ಪೊಲೀಸರು ಬಂಧಿಸಿ, ಬಿಡುಗಡೆ ಮಾಡಿದ್ದಾರೆ. ರಾಜ್ಯದಲ್ಲಿ ಶುಕ್ರವಾರ ಆರಂಭವಾದ ಭಾರತ ಐಕ್ಯತಾ ಯಾತ್ರೆಯಲ್ಲಿ ಪೇಸಿಎಂ ಲೋಗೋ ಇರುವ ಟಿ-ಶರ್ಟ್ ಧರಿಸಿ, ಪೇಸಿಎಂ ಧ್ವಜ ಹಿಡಿದು ಸಾಗುವ ಮೂಲಕ ಅಕ್ಷಯ ಕುಮಾರ್ ಗಮನ ಸೆಳೆದಿದ್ದರು. ಈ ಕುರಿತು ರಾಜ್ಯದ ಮುಖ್ಯಮಂತ್ರಿಗಳಿಗೆ ಅಗೌರವ ತೋರಲಾಗುತ್ತಿದೆ ಎಂದು ಗುಂಡ್ಲುಪೇಟೆ ಪುರಸಭಾ ಸದಸ್ಯ ಕಿರಣ್‌ಗೌಡ ಚಾಮರಾಜನಗರ ಸೆನ್ ಠಾಣೆಗೆ ದೂರು ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಇಂದು ತೊಂಡವಾಡಿ ಗೇಟ್‌ನಿಂದ ಪಾದಯಾತ್ರೆಯಲ್ಲಿ ಹೊರಟಿದ್ದ ಅಕ್ಷಯ ಕುಮಾರ್ ಟಿ-ಶರ್ಟ್ ಅನ್ನು ತೆಗೆಸಿ ಧ್ವಜವನ್ನು ವಶಪಡಿಸಿಕೊಂಡು ಆತನನ್ನು ಬಂಧಿಸಿದ ಪೊಲೀಸರು ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ. ಅಕ್ಷಯ ಕುಮಾರ್‌ನನ್ನು ಬಂಧಿಸಿದ ಪೊಲೀಸರ ಕ್ರಮಕ್ಕೆ ಕಾಂಗ್ರೆಸ್ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಖ್ಯಾತ ಬಹುಭಾಷಾ ಗಾಯಕ ಸೋನು ನಿಗಮ್ ಗಾನಕ್ಕೆ ಮೈಮರೆತ ಯುವ ಪಡೆ







ಮೂರನೇ ಪುಟದಿಂದ

ಪ್ರೀತಿಯ ಅಲೆ ಎಬ್ಬಿಸಿದರು. 'ಬಾಳ ಬಂಗಾರ ನೀನು, ಹಣೆಯ ಸಿಂಗಾರ ನೀನು ನಿನ್ನ ಕೈಲಾಡೋ ಗೊಂಬೆ ನಾನಯ್ಯ', 'ಜೋಕೆ ನಾನು ಬಳ್ಳಿಯ ಮಿಂಚು', 'ಸುತ್ತಮುತ್ತಲೂ ಸಂಜೆಗತ್ತಲೂ', 'ಸೇ ಸೇ ನನ್ನ ಪ್ರೀತ್ಸೆ', 'ಜಯ ಜಯ ಜಾಕೆಟ್ಟು, ಜಯನ ಗಂಡ ರಾಕೆಟ್ಟು', ಎನ್ನುತ್ತಾ ವರ್ಣರಂಜಿತ ವೇದಿಕೆಯಲ್ಲಿ ಮಿಂಚು ಹರಿಸಿದರು.

ಧ್ರುವ ಸರ್ಜಾ ಮಿಂಚು: 'ಯುವ ದಸರಾ' ವೇದಿಕೆ ಆಗಮಿಸಿದ ಆಕ್ಷನ್ ಪ್ರಿನ್ಸ್ ಧ್ರುವ ಸರ್ಜಾ ಪಂಚಿಂಗ್ ಡೈಲಾಗ್ ಮೂಲಕ ಪ್ರೇಕ್ಷಕರನ್ನು ರಂಜಿಸಿದರು. ಚಿರಂಜೀವಿ ಸರ್ಜಾ ಹಾಗೂ ಪುನೀತ್‌ರಾಜ್‌ಕುಮಾರ್ ಸ್ಮರಿಸುವ ಮೂಲಕ ಎಲ್ಲಾ ನಟರ ಸಿನಿಮಾಗಳನ್ನು ನೋಡಿ ಪ್ರೋತ್ಸಾಹಿಸುವಂತೆ ಮನವಿ ಮಾಡಿದರು.

ಯುವ ಗಾಯಕರ ಹಾಡು, ನೃತ್ಯ: ಸೋನು ನಿಗಮ್ ಆಗಮನಕ್ಕೂ ಮುನ್ನ ಯುವ ಗಾಯಕಿಯರಾದ ಪ್ರಿಯಾ, ಜೋಗಿ, ಗಾಯಕ ಪುರುಷೋತ್ತಮ್, ಬ್ರೋ ಗೌಡ ಹಾಡಿ, ಕುಣಿದು ರಂಜಿಸಿದರು. 'ಯುವ ಸಂಭ್ರಮ'ದಲ್ಲಿ ಅಮೋಘ ನೃತ್ಯ ಪ್ರದರ್ಶನ ನೀಡಿದ್ದ ವಿವಿಧ ಕಾಲೇಜುಗಳ ಕಲಾತಂಡಗಳು ಯುವ ದಸರಾ ವೇದಿಕೆಯಲ್ಲೂ ಕಮಾಲ್ ಮಾಡಿದರು. ಕಡೆಯಲ್ಲಿ ಸರಿಗಮಪ ಖ್ಯಾತಿಯ ಗಾಯಕಿಯರಾದ ಸುಪ್ರಿಯಾ ಜೋಷಿ, ರಮ್ಯ ಹಾಗೂ ರೇಷ್ಮಾ 'ಗಿಲಿಗಿಲಿ ಗಲ್ಲಕ್, ಕಾಲು ಗೆಜ್ಜೆ ಗಲಕ್' ಹಾಡನ್ನು ಹಾಡಿ ಅಭಿಮಾನಿಗಳಿಂದ ಸ್ಟೆಪ್ ಹಾಕಿಸಿದರು. ಬಹುಭಾಷಾ ಗಾಯಕ ಸೋನು ನಿಗಮ್ ಹಾಗೂ ಖ್ಯಾತ ಗಾಯಕಿ ಶಮಿತಾ ಮಲ್ನಾಡ್ ಅವರ ಸಂಗೀತ ಸವಿಯಲು ಬಂದಿದ್ದ ಅಪಾರ ಜನಸ್ತೋಮದಿಂದಾಗಿ ಗೇಟ್‌ನಲ್ಲಿ ನೂಕು ನುಗ್ಗಲು ಉಂಟಾಗಿತ್ತು. ಮಹಾರಾಜ ಕಾಲೇಜು ಮೈದಾನದ ಒಳಗೆ ಹೋಗಲು ಹರಸಾಹಸ ಪಡುವಂತಾಗಿತ್ತು.

ಲೇಖಕ ಟಿ.ಎಸ್.ಛಾಯಾಪತಿ ಇನ್ನಿಲ್ಲ

ಸೇರಿದಂತೆ ಅನೇಕ ಸಾಹಿತಿಗಳು ಕಂಬನಿ ಮಿಡಿದಿದ್ದಾರೆ.

ವಿವಿಧ ಸಾಹಿತಿಗಳ ಪುಸ್ತಕ ಪ್ರಕಟಣೆ: ಕರ್ನಾಟಕ ಹಿರಿಯ ಕವಿಗಳಾದ ಚೆನ್ನವೀರ ಕಣವಿ ಅವರ 16 ಕವಿತಾ ಸಂಕಲನಗಳನ್ನು ಶ್ರೀಯುತರು ಒಂದೇ ಬಾರಿಗೆ ಪ್ರಕಟಿಸಿ, ಸಾಹಿತ್ಯಲೋಕದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದ್ದರು. ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ, ಹಾ.ಮಾ.ನಾಯಕ್, ದೇಜಗೌ, ನಿಸಾರ್ ಅಹಮದ್, ಮತ್ತೂರು ಕೃಷ್ಣಮೂರ್ತಿ ಅವರ ಸಾಹಿತ್ಯ ಕೃತಿಗಳು ಹಾಗೂ ಹೆಚ್.ಎಸ್.ವೆಂಕಟೇಶ್‌ಮೂರ್ತಿ ಅವರ ಸಮಗ್ರ ಮಕ್ಕಳ ಸಾಹಿತ್ಯ ಪುಸ್ತಕ ಪ್ರಕಟಿಸಿ, ನಾಡಿನ ಮನೆ ಮಾತಾಗಿದ್ದರು.

ಸಾವಿರ ಕೃತಿಗಳ ಸರದಾರ: ಪ್ರಕಾಶಕ ಟಿ.ಎಸ್.ಛಾಯಾಪತಿ ಅವರು 1944ರ ಮೇ 10ರಂದು ತ.ಸು.ಶಾಮರಾಯರು ಹಾಗೂ ತಾಯಿ ಸುಬ್ಬುಲಕ್ಷ್ಮಿ ದಂಪತಿಯ ಮೊದಲ ಪುತ್ರರಾಗಿ ಜನಿಸಿದರು. ಮುಂದೆ ಎಂ.ಕಾಂ ಸ್ನಾತಕೋತ್ತರ ಪದವಿ ಪಡೆದು, ಸಾಹಿತ್ಯ ಲೋಕದಲ್ಲಿ ಆಸಕ್ತಿ ಹೊಂದಿ, 1950ರಲ್ಲಿ ತ.ಸು.ಶಾಮರಾಯರು ಆರಂಭಿಸಿದ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯ ಜವಾಬ್ದಾರಿ ವಹಿಸಿಕೊಂಡರು. ಪ್ರಕಾಶಕರಾಗಿ ಒಂದು ಸಾವಿರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿ, 'ಸಾವಿರ ಕೃತಿ ಸರದಾರ' ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಲೇಖಕರಾಗಿಯೂ 23 ಪುಸ್ತಕಗಳನ್ನು ಬರೆದಿದ್ದಾರೆ.

ಟಿ.ಎಸ್.ಛಾಯಾಪತಿ ಅವರ ಸಾಹಿತ್ಯ ಸೇವೆಯನ್ನು ಗುರುತಿಸಿ ವಿವಿಧ ಸಂಘ-ಸಂಸ್ಥೆಗಳು ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ. ಮೈಸೂರು ಜಿಲ್ಲಾ ಕಸಾಪ ವತಿಯಿಂದ 'ಜಿಲ್ಲೆಯ ಪ್ರತಿಭಾನ್ವಿತ', ಚಿತ್ರದುರ್ಗದ ಮುರುಘಾ ರಾಜೇಂದ್ರ ಶ್ರೀಗಳಿಂದ ' ಸಾಹಿತ್ಯ ಸೇವಾ ಧುರೀಣ', ಕನ್ನಡ ಪುಸ್ತಕ ಪ್ರಾಧಿಕಾರದಿಂದ 'ಅತ್ಯುತ್ತಮ ಪ್ರಕಾಶನ ಪ್ರಶಸ್ತಿ', ಗುಂಡ್ಲುಪೇಟೆಯಲ್ಲಿ ರಾಜ್ಯೋತ್ಸವ ಸಮಾರಂಭದಲ್ಲಿ ಪ್ರಶಸ್ತಿ, ಮೈಸೂರು ಹೊಯ್ಸಳ ಕನ್ನಡ ಸಂಘದ ರಾಜ್ಯೋತ್ಸವ ಸನ್ಮಾನ, ದೇಜಗೌ ಅವರ 91 ಪುಸ್ತಕ ಬಿಡುಗಡೆ ಸಮಾರಂಭದಲ್ಲಿ 'ಪರಿಸರ ಶಿಲ್ಪಿ ಪದ್ಮಶ್ರೀ' ಪ್ರಶಸ್ತಿ ನೀಡಿ ಸನ್ಮಾನಿಸಲಾಗಿತ್ತು.

ಎಸ್‌ಬಿಎಂ ವತಿಯಿಂದ ಕನ್ನಡ ರಾಜ್ಯೋತ್ಸವದ 37ನೇ ವಾರ್ಷಿಕೋತ್ಸವದಲ್ಲಿ ಸನ್ಮಾನ, 'ಛಾಯಾಭಿನಂದನ' ಅಭಿನಂದನಾ ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಕಂದಾಯ ಸಚಿವರಾಗಿದ್ದ ವಿ.ಶ್ರೀನಿವಾಸ ಪ್ರಸಾದ್ ಅವರಿಂದ ಸನ್ಮಾನ, ಮುಕ್ತಕ ಸಾಹಿತ್ಯ ಅಕಾಡೆಮಿಯಿಂದ ಅಭಿನಂದನೆ, ಬೆಳ್ಳಿಪ್ಪಾಡಿ ಸತೀಶ್ ರೈ ಅವರ 'ಗೀತಾಮೃತ ವಾಹಿನಿ' ಕೃತಿ ಬಿಡುಗಡೆ ಹೀಗೆ ಅನೇಕ ಸಭೆ-ಸಮಾರಂಭದಲ್ಲಿ ಸನ್ಮಾನಿಸಲಾಗಿತ್ತು.

ವಿ.ಸೀತಾರಾಮಯ್ಯ ಸಂಸ್ಮರಣಾ ವೇದಿಕೆಯಲ್ಲಿ ಕೇಂದ್ರ ಮಾಜಿ ಸಚಿವ ಎಂ.ವಿ.ರಾಜಶೇಖರನ್, ಛಾಯಾಪತಿಯವರ 75ನೇ ಹುಟ್ಟುಹಬ್ಬ ಸಂದರ್ಭದಲ್ಲಿ ನಿತ್ಯೋತ್ಸವ ಕವಿ ನಿಸಾರ್ ಅಹ್ಮದ್ ಸನ್ಮಾನಿಸಿದ್ದರು. ಇದೇ ವರ್ಷ 'ಬಸವ ರತ್ನ' ಕೇಂದ್ರ ಸಾಹಿತ್ಯ ಪರಿಷತ್ತಿನಿಂದ 'ಅತ್ಯುತ್ತಮ ಪ್ರಕಾಶಕ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಅಲ್ಲದೆ, ನಾಡಿನ ಬಹುತೇಕ ಸಾಹಿತಿ, ಪ್ರಕಾಶಕರೊಂದಿಗೆ ಛಾಯಾಪತಿ ಅವರು ಅವಿನಾಭಾವ ಸಂಬಂಧ ಹೊಂದಿದ್ದರು.

'ಮಿತ್ರ', 'ಸ್ಟಾರ್'ನೊಂದಿಗೆ ನಿಕಟ ಸಂಪರ್ಕ: 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್'ನೊಂದಿಗೆ ಛಾಯಾಪತಿ ಅವರು ನಿಕಟ ಸಂಪರ್ಕ ಹೊಂದಿದ್ದರು. 'ಸ್ಟಾರ್ ಆಫ್ ಮೈಸೂರ್' 40ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಪ್ರಧಾನ ಸಂಪಾದಕರಾದ ಕೆ.ಬಿ.ಗಣಪತಿ ಅವರ 'ಸ್ಟಾರ್ ಆಫ್ ಮೈಸೂರ್' ಪುಸ್ತಕದ ಪ್ರಕಾಶಕರೂ ಆಗಿದ್ದ ಛಾಯಾಪತಿ ಅವರನ್ನು, ಕೇಂದ್ರ ಸಚಿವರಾಗಿದ್ದ ಅನಂತ್‌ಕುಮಾರ್ ಸನ್ಮಾನಿಸಿದ್ದರು.

ಮೈಸೂರು ದೇಶದ 2ನೇ ಸ್ವಚ್ಛ ಮಧ್ಯಮ ನಗರಿ

ನವದೆಹಲಿಯಲ್ಲಿ ಪ್ರಶಸ್ತಿ ಸ್ವೀಕರಿಸಿದ ಮೇಯರ್ ಶಿವಕುಮಾರ್, ಉಪಮೇಯರ್ ರೂಪಾ, ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ



ಮೈಸೂರು, ಅ.1(ಎಸ್‌ಬಿಡಿ)- ಸ್ವಚ್ಛ ಸರ್ವೇಕ್ಷಣೆಯ ಮಧ್ಯಮ ವರ್ಗದ ನಗರಗಳ ವಿಭಾಗದಲ್ಲಿ ಮೈಸೂರು ದೇಶದ 2ನೇ ಸ್ವಚ್ಛನಗರ ಎಂಬ ಹೆಗ್ಗಳಿಕೆ ಪಡೆದಿದ್ದು, ಶನಿವಾರ ನವದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು ನಗರ ಪಾಲಿಕೆ ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ಜಿ.ರೂಪಾ ಹಾಗೂ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಅವರು ಸಮಾರಂಭದಲ್ಲಿ ಪಾಲ್ಗೊಂಡು 'ಸ್ವಚ್ಛ ಮಧ್ಯಮ ನಗರ' ಪ್ರಶಸ್ತಿ ಸ್ವೀಕರಿಸಿದರು.

ಮಧ್ಯಮ ವರ್ಗ ವಿಭಾಗ(3-10 ಲಕ್ಷ ಜನಸಂಖ್ಯೆ)ದಲ್ಲಿ ಭಾಗವಹಿಸಿದ್ದ 382 ನಗರಗಳಲ್ಲಿ ಮೈಸೂರಿಗೆ 2ನೇ ಸ್ಥಾನ ದಕ್ಕಿದ್ದು, ಈ ಮೂಲಕ ರಾಜ್ಯದ ಮೊದಲ ಸ್ವಚ್ಛ ನಗರವಾಗಿಯೂ ಹೊರಹೊಮ್ಮಿದೆ. ಅಲ್ಲದೆ ಒಂದು ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮೈಸೂರು 8ನೇ ಸ್ಥಾನ ಪಡೆದಿದೆ. ಜೊತೆಗೆ 'ಗಾರ್ಬೇಜ್ ಫ್ರೀ ಸಿಟಿ' ವಿಭಾಗದಲ್ಲಿ ಪಂಚತಾರಾ(5*) ಶ್ರೇಣಿ ಪಡೆದುಕೊಂಡಿರುವುದು ವಿಶೇಷವಾಗಿದೆ. ಮಧ್ಯಮ ನಗರ ವಿಭಾಗದಲ್ಲಿ ಕಳೆದ ವರ್ಷ 7ನೇ ಸ್ಥಾನದಲ್ಲಿದ್ದ ಮೈಸೂರು ಸುಧಾರಣೆ ಕಂಡಿದ್ದು, ಜನಪ್ರತಿನಿಧಿಗಳು, ಅಧಿಕಾರಿಗಳು, ಸಿಬ್ಬಂದಿ, ಪೌರ ಕಾರ್ಮಿಕರು ಹಾಗೂ ಸಾರ್ವಜನಿಕರು ಸಂತಸ ವ್ಯಕ್ತಪಡಿಸಿದ್ದಾರೆ.

ದಸರಾ ಕ್ರೀಡಾಕೂಟದಲ್ಲಿ ಮೈಸೂರು, ಬೆಳಗಾವಿ, ಬೆಂಗಳೂರು ಕ್ರೀಡಾಪಟುಗಳ ಪೈಪೋಟಿ ಜೋರು



ಮೈಸೂರು, ಅ.1(ಎಂಕೆ)- ರಾಜ್ಯಮಟ್ಟದ ದಸರಾ ಕ್ರೀಡಾಕೂಟದಲ್ಲಿ ಸೆಣಸಾಟ ಜೋರಾಗಿದ್ದು, ಕ್ರೀಡಾಪಟುಗಳು ಪದಕ ಬೇಟೆ ಮುಂದುವರೆಸಿದ್ದಾರೆ.

110 ಮೀಟರ್ ಹರ್ಡಲ್ಸ್: ಪುರುಷರ ವಿಭಾಗದಲ್ಲಿ ಮೈಸೂರಿನ ಎಂ.ಡಿ.ಶುಶಾಂತ್ ಪ್ರಥಮ, ಬೆಂಗಳೂರಿನ ಕೆ.ಎಂ.ಹರೀಶ್ ದ್ವಿತೀಯ, ಮೈಸೂರಿನ ದಿಶಾಂತ್ ನಾಯಕ್ ತೃತೀಯ ಸ್ಥಾನ ಪಡೆದರೆ, **ಮಹಿಳೆಯರ ವಿಭಾಗದಲ್ಲಿ** ಬೆಂಗಳೂರಿನ ಧೃತಿ ಚಂದ್ರಶೇಖರ್ ಪ್ರಥಮ, ಮೈಸೂರಿನ ಪ್ರತೀಕ ದ್ವಿತೀಯ ಹಾಗೂ ಆರ್.ಸಿಂಧು ತೃತೀಯ ಸ್ಥಾನ ಗೆದ್ದರು.

400 ಮೀಟರ್ ಓಟ: ಪುರುಷರ ವಿಭಾಗದಲ್ಲಿ ಬೆಂಗಳೂರು ಗ್ರಾಮಾಂತರದ ಆಕಾಶ್ ಎಸ್. ಗೊಲ್ಲರ್ ಪ್ರಥಮ, ಬೆಳಗಾವಿ ಶ್ರೀನಾಥ್ ದಲ್ವಿ ದ್ವಿತೀಯ, ಮೈಸೂರಿನ ಜಿ.ಸಿ.ಗುರುಪ್ರಸಾದ್ ತೃತೀಯ ಬಹುಮಾನ ಗೆದ್ದರೆ, **ಮಹಿಳೆಯರ ವಿಭಾಗದಲ್ಲಿ** ಬೆಳಗಾವಿ ಮೇಘ ಮನವಲ್ಲಿ ಪ್ರಥಮ, ಜ್ಯೋತಿ ಕಟ್ಟಿಮನಿ ದ್ವಿತೀಯ ಹಾಗೂ ಮೈಸೂರು ದೀಪಶ್ರೀ ತೃತೀಯ ಸ್ಥಾನ ಪಡೆದುಕೊಂಡರು.

4x100 ರಿಲೆ ಓಟ: ಪುರುಷರ ವಿಭಾಗದಲ್ಲಿ ಮೈಸೂರಿನ ನಿಖಿಲ್ ಸಿದ್ದರಾಮ್, ಎಂ.ಡಿ.ಶುಶಾಂತ್, ರೋಹಿತ್ ಹಾಗೂ ಸುಮನ್ ಕುಲಾಲ್‌ದ್ ತಂಡ ಪ್ರಥಮ, ಬೆಂಗಳೂರಿನ ಎಂ.ಜಿ.ಅಶ್ವಿನ್, ಪಿ.ವಿಶಾಲ್‌ಕುಮಾರ್ ಜೈನ್ ಹಾಗೂ ಎಸ್.ಗಣೇಶ್ ತಂಡ ದ್ವಿತೀಯ, ಬೆಳಗಾವಿಯ ರವಿ ಕಿರಣ್ ಸಿದ್ದಿ, ಕಾರ್ತಿಕ್, ಸುನೀಲ್ ಹಾಗೂ ವಿಜಯ್ ತಂಡ ತೃತೀಯ ಸ್ಥಾನ ಪಡೆದರೆ, **ಮಹಿಳೆಯರ ವಿಭಾಗದಲ್ಲಿ** ಮೈಸೂರಿನ ಹೆಚ್.ಆರ್.ನವಮಿ, ಆರ್.ಹರ್ಷಿಣಿ, ಎಸ್.ಕಾವೇರಿ ಹಾಗೂ ಹೆಚ್.ವೈ.ಸುಪ್ರೀಯಾ ತಂಡ ಪ್ರಥಮ, ಬೆಂಗಳೂರಿನ ಪಿ.ಜೆ.ಸ್ನೇಹ, ಸಿ.ಧೃತಿ, ವಿ.ಎಸ್.ಪೂರ್ವಸ್ಮಿತ ಹಾಗೂ ಪಿ.ಸಿ.ಗ್ರೀಷ್ಮಾ ತಂಡ ದ್ವಿತೀಯ, ಬೆಳಗಾವಿಯ ಜ್ಯೋತಿ ಕಟ್ಟಿಮನಿ, ಮೇಘಾ, ವೈಭವಿ ಹಾಗೂ ಅಪೂರ್ವ ನಾಯಕ್ ತಂಡ ತೃತೀಯ ಸ್ಥಾನ ಪಡೆಯಿತು.

1500 ಮೀಟರ್ ಓಟ: ಪುರುಷರ ವಿಭಾಗದಲ್ಲಿ ಬೆಳಗಾವಿ ನಾಗರಾಜ್ ಪ್ರಥಮ, ಬೆಂಗಳೂರು ಗ್ರಾಮಾಂತರದ ಹರ್ಷಿತ್ ದ್ವಿತೀಯ, ಬೆಳಗಾವಿ ಮಣಿಕಂಠ ತೃತೀಯ ಬಹುಮಾನ ಪಡೆದರೆ, **ಮಹಿಳೆಯರ ವಿಭಾಗದಲ್ಲಿ** ಮೈಸೂರಿನ ಚೈತ್ರ ದೇವಾಡಿಗ ಪ್ರಥಮ, ಪಿ.ಚೈತ್ರ ದ್ವಿತೀಯ ಹಾಗೂ ಬೆಂಗಳೂರು ಗ್ರಾಮಾಂತರದ ಎಸ್.ಎಂ.ಸನಿಕ್ ತೃತೀಯ ಸ್ಥಾನ ಪಡೆದುಕೊಂಡರು.

ಡಿಸ್ಕಸ್ ಥ್ರೋ: ಪುರುಷರ ವಿಭಾಗದಲ್ಲಿ ಮೈಸೂರಿನ ಮಹಮ್ಮದ್ ಪ್ರಥಮ, ಬೆಂಗಳೂರಿನ ಬಿ.ಕೆ.ಸಂಜೀವ್ ದ್ವಿತೀಯ, ಮೋಹಿತ್ ಎನ್.ರಾಜ್ ತೃತೀಯ ಸ್ಥಾನ ಪಡೆದರೆ, **ಮಹಿಳೆಯರ ವಿಭಾಗದಲ್ಲಿ** ಬೆಂಗಳೂರಿನ ಕಲಾವತಿ ಬಸಪ್ಪ ಪ್ರಥಮ, ಮೈಸೂರಿನ ಎಂ.ಎನ್.ಸುಮನ್ ದ್ವಿತೀಯ ಹಾಗೂ ಸುಶೀಲ ಉಲ್ಲಪ್ಪ ತೃತೀಯ ಪದಕ ಗೆದ್ದರು.

ಎತ್ತರ ಜಿಗಿತ: ಪುರುಷರ ವಿಭಾಗದಲ್ಲಿ ಬೆಂಗಳೂರಿನ ಎಸ್.ಹರ್ಷಿತ್ ಪ್ರಥಮ, ಮೈಸೂರಿನ ಅನಿಲ್ ಕುಮಾರ್ ದ್ವಿತೀಯ, ಬೆಂಗಳೂರಿನ ತ್ರಿಲೋಕ್ ಒಡೆಯರ್ ತೃತೀಯ ಬಹುಮಾನ ಗೆದ್ದರೆ, **ಮಹಿಳೆಯರ ವಿಭಾಗದಲ್ಲಿ** ಎಸ್.ಬಿ. ಸುಪ್ರಿಯಾ ಪ್ರಥಮ, ಮೈಸೂರಿನ ಪಲ್ಲವಿ ಪಾಟೀಲ್ ದ್ವಿತೀಯ ಹಾಗೂ ಬೆಂಗಳೂರು ಗ್ರಾಮಾಂತರದ ಗೌತಮಿ ಗೌಡ ತೃತೀಯ ಬಹುಮಾನ ತಮ್ಮದಾಗಿಸಿಕೊಂಡರು.

ಬಿಲ್ಲುಗಾರಿಕೆ: ಇಂಡಿಯನ್ ರೌಂಡ್‌ನ ಪುರುಷರ ವಿಭಾಗದಲ್ಲಿ ಕಲಬುರ್ಗಿಯ ರಾಘು ಪ್ರಥಮ, ಭುವರ್ಯ ದ್ವಿತೀಯ ಹಾಗೂ ಮೋನೀಶ್ ತೃತೀಯ ಸ್ಥಾನ ಪಡೆದರೆ, **ಮಹಿಳೆಯ ವಿಭಾಗದಲ್ಲಿ** ಕಲಬುರ್ಗಿಯ ರೇಣುಕಾ ಪ್ರಥಮ, ಬೆಂಗಳೂರಿನ ಎನ್.ಸ್ವಪ್ನ ದ್ವಿತೀಯ ಹಾಗೂ ಜಿ.ಸಿಂಚನ ತೃತೀಯ ಸ್ಥಾನ ಪಡೆದರು. ಹಾಗೆಯೇ **ರಿಕರ್ವ್ ರೌಂಡ್‌ನ ಪುರುಷರ ವಿಭಾಗದಲ್ಲಿ** ಬೆಂಗಳೂರಿನ ರಕ್ಷಕ್ ಪಾಟೀಲ್ ಪ್ರಥಮ, ಎಂ.ಸುಭಾಷ್ ದ್ವಿತೀಯ ಹಾಗೂ ಎನ್. ನಾಗೇಂದ್ರ ತೃತೀಯ ಬಹುಮಾನ ಗೆದ್ದರೆ, ಮಹಿಳೆಯ ವಿಭಾಗದಲ್ಲಿ ಬೆಂಗಳೂರಿನ ಬಿ.ಪಿ.ಪಾರ್ಥನ ಪ್ರಥಮ, ಡಿ.ಗೌತಮಿ ದ್ವಿತೀಯ ಹಾಗೂ ಎ.ಎಸ್.ಕರಿನಾ ತೃತೀಯ ಬಹುಮಾನ ಗೆದ್ದುಕೊಂಡರು.

ಗ್ರೀಕೋ ರೋಮನ್ - ಫ್ರೀ ಸ್ಟೈಲ್ ಕುಸ್ತಿಯಲ್ಲಿ ಗೆದ್ದು ಬೀಗಿದ ಪೈಲ್ವಾನರು



ಫ್ರೀ ಸ್ಟೈಲ್ ಕುಸ್ತಿಯ 125 ಕೆಜಿ ವಿಭಾಗದಲ್ಲಿ ಪೈ.ಆರ್.ಯಶವಂತ್ (ಮಧ್ಯ)ಚಿನ್ನ, ಪೈ.ಎನ್.ಕೆಂಚಪ್ಪ(ಎಡ) ಬೆಳ್ಳಿ, ಪೈ.ಪರಶುರಾಮ್ (ಬಲ)ಕಂಚಿನ ಪದಕ ಗೆದ್ದಿದ್ದಾರೆ.

ಮೈಸೂರು, ಅ.1(ಎಂಕೆ)- ಕುಸ್ತಿ ಅಖಾಡದಲ್ಲಿ ಗೆದ್ದು ಬೀಗಿದ ಪೈಲ್ವಾನರು, ಮಟ್ಟಿಯಲ್ಲಷ್ಟೇ ಅಲ್ಲ ಮ್ಯಾಟ್‌ನಲ್ಲಿಯೂ ಸೈ ಎನಿಸಿಕೊಂಡರು.

ನಗರದ ದೊಡ್ಡಕೆರೆ ಮೈದಾನದ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಗ್ರೀಕೋ ರೋಮನ್ ಹಾಗೂ ಫ್ರೀ ಸ್ಟೈಲ್ ಕುಸ್ತಿ ಪಂದ್ಯಾವಳಿಯಲ್ಲಿ ಗೆಲುವು ಪಡೆದು ಸಂಭ್ರಮಿಸಿದರು.

ಮೈಸೂರಿನ ಭರವಸೆಯ ಪೈಲ್ವಾನ್ ಆರ್.ಯಶವಂತ್(125 ಕೆಜಿ ವಿಭಾಗ) ಫ್ರೀ ಸ್ಟೈಲ್ ಕುಸ್ತಿಯಲ್ಲಿ ಪ್ರಥಮ ಸ್ಥಾನ ಪಡೆಯುವ ಮೂಲಕ ಟೈಟಲ್ ಪ್ರಶಸ್ತಿ ಗೆಲ್ಲುವ ಭರವಸೆ ಮೂಡಿದರು.

ಹಾಗೆಯೇ ಗ್ರೀಕೋ ರೋಮನ್ ಕುಸ್ತಿಯಲ್ಲಿ ಮೈಸೂರಿನ ಪೈಲ್ವಾರಾದ ಎಸ್. ರಾಕೇಶ್(97 ಕೆಜಿ ವಿಭಾಗ) ಹಾಗೂ ಕೆ.ಚೇತನ್‌ಗೌಡ(130 ಕೆಜಿ ವಿಭಾಗ) ಪ್ರಥಮ ಸ್ಥಾನ ಪಡೆಯುವ ಮೂಲಕ ಬೆಂಗಳೂರು ಹಾಗೂ ಬೆಳಗಾವಿ ಪೈಲ್ವಾನರಿಗೆ ಪೈಪೋಟಿ ನೀಡಿದರು.

ಇಂದು ಟೈಟಲ್ ಪಂದ್ಯಗಳು: ದಸರಾ ಕುಸ್ತಿ ಪಂದ್ಯಾವಳಿಯ ಕಡೆಯ ದಿನವಾದ ನಾಳೆ(ಅ.2) ದಸರಾ ಕುಮಾರ್, ಕೇಸರಿ, ಕಂಠೀರವ, ದಸರಾ ಕಿಶೋರ ಹಾಗೂ ದಸರಾ ಕಿಶೋರಿ ಟೈಟಲ್ ಕುಸ್ತಿ ಪಂದ್ಯಗಳು ನಡೆಯಲಿದ್ದು, ಕುಸ್ತಿ ಅಭಿಮಾನಿಗಳಲ್ಲಿ ಭಾರೀ ಕುತೂಹಲ ಮೂಡಿಸಿದೆ.

ದಸರಾ ಕುಮಾರ್ ಟೈಟಲ್‌ನಲ್ಲಿ 22 ಮಂದಿ ಪೈಲ್ವಾನರು, ದಸರಾ ಕಿಶೋರಿ ಟೈಟಲ್‌ನಲ್ಲಿ 14, ದಸರಾ ಕಿಶೋರ ಟೈಟಲ್‌ನಲ್ಲಿ 50, ದಸರಾ ಕೇಸರಿ ಟೈಟಲ್‌ನಲ್ಲಿ 39 ಹಾಗೂ ದಸರಾ ಕಂಠೀರವ ಟೈಟಲ್‌ನಲ್ಲಿ 20 ಮಂದಿ ಪೈಲ್ವಾನರು ಸೆಣಸಾಡಲಿದ್ದಾರೆ.

ವಿಜಯದಶಮಿ ಮೆರವಣಿಗೆಗೆ ದಿನಗಣನೆ: ಮೈಸೂರಲ್ಲಿ ಹೆಚ್ಚಿದ ಸಂಚಾರ ದಟ್ಟಣೆ

ಮೈಸೂರು,ಅ.1(ಆರ್‌ಕೆ)-ದಸರಾ ನವರಾತ್ರಿ ಉತ್ಸವ ಆರಂಭವಾಗಿದ್ದು, ವಿಜಯದಶಮಿ ಮೆರವಣಿಗೆಗೆ ದಿನಗಣನೆ ಆರಂಭವಾಗಿರುವುದರಿಂದ ಭಾರೀ ಸಂಖ್ಯೆಯಲ್ಲಿ ಪ್ರವಾಸಿಗರು ಮೈಸೂರಿಗೆ ಆಗಮಿಸುತ್ತಿದ್ದಾರೆ.

ಈಗಾಗಲೇ ಎಲ್ಲಾ ಹೋಟೆಲ್, ರೆಸಾರ್ಟ್‌ಗಳಲ್ಲಿ ಕೊಠಡಿಗಳು ಬುಕ್ ಆಗಿದ್ದು, ಭಾರೀ ಪ್ರಮಾಣದಲ್ಲಿ ಪ್ರವಾಸಿಗರು ಆಗಮಿಸಿದ್ದಾರೆ. ಹಾಗಾಗಿ ಮೈಸೂರು ನಗರದಾದ್ಯಂತ ಎಲ್ಲಾ ರಸ್ತೆಗಳಲ್ಲಿ ವಾಹನ ಸಂಚಾರ ದಟ್ಟಣೆ ಹೆಚ್ಚಾಗಿದೆ. ಅರಮನೆ, ಚಾಮುಂಡಿಬೆಟ್ಟ, ಮೃಗಾಲಯ, ಕಾರಂಜಿ ಕೆರೆ, ರೈಲ್ವೇ ಮ್ಯೂಸಿಯಂ, ಕೆಆರ್‌ಎಸ್, ಶ್ರೀರಂಗಪಟ್ಟಣ, ನಂಜನಗೂಡಿನ ಪ್ರವಾಸ ತಾಣಗಳಿಗೆ ಭೇಟಿ ನೀಡುವವರ ಸಂಖ್ಯೆ ಹೆಚ್ಚಾಗಿದೆ.


ಒಂದೇ ಟಿಕೆಟ್‌ನಲ್ಲಿ ಹಲವು ಪ್ರವಾಸಿ ಕೇಂದ್ರ ವೀಕ್ಷಣೆ, ಗೋಲ್ಡ್ ಕಾರ್ಡ್ ಹೊಂದಿರುವವರಿಗೂ ಭೇಟಿಗೆ ಅವಕಾಶ ಕಲ್ಪಿಸಿರುವುದು, ಆಹಾರ ಮೇಳ, ಫಲಪುಷ್ಪ ಪ್ರದರ್ಶನ, ದಸರಾ ಕ್ರೀಡಾಕೂಟ, ಮಹಿಳಾ, ರೈತ ದಸರಾ, ಕುಸ್ತಿ, ವಸ್ತುಪ್ರದರ್ಶನ, ಕವಿಗೋಷ್ಠಿ, ಯುವ ದಸರಾ ಸೇರಿದಂತೆ ಹತ್ತು-ಹಲವು ಕಾರ್ಯಕ್ರಮಗಳು ನಡೆಯುತ್ತಿರುವುದು, ರಾತ್ರಿ ವೇಳೆ ವಿದ್ಯುದ್ದೀಪಾಲಂಕಾರ ನೋಡಲು ಜನರು ಆಗಮಿಸುತ್ತಿರುವುದರಿಂದ ಮೈಸೂರಿನ ಹೃದಯ ಭಾಗ ಹಾಗೂ ಸುತ್ತಲಿನ ಪ್ರದೇಶದ ರಸ್ತೆಗಳಲ್ಲಿ ವಾಹನ ಸಂಚಾರ ದಟ್ಟಣೆ ಹೆಚ್ಚಾಗಿ, ಸಂಚರಿಸುವುದೇ ಕಷ್ಟವಾಗುತ್ತಿದೆ.

ಟ್ರಾಫಿಕ್ ಜಾಮ್‌ನಿಂದಾಗಿ ಪರಿತಪಿಸುತ್ತಿರುವ ವಾಹನ ಚಾಲಕರು, ಸವಾರರು




ರಾತ್ರಿಯಷ್ಟೇ ಅಲ್ಲದೆ, ಹಗಲಿನ ವೇಳೆಯೂ ಅರಮನೆ ಸುತ್ತ, ಹಾರ್ಡಿಂಜ್ ಸರ್ಕಲ್, ದೊಡ್ಡ ಗಡಿಯಾರ, ಗಾಂಧಿ ಸ್ಕ್ವೇರ್, ಓಲ್ಡ್ ಬ್ಯಾಂಕ್ ರಸ್ತೆ, ಸಯ್ಯಾಜಿರಾವ್ ರಸ್ತೆ, ಧನ್ವಂತರಿ ರೋಡ್, ಇರ್ವಿನ್ ರೋಡ್, ಬಿ.ಎನ್.ರಸ್ತೆ, ಅಶೋಕ ರೋಡ್, ಶಿವರಾಂಪೇಟೆ ರಸ್ತೆ, ಡಿ.ದೇವರಾಜ ಅರಸು ರಸ್ತೆ, ರಮಾವಿಲಾಸ ರೋಡ್, ಜೆಎಲ್‌ಬಿ ರಸ್ತೆ, ಡಿ.ಸುಬ್ಬಯ್ಯ ರಸ್ತೆ, ಮಹಾರಾಜ ಕಾಲೇಜು ಮೈದಾನದ ಸುತ್ತಲಿನ ರಸ್ತೆಗಳು, ಹುಣಸೂರು ರಸ್ತೆ, ಬೋಗಾದಿ ರಸ್ತೆ, ಚಾಮರಾಜ ಜೋಡಿ ರಸ್ತೆ, ಎಂ.ಜಿ. ರೋಡ್, ಲಲಿತ ಮಹಲ್ ರಸ್ತೆ, ಮೃಗಾಲಯದ ಮುಂದಿನ ರಸ್ತೆ, ನಜರ್‌ಬಾದ್ ಮುಖ್ಯ ರಸ್ತೆ ಸೇರಿದಂತೆ ಹಲವು ಕಡೆಗಳಲ್ಲಿ ವಾಹನ ದಟ್ಟಣೆಯಿಂದಾಗಿ ಅಲ್ಲಲ್ಲಿ ಟ್ರಾಫಿಕ್ ಜಾಮ್ ಆಗುತ್ತಿದ್ದು, ಸಂಚಾರ ಸುಗಮಗೊಳಿಸಲು ಪೊಲೀಸರು ಹೆಣಗಾಡುತ್ತಿದ್ದಾರೆ. ಸಂಜೆ 6.30 ರಿಂದ ರಾತ್ರಿ 10.30 ಗಂಟೆವರೆಗೆ ವಿದ್ಯುದ್ದೀಪಾಲಂಕಾರ ಇರುವುದರಿಂದ ಮೈಸೂರಿನ ಹೃದಯ ಭಾಗದಲ್ಲಂತೂ ವಾಹನಗಳಲ್ಲಿ ಓಡಾಡುವುದು ದುಸ್ತರವಾಗಿದೆ. ಅದೇ ಕಾರಣಕ್ಕೆ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (KSTDC)ದ ಅಂಬಾರಿ ಡಬಲ್ ಡೆಕ್ಕರ್ ಬಸ್‌ಗಳಿಗೆ ಭಾರೀ ಬೇಡಿಕೆ ಉಂಟಾಗಿದೆ. ಆಟೋ, ಟ್ಯಾಕ್ಸಿ, ಟಾಂಗಾ, ಪ್ರವಾಸಿ ವಾಹನಗಳಲ್ಲೂ ಜನರು ಮೈಸೂರು ನಗರದ ಪ್ರವಾಸಿ ತಾಣ ವೀಕ್ಷಿಸಲು ಹಾಗೂ ದೀಪಾಲಂಕಾರ ನೋಡಲು ಮುಂದೆ ಬರುತ್ತಿರುವುದರಿಂದ ಮೈಸೂರಲ್ಲಿ ವಾಹನ ದಟ್ಟಣೆ ಹೆಚ್ಚಾಗುತ್ತಿದೆ. ನಾಳೆ(ಅ.2) ಭಾನುವಾರದಿಂದ ದಸರಾ ವಿಜಯದಶಮಿ ಮೆರವಣಿಗೆ ವೀಕ್ಷಿಸಲು ಅಧಿಕ ಸಂಖ್ಯೆಯಲ್ಲಿ ಪ್ರವಾಸಿಗರು ಮೈಸೂರಿಗೆ ಬರುವ ನಿರೀಕ್ಷೆ ಇರುವುದರಿಂದ ಅಕ್ಟೋಬರ್ 6ರವರೆಗೂ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಎಲ್ಲಾ ರಸ್ತೆಗಳೂ ವಾಹನಮಯವಾಗಲಿದ್ದು, ಸಾರ್ವಜನಿಕರು ಪರದಾಡುವಂತಾಗಲಿದೆ.





ವಿಶ್ವವಂದಿತ ಬಾಪೂ



ಸುಮ ಚಂದ್ರಶೇಖರ್,
ಮೊ.9880060354

ಮಹಾತ್ಮ ಗಾಂಧಿಯವರು ಭಾರತೀಯರಾದರೂ ಅವರ ವಿಚಾರಧಾರೆಗೆ ದೇಶ, ಭಾಷೆ, ಜನಾಂಗದ ಎಲ್ಲೆಗಳಿಲ್ಲ. ಪ್ರಪಂಚದ ಎಲ್ಲಾ ದೇಶಗಳಲ್ಲೂ ಮನುಷ್ಯನ ಉನ್ನತಿಗೆ ಶ್ರಮಿಸಿದ ಬಾಪೂಜಿ ಹೆಸರು ಚಿರಸ್ಥಾಯಿ. ಯಾವುದೇ ಸ್ಥಾಪಿತ ಅಧಿಕಾರವಿಲ್ಲವಾದರೂ ಜನರ ಹಿತ ಹಾಗೂ ಎಲ್ಲಾ ಮಾನವರ ಉನ್ನತಿಗಾಗಿ ಬಾಪೂಜಿಯವರು ಹಾಕಿಕೊಟ್ಟ ಮಾರ್ಗ ಎಲ್ಲೆಡೆಯೂ ಬಳಕೆಯಾಗುತ್ತಿರುವುದು ಒಂದು ಹೆಗ್ಗಳಿಕೆಯೇ ಸರಿ.

ಹಲವಾರು ವಿಷಯಗಳ ಬಗ್ಗೆ ಗಾಂಧೀಜಿಯವರ ಚಿಂತನೆಯ ಹರಿವಿದ್ದರೂ ಎಲ್ಲಿಯೂ ಅವರ ವಿಚಾರಧಾರೆಗಳು ಪರಸ್ಪರ ಒಂದಕ್ಕೊಂದು ವಿರೋಧಾಭಾಸಕ್ಕೆ ಎಡೆ ಮಾಡಿಕೊಡುವುದಿಲ್ಲ. ಅಂತಹ ಖಚಿತತೆ, ನಿಖರತೆ ಗಾಂಧೀಜಿಯವರ ಚಿಂತನೆಗಳಲ್ಲಿದೆ. ವೈಜ್ಞಾನಿಕ ದೃಷ್ಟಿಕೋನದ ಜೊತೆ ಜೊತೆಯಲ್ಲೇ ಆಧ್ಯಾತ್ಮಿಕ ನೆಲೆಗಟ್ಟಿನಲ್ಲಿ ನಿಂತು ಸಂಶಯಕ್ಕೆ, ಗೊಂದಲಕ್ಕೆ ಎಡೆಯಿಲ್ಲದಂತೆ ತಮ್ಮ ಚಿಂತನೆಗಳನ್ನು ಬಿಡಿಸಿ ಹೇಳಬಲ್ಲ ಶಕ್ತಿಯನ್ನು ಗಾಂಧೀಜಿ ಹೊಂದಿದ್ದರು. ಸೂಕ್ಷ್ಮದರ್ಶಕದ ಅಡಿಯಲ್ಲಿನ ಜೀವಕೋಶಗಳ ಸೂಕ್ಷ್ಮ ಸಂರಚನೆಯನ್ನು ಬೆರಗುಗಣ್ಣಿನಿಂದ ನೋಡಿ ಉದ್ಗರಿಸುತ್ತಿದ್ದ ಗಾಂಧೀ ಅಷ್ಟೇ ತಣ್ಣಗೆ ಕಣ್ಮುಚ್ಚಿ ಆಧ್ಯಾತ್ಮಿಕ ಒಳಗಣ್ಣಿನಿಂದ ಜೀವನವನ್ನು ವಿಶ್ಲೇಷಿಸುತ್ತಾ ತನ್ಮಯರಾಗುತ್ತಿದ್ದರು.

ಗಾಂಧಿ ಪ್ರಸಿದ್ಧರಾದುದು ಪಿಎಚ್‌ಡಿ ಮಾಡಿಯಲ್ಲ. ಐಶ್ವರ್ಯ, ಅಧಿಕಾರ ಇವುಗಳಿಂದಲ್ಲ. ಆಡಿದ ಮಾತಿನಂತೆ ನಡೆಯುವುದು, ಯಾರಾದರೂ ಕೆಡುಕು ಮಾಡಿದರೂ ಕೆಟ್ಟವರೆಂದು ಭಾವಿಸದಿರುವುದು, ಎಲ್ಲರಿಗೂ ಯಾವಾಗಲೂ, ಎಲ್ಲಕ್ಕೂ ಯಾವಾಗಲೂ ಒಳ್ಳೆಯದನ್ನೇ ಬಯಸುವುದು, ಪ್ರೀತಿಯಿಂದ ಕಾಣುವುದು, ಪ್ರೀತಿಯನ್ನು ಬೆಳೆಸುವುದು ಮೊದಲಾದ ಗುಣಗಳಿಂದ ಗಾಂಧಿ ಲೋಕಪ್ರಸಿದ್ಧರಾದರು. ಸತ್ಯ, ಅಹಿಂಸೆ, ಪ್ರೇಮಗಳ ಪ್ರಭೆಯೇ ಗಾಂಧೀಜಿಯ ಬಾಳು. ಭಗವದ್ಗೀತೆ ನನ್ನ ತಾಯಿ ಎಂದ ಮಹಾತ್ಮರು ಏನನ್ನೂ ಬಯಸದ ಸಮರ್ಪಣಾ ಭಾವದ ಜೀವಂತ ಮೂರ್ತಿ. ರಾಮನಾಮ ಅವರಿಗೆ ತಾರಕ ಮಂತ್ರವಾಯಿತು.

ವಿಜ್ಞಾನ ಮತ್ತು ತಂತ್ರಜ್ಞಾನ ಮುಂದುವರಿದಂತೆ ಅನುಕೂಲ ಅಭಿವೃದ್ಧಿಗಳ ಜೊತೆಗೆ ಅನೇಕ ಸಮಸ್ಯೆಗಳೂ ಹುಟ್ಟಿಕೊಂಡಿವೆ. 21ನೇ ಶತಮಾನ ಮನುಕುಲಕ್ಕೆ ಹೊಸ ಸವಾಲುಗಳನ್ನು ಒಡ್ಡಿದೆ. ರಾಷ್ಟ್ರದ ಏಕತೆಗೆ ಕೋಮುವಾದ ಧಕ್ಕೆಯುಂಟು ಮಾಡಿದರೆ ಭಯೋತ್ಪಾದಕತೆ ಆತಂಕ ತಲ್ಲಣಗಳನ್ನು ಹುಟ್ಟಿಸಿದೆ. ಅಭಿವೃದ್ಧಿ ಯೋಜನೆಗಳ ಪರಿಣಾಮವಾಗಿ ಪರಿಸರ ಮಾಲಿನ್ಯ ಅಪಾಯದ ಗೆರೆಯನ್ನು ಮುಟ್ಟಿದೆ. ಮಾದಕವಸ್ತುಗಳು ಮಾನವನ ಮನಸ್ಸನ್ನು ಹಾಳುಗೆಡವಿದೆ. ಪಾಶ್ಚಾತ್ಯ ಜೀವನಶೈಲಿಯ ಅನುಕರಣೆ ಮತ್ತು ವಿದ್ಯುನ್ಮಾನ ಮಾಧ್ಯಮಗಳ ಪ್ರಭಾವದಿಂದ ಸಾಂಸ್ಕೃತಿಕ ಬೇರುಗಳು ನಶಿಸುತ್ತಿರುವ ಸೂಚನೆಗಳು ಕಂಡು ಬರುತ್ತಿವೆ. ಅಣ್ವಸ್ತ್ರಗಳ ಸಂಶೋಧನೆ ಈ ಭೂಮಿಯ ಮೇಲೆ ಮಾನವ ಬದುಕು ಸುರಕ್ಷಿತವಲ್ಲ ಎಂಬುದನ್ನು ಸಾರುತ್ತಿದೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಮೊದಲಾದವು ಶ್ರೀಸಾಮಾನ್ಯನ ಬದುಕನ್ನು ಶೋಷಿಸಲು ಹೊಸ ಮಾರ್ಗಗಳನ್ನು ರೂಪಿಸಿವೆ. ಬೃಹದಾಕಾರವಾಗಿ ಬೆಳೆಯುತ್ತಿರುವ ಕೊಳ್ಳುಬಾಕ ಸಂಸ್ಕೃತಿ ನಮ್ಮನ್ನು ಹೆಚ್ಚು ಹೆಚ್ಚು ಸ್ವಾರ್ಥಿಗಳನ್ನಾಗಿಯೂ, ಭ್ರಷ್ಟರನ್ನಾಗಿಯೂ ಮಾಡುತ್ತಿದೆ. ಜಾತಿ, ವರ್ಗ, ಲಿಂಗ ಇವುಗಳ ತಾರತಮ್ಯ ಸರ್ವೋದಯ ಸಮಾಜರಚನೆ, ವಿಶ್ವಕುಟುಂಬ ಇಂಥ ಭಾವನೆ ನಿರೀಕ್ಷೆಗಳನ್ನು ಹುಸಿಯಾಗಿಸುತ್ತಿವೆ.

ಇಂಥ ಸನ್ನಿವೇಶದಲ್ಲಿ ನಾವು ನಮ್ಮತನವನ್ನು ಕಾಪಾಡಿಕೊಂಡು ನಮ್ಮ ಸಂಸ್ಕೃತಿ, ಸಾಹಿತ್ಯ, ಕಲೆ, ಆಚಾರ–ವಿಚಾರಗಳನ್ನು ಉಳಿಸಿಕೊಳ್ಳಲು ಗಾಂಧೀಜಿಯವರ ಉಪದೇಶಗಳನ್ನು ಅರಿತು ಅವುಗಳನ್ನು ನಮ್ಮ ಬದುಕಿನಲ್ಲಿ ಅನುಸಂಧಾನ ಗೊಳಿಸಬೇಕಾಗಿದೆ.

ಗಾಂಧೀಜಿಯವರ ಸಿದ್ಧಾಂತಗಳಲ್ಲಿ ಮಾನವ ಸಮಾಜದ ಎಲ್ಲ ಕೆಡುಕುಗಳಿಗೆ ಪರಿಹಾರಗಳನ್ನು ಕಂಡು ಕೊಳ್ಳಬಹುದಾಗಿದೆ. ಗಾಂಧೀಜಿಯವರ ವಿಚಾರಗಳು ಎಲ್ಲಾ ಸಂಘರ್ಷಗಳನ್ನು ತೊಡೆದು ಹಾಕಿ ಸಾಮರಸ್ಯವನ್ನು ಸ್ಥಾಪಿಸು ವುದರಲ್ಲಿ ಸಹಕಾರಿಯಾಗುತ್ತದೆ. ಗಾಂಧೀಜಿ ಯವರ ಜೀವನದರ್ಶನಗಳು ಸರ್ವಕಾಲಕ್ಕೂ ಪ್ರಸ್ತುತವಾಗಿದ್ದು, ವಿಶ್ವದ ಭವಿಷ್ಯಕ್ಕೆ ಒಂದು ಆಶಾಕಿರಣವಾಗಿದೆ ಎಂಬುದು ಪ್ರಜ್ಞಾವಂತರೆಲ್ಲರ ಅಭಿಪ್ರಾಯವಾಗಿದೆ.

ಇಂದಿನ ದಿನಗಳಲ್ಲಿ ನೀತಿ, ಧರ್ಮ, ಮಾನವೀಯ ಮೌಲ್ಯಗಳು ಕುಸಿಯುತ್ತಿವೆ. ಮನುಷ್ಯನ ನಡೆನುಡಿಗಳಲ್ಲಿ ಹೊಂದಾಣಿಕೆ ಇಲ್ಲದೆ ವ್ಯಕ್ತವಾಗುತ್ತಿರುವ ವಿರೋಧಾಭಾಸಗಳು ದ್ವಂದ್ವಗಳು ಸಮಾಜದಲ್ಲಿ ಅಶಾಂತಿ, ಹಿಂಸೆಗಳಿಗೆ ದಾರಿ ಮಾಡಿಕೊಟ್ಟು ಮಾನವ ಕುಲವನ್ನು ತಲ್ಲಣಗೊಳಿಸಿದೆ. ರಾಷ್ಟ್ರದ ಭವಿಷ್ಯವನ್ನು ರೂಪಿಸುವ ಹೊಣೆಗಾರಿಕೆ ಇಂದಿನ ಯುವಪೀಳಿಗೆಯದಾಗಿದೆ. ಆದರೆ ಅವರಲ್ಲಿಯೂ ನಿರಾಶೆಯ ಕತ್ತಲು ಕವಿದಿದೆ. ಹೊರಗಿನ ಸಂಪರ್ಕ, ಪ್ರಭಾವಗಳು ದಟ್ಟವಾಗುತ್ತ ಹೋದ ಹಾಗೆ ಯುವಕರು ಹೊಸ ವಿಚಾರಗಳನ್ನು ಗ್ರಹಿಸುವುದು, ಕಲಿಯುವುದು ಸಹಜವಾದರೂ ಕಲಿಯಬಾರದ, ಅನುಸರಿಸಬಾರದ ವಿಚಾರಗಳತ್ತ ಅವರ ಮನಸ್ಸು ಹರಿಯುತ್ತಿದೆ. ಅವುಗಳತ್ತ ಯುವಕರ ಮನಸ್ಸು ಹೆಚ್ಚಾಗಿ ಒಲಿಯುತ್ತಿದೆ. ಇಹ ಪ್ರಪಂಚದ ಆಕರ್ಷಣೆಯೇ ಅಂತಹುದಾಗಿದ್ದು, ಸ್ವಚ್ಛಂದ ಸಾಮ್ರಾಜ್ಯದಲ್ಲಿ ತೇಲಾಡುವ ಮನಸ್ಸಿನಿಂದಾಗಿ ಯುವಜನತೆ ಜೀವನದಲ್ಲಿ ನಿರ್ದಿಷ್ಟ ಗುರಿಯನ್ನು ಸಾಧಿಸಲು ಅಸಮರ್ಥರಾಗಿದ್ದಾರೆ.

ಗಾಂಧೀಜಿ ನಮ್ಮ ಪಾಲಿಗೆ ಅಗೆದಷ್ಟು ಮಿಗುವ, ಮೊಗೆದಷ್ಟು ಮುಗಿಯದ ಅಪಾರ ಚಿಂತನೆಯ ಗಣಿ. ಇಡೀ ಜಗತ್ತು ಜಾಗತೀಕರಣದ ಕಡೆ ಕತ್ತು ತಿರುಗಿದ್ದರೂ, ಹಿಂತಿರುಗಿ ಗಾಂಧೀಜಿಯ ಕಡೆಗೆ ಕಣ್ಣು ಹೊರಳಿಸುವಂತಹ, ಸೆಳೆಯುವಂತಹ ಕಾಂತ ಶಕ್ತಿ ಗಾಂಧೀಜಿಯವರ ಗಟ್ಟಿಯಾದ ಚಿಂತನೆಗಳಿಗಿದೆ. ಆಡು ಮುಟ್ಟದ ಸೊಪ್ಪಿಲ್ಲ ಎನ್ನುವ ನಾಣ್ನುಡಿಯಂತೆ ಗಾಂಧೀಜಿಯವರು ಚಿಂತಿಸದೆ ಇರುವ ವಿಷಯಗಳೇ ಇಲ್ಲ. ಸ್ವಾತಂತ್ರ್ಯದ ಪರಿಕಲ್ಪನೆ, ಪರಿಸರ ನೈರ್ಮಲ್ಯ, ಮಹಿಳಾ ಚಿಂತನೆ, ವಿಶ್ವಶಾಂತಿ, ಕೈಗಾರಿಕೋದ್ಯಮ, ಪರಮಾಣು ಶಕ್ತಿ, ಕಂದಾಚಾರ, ವೈಜ್ಞಾನಿಕತೆ, ಆಧ್ಯಾತ್ಮಿಕತೆ, ಹೀಗೆ ಅವರ ಚಿಂತನಾ ವಿಷಯಗಳ ಪಾಲಿಗೆ ಕೊನೆಯೇ ಇಲ್ಲ ಎಂಬಂತಿದೆ.


ಹಲವಾರು ವಿಷಯಗಳ ಬಗ್ಗೆ ಗಾಂಧೀಜಿಯವರ ಚಿಂತನೆಯ ಹರಿವಿದ್ದರೂ ಎಲ್ಲಿಯೂ ಅವರ ವಿಚಾರಧಾರೆಗಳು ಪರಸ್ಪರ ಒಂದಕ್ಕೊಂದು ವಿರೋಧಾಭಾಸಕ್ಕೆ ಎಡೆ ಮಾಡಿಕೊಡುವುದಿಲ್ಲ. ಅಂತಹ ಖಚಿತತೆ, ನಿಖರತೆ ಗಾಂಧೀಜಿಯವರ ಚಿಂತನೆಗಳಲ್ಲಿದೆ. ವೈಜ್ಞಾನಿಕ ದೃಷ್ಟಿಕೋನದ ಜೊತೆ ಜೊತೆಯಲ್ಲೇ ಆಧ್ಯಾತ್ಮಿಕ ನೆಲೆಗಟ್ಟಿನಲ್ಲಿ ನಿಂತು ಸಂಶಯಕ್ಕೆ, ಗೊಂದಲಕ್ಕೆ ಎಡೆಯಿಲ್ಲದಂತೆ ತಮ್ಮ ಚಿಂತನೆಗಳನ್ನು ಬಿಡಿಸಿ ಹೇಳಬಲ್ಲ ಶಕ್ತಿಯನ್ನು ಗಾಂಧೀಜಿ ಹೊಂದಿದ್ದರು.

ಸೂಕ್ಷ್ಮದರ್ಶಕದ ಅಡಿಯಲ್ಲಿನ ಜೀವಕೋಶಗಳ ಸೂಕ್ಷ್ಮ ಸಂರಚನೆಯನ್ನು ಬೆರಗುಗಣ್ಣಿನಿಂದ ನೋಡಿ ಉದ್ಗರಿಸುತ್ತಿದ್ದ ಗಾಂಧೀ ಅಷ್ಟೇ ತಣ್ಣಗೆ ಕಣ್ಮುಚ್ಚಿ ಆಧ್ಯಾತ್ಮಿಕ ಒಳಗಣ್ಣಿನಿಂದ ಜೀವನವನ್ನು ವಿಶ್ಲೇಷಿಸುತ್ತಾ ತನ್ಮಯರಾಗುತ್ತಿದ್ದರು.

ವಕೀಲಿ ವೃತ್ತಿಯನ್ನು ಬದುಕಿಗಾಗಿ ಗಾಂಧೀಜಿ ಆಯ್ಕೆ ಮಾಡಿಕೊಂಡರೂ ಅದರಲ್ಲಿ ಅವರು ಬಹಳ ದಿನ ನಿಲ್ಲಲಿಲ್ಲ. ಜನರ ನೆಮ್ಮದಿಯ ಬದುಕಿಗೆ ಅಗತ್ಯವಾದ ಸಂಪನ್ಮೂಲಗಳನ್ನು ನಿಸರ್ಗದಿಂದ ಪಡೆಯುವ ಬಗೆಯನ್ನು ತಾವೇ ಹೇಗೆ ರೂಪಿಸಿಕೊಳ್ಳಬೇಕೆಂಬ ಮಾರ್ಗವನ್ನು ಸ್ವಯಂ ಪ್ರಯೋಗದಿಂದ ಕಂಡುಕೊಂಡ ಗಾಂಧೀ ಅದನ್ನು ಅನುಸರಿಸುವ ಮೂಲಕ ಆಗುವ ಒಳಿತನ್ನು ಜಗತ್ತಿಗೆ ತೆರೆದಿಟ್ಟರು.

ಭಾರತದ ಇತಿಹಾಸದಲ್ಲಿ ಗಾಂಧೀಜಿ ಓರ್ವ ರಾಷ್ಟ್ರನಿರ್ಮಾಪಕರಾಗಿ ಮಾತ್ರ ನಿಲ್ಲದೆ ಅವರು ರಾಷ್ಟ್ರೀಯ ಭಾವೈಕ್ಯದ ಸಂಕೇತವಾಗಿದ್ದಾರೆ. ನಮ್ಮ ರಾಷ್ಟ್ರದ ಚರಿತ್ರೆಯನ್ನು ಅವಲೋಕಿಸಿದಾಗ ಭಾರತೀಯ ಸಮುದಾಯದ ಮೇಲೆ ಅವರು ಬೀರಿದ ಪ್ರಭಾವ ಎಷ್ಟು ಗಾಢವಾದದ್ದು ಎಂಬುದರ ಅರಿವಾಗುತ್ತದೆ. ಗಾಂಧೀಜಿಯವರ ಜೀವನ ಮತ್ತು ಸಂದೇಶ ದೇಶ ಕಾಲಾತೀತವಾಗಿದ್ದು, ಲೋಕಕ್ಕೆ ನಿರಂತರ ಸ್ಫೂರ್ತಿದಾಯಕವೂ, ಮಾರ್ಗದರ್ಶಕವೂ ಆಗಿದೆ. ■

ವಾರಭವಿಷ್ಯ



2.10.2022 ರಿಂದ 8.10.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ
ರವಿ–ಕನ್ಯಾ, ಚಂದ್ರ–ಧನುಸ್ಸು, ಮಕರ, ಕುಂಭ, ಕುಜ–ವೃಷಭ, ಬುಧ–ಕನ್ಯಾ, ಗುರು–ಮೀನ, ಶುಕ್ರ–ಕನ್ಯಾ, ಶನಿ–ಮಕರ, ರಾಹು–ಮೇಷ ಮತ್ತು ಕೇತು–ತುಲಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ಸೂತ್ರ ಚೆನ್ನಾಗಿದ್ದರೆ ಎಲ್ಲವೂ ಸುಸೂತ್ರ. ಪ್ರತಿ ಹೆಜ್ಜೆಯನ್ನೂ ಎಚ್ಚರಿಕೆಯಿಂದ ಇಡಿ. ವ್ಯಾಪಾರ ವ್ಯವಹಾರಗಳು ನೀವಂದುಕೊಂಡಂತೆ ಸಾಗದು. ಅನೈಚ್ಛಿಕವಾಗಿ ಖರ್ಚುಗಳು ಎದುರಾಗುವುದು. ವಾರ ಮಧ್ಯೆ ಆಪ್ತೇಷ್ಟರ ಮಿಲನ. ಮನೆಗೆ ಗೃಹ ಬಳಕೆ ವಸ್ತುಗಳು ಬರುವುದು. ಸ್ತ್ರೀಯರು ಅಲಂಕಾರಿಕ ವಸ್ತುಗಳಿಗೆ ಹೆಚ್ಚಿನ ಹಣ ವ್ಯಯಿಸುವರು. ಜನ್ಮ ರಾಹು ಇರುವ ಕಾರಣ ನಿಮ್ಮವರೇ ನಿಮ್ಮನ್ನು ಅನುಮಾನಿಸಿ ನೋಡುವರು. – ಶ್ರೀ ಗಣಪತಿ ಪ್ರಾರ್ಥನೆ, ಶುಭಸಂಖ್ಯೆ–8.



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಚಂದ್ರಗ್ರಹದ ಕೃಪೆಯಿಂದ ಸುಖ, ಸಂಪತ್ತುಗಳನ್ನೂ, ಹೊಸ ಸನ್ಮಿತ್ರರನ್ನು ಪಡೆಯುವಿರಿ. ವಸ್ತ್ರ, ಅಲಂಕಾರಿಕ ವಸ್ತುಗಳ ಖರೀದಿ. ನ್ಯಾಯ–ನೀತಿಯಲ್ಲಿ ನಿಷ್ಠೆಯನ್ನು ತೋರುವಿರಿ. ಮನಸ್ಸು ನಿರ್ಮಲವಾಗಿರುವುದು. ವ್ಯಾಪಾರ, ವ್ಯವಹಾರಗಳಲ್ಲಿ ಲಾಭ ಗಳಿಕೆ ಆಗುವುದು. ವ್ಯಯಸ್ಥಿತ ರಾಹುವಿನಿಂದ ದುಷ್ಟ ಜನರ ಸಹವಾಸ. ಅನೈತಿಕ ಕಾರ್ಯಗಳಿಗೆ ಪ್ರೇರಣೆ, ಅಜೀರ್ಣ ಬಾಧೆ ಕಾಡಿಸುವುದು, ವೈದ್ಯರ ದರ್ಶನ. – ಶ್ರೀ ಚಾಮುಂಡೇಶ್ವರಿ ದರ್ಶನ, ಶುಭಸಂಖ್ಯೆ–4.



ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ದೀರ್ಘಕಾಲಿಕವಾಗಿ ನಿಂತಿದ್ದ ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಳ್ಳಿ. ಸಫಲರಾಗುವಿರಿ. ನೂತನ ಮಿತ್ರರ ಮಾರ್ಗದರ್ಶನ ದೊರಕುತ್ತದೆ. ಅನಾರೋಗ್ಯದ ಆತಂಕ ನಿವಾರಣೆ ಆಗುತ್ತದೆ. ನಿಮ್ಮ ಸ್ವಬುದ್ಧಿ ಸಾಮರ್ಥ್ಯದಿಂದ ಆಸ್ತಿ–ಪಾಸ್ತಿ ಗಳಿಕೆ ಆಗುವುದು. ಸತಿ–ಪತಿಯರಲ್ಲಿ ಉಂಟಾಗಿದ್ದ ವಿರಸ ನಿವಾರಣೆ, ಸರಸ–ಸಲ್ಲಾಪ, ಕೆಲವರಿಗೆ 'ವಿಲ್'ನಿಂದ ಆಸ್ತಿ, ಹಣಕಾಸು ದೊರೆಯಬಹುದು. ವಾರಾಂತ್ಯಕ್ಕೆ ಲಘು ಟ್ರಿಪ್, ಪುಣ್ಯಕ್ಷೇತ್ರ ಸಂದರ್ಶನ. – ಶ್ರೀ ರಾಮರಕ್ಷಾ ಸ್ತೋತ್ರ ಪಠಿಸಿ, ಶುಭಸಂಖ್ಯೆ–2.



ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)
ದಕ್ಷತೆಯಿಂದ ನಿಮ್ಮ ಕೆಲಸ ಕಾರ್ಯಗಳ ನಿರ್ವಹಣೆಗೆ ಗುರುಬಲದ ರಕ್ಷಣೆಯಿದೆ. ಸ್ವ ಪ್ರಭಾವದಿಂದ ಐಶ್ವರ್ಯ ಪ್ರಾಪ್ತಿ. ಮನಸ್ಸಿಗೆ ಮುದ ನೀಡುವ ಪ್ರಸಂಗಗಳು ನಡೆಯಲಿವೆ. ಹೋಟೆಲ್, ಕ್ಯಾಟರಿಂಗ್, ಟೂರಿಸ್ಟ್ ಉದ್ಯಮಿಗಳಿಗೆ ಹೇರಳ ಧನಲಾಭ, ವಿವಾಹ ಯೋಗ್ಯರಿಗೆ ಮನ ಮೆಚ್ಚಿನ ವಧು–ವರ ದೊರೆಯುವ ಸಂಭವ. ಯಂತ್ರ–ಎಲೆಕ್ಟ್ರಿಕ್ ಮಿಷಿನ್‌ಗಳ ಮೇಲೆ ಕೆಲಸ ಮಾಡುವವರು ಜಾಗ್ರತೆಯಿಂದ ಕೆಲಸ ನಿರ್ವಹಿಸಿ. – ಶ್ರೀ ಅಪರಾಜಿತ ಸ್ತೋತ್ರ ಪಠಿಸಿ, ಶುಭಸಂಖ್ಯೆ–6.



ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ಅನ್ಯರಿಂದ ಪಡೆದ ಐಶ್ವರ್ಯ ಹೆಚ್ಚು ಕಾಲ ಕೈಯ್ಯಲ್ಲಿ ನಿಲ್ಲದು. ಸುಖ, ಸಂಪತ್ತುಗಳು ಒದಗಿ ಬಂದರೂ ಮಾನಸಿಕ ಕಳವಳ ನೀಗದು. ವ್ಯಾಪಾರ ವಹಿವಾಟುಗಳು ಗ್ರಹಗಳ ಬೆಂಬಲವಿಲ್ಲದೆ ಸುಖವಿಲ್ಲ. ವಾರಮಧ್ಯೆ ಗಣ್ಯ ವ್ಯಕ್ತಿಗಳ ಒಡನಾಟ ಸಂಭವ. ಶ್ರೀಮತಿಯ ಸಲಹೆಗಳನ್ನು ಪುರಸ್ಕರಿಸಿದರೆ ಪ್ರಯೋಜನವಾಗುವುದು. ಸಾರ್ವಜನಿಕ ರಂಗದಲ್ಲಿರುವ ವ್ಯಕ್ತಿಗಳಿಗೆ ಹೆಚ್ಚಿನ ಚಟುವಟಿಕೆಗಳು ಉಂಟಾಗುವುದು. ಖಯಾಲಿ ಪ್ರವಾಸಗಳು ಒಳ್ಳೆಯದಲ್ಲ. – ಶ್ರೀ ಹನುಮಾನ್ ಚಾಲೀಸ ಪಠಿಸಿ, ಶುಭಸಂಖ್ಯೆ–1.



ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ನಿಮ್ಮ ಸಕಲ ಕಾರ್ಯಗಳು ಸಫಲತೆಯ ಹಾದಿಯಲ್ಲಿ ಸಾಗಲು ಗುರುಬಲದ ಜೊತೆಗೆ ಪತ್ನಿ, ಪುತ್ರರ ಸಹಕಾರವೂ ಇದಕ್ಕೆ ಪೂರಕವಾಗಿದೆ. ನಿಮ್ಮ ಉದಾರ ಗುಣ, ಧರ್ಮ ಕಾರ್ಯಗಳಿಂದ ಪ್ರಸಿದ್ಧಿಗೆ ಬರುವಿರಿ. ಕೃಷಿಕರಿಗೆ ಉತ್ತಮ ಬೆಳೆ–ಬೆಲೆ ಎರಡೂ ದೊರೆಯುವುದು. ಬಾಳ ಸಂಗಾತಿ ಅರಸುತ್ತಿರುವವರಿಗೆ ಸಿಹಿ ಸುದ್ದಿ ಬಂದೀತು. ಹಲವು ವಿದ್ಯಾರ್ಥಿಗಳಿಗೆ ಸಾಗರೋತ್ತರ ಶಿಕ್ಷಣದ ಯೋಗವಿದೆ. ಪಾನೀಯಗಳಲ್ಲಿ ಸಂಯಮವಿರಲಿ. – ಶ್ರೀ ಅಷ್ಟಾಕ್ಷರಿ ಮಂತ್ರ ಜಪ, ಶುಭಸಂಖ್ಯೆ–7.



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಈ ಸಪ್ತಾಹದಲ್ಲಿ ಯಾವುದೇ ಹುಚ್ಚು ಸಾಹಸಗಳಿಗೆ ಕೈ ಹಾಕದಿರಿ. ಅಸೂಯೆ ಸ್ವಭಾವದಿಂದ ಮಾನಸಿಕ ನೆಮ್ಮದಿಗೆ ಭಂಗವಾಗುವುದು. ಜೀವನದಲ್ಲಿ ಹೊಂದಿಕೊಂಡು ಬಾಳುವುದರಿಂದ ಅಂದುಕೊಳ್ಳುವುದು ಆಗುವುದು. ಯಾವುದೇ ಕೆಲಸ ಪರಿಶ್ರಮವಿಲ್ಲದೆ ಸಿದ್ಧಿಸುವುದಿಲ್ಲ. ಐಟಿ, ಬಿಟಿ ಉದ್ಯೋಗಿಗಳಿಗೆ ಹೊಸ ಸಂಕಷ್ಟಗಳು ಎದುರಾಗಬಹುದು. ಸಾಫ್ಟ್‌ವೇರ್ ಮಂದಿಗೆ ಕಾನೂನು ತೊಡಕುಗಳು ಎದುರಾಗಬಹುದು. ದೂರ ಪ್ರಯಾಣ ಸಲ್ಲದು. – ಶ್ರೀ ದುರ್ಗಾಷ್ಟಕ ಪಠಿಸಿ, ಶುಭಸಂಖ್ಯೆ–5.



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)
ಸ್ವಪ್ರಯತ್ನವಿಲ್ಲದೆ ದೈವಸಹಾಯ ದೊರಕದು. ದೈವ ಸಹಾಯವಿಲ್ಲದೆ ಜಯವೂ ದೊರಕದು. ಸರ್ಕಾರಿ ಹಿರಿಯ ಅಧಿಕಾರಿಗಳ ಸಹಕಾರ ದೊರಕುವುದು. ನಿಮ್ಮ ಕರ್ಮಸ್ಥಳ ಬದಲಾಗುವ ಸಾಧ್ಯತೆಯಿದೆ. ಕೆಲವೊಂದು ಆತುರದ ನಿರ್ಧಾರಗಳು ನಿಮಗೆ ಮುಳುವಾಗಬಹುದು. ನೆರೆಹೊರೆಯಲ್ಲಿ ಸೌಹಾರ್ದತೆಯಿಂದ ಇರಲು ಪ್ರಯತ್ನಿಸಿ. ಫರ್ನಿಚರ್, ಮರಮುಟ್ಟು ವ್ಯಾಪಾರಿಗಳಿಗೆ ಹೇರಳ ಧನಲಾಭವಾಗುವುದು. – ಶ್ರೀ ಸುಬ್ರಹ್ಮಣ್ಯ ಸ್ತುತಿ, ಶುಭಸಂಖ್ಯೆ–3.



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ನಿಮ್ಮ ಸಕಲ ಕೆಲಸ ಕಾರ್ಯಗಳು ಸಫಲವಾಗಬೇಕೆಂದರೆ ಗುರುಹಿರಿಯರ ಮಾರ್ಗದರ್ಶನದ ಅಗತ್ಯವಿದೆ. ಮನೆ ಸಂಬಂಧ ವಿಚಾರಗಳು ಧನಾತ್ಮಕವಾಗಿ ಸಾಗುವುದು. ಆಪ್ತರ ವಿವೇಕದ ಮಾತಿಗೆ ಮಾನ್ಯತೆ ನೀಡುವುದರಿಂದ ಒಳಿತಾಗುವುದು. ವಾರದ ಕಡೆಗೆ ಧನ–ಕನಕ ಪ್ರಾಪ್ತಿ. ಕೃಷಿಕರಿಗೆ ಉತ್ತಮ ಫಸಲು ಹಾಗೂ ಬೆಲೆ ದೊರಕುವುದು. ಸಹೋದರರಲ್ಲಿ ಮೂಡಿದ್ದ ಭಿನ್ನಾಭಿಪ್ರಾಯಗಳು ನಿವಾರಣೆ ಆಗುವುದು. ಎಲ್ಲಿಯೂ ಅತೀ ಸಾಹಸ ಮಾಡದಿರಿ. – ಶ್ರೀ ದತ್ತಗುರು ಉಪಾಸನೆ, ಶುಭಸಂಖ್ಯೆ–9.



ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)
ವಾರದಾರಂಭಕ್ಕೆ ಚಂದ್ರಮನ ಶುಭ ಸಂಚಾರ ಮೈಮನಗಳಲ್ಲಿ ಪುಳಕವನ್ನು ನೀಡಲಿದೆ. ಹಣಕಾಸಿನ ಸ್ಥಿತಿಯಲ್ಲಿ ಸುಧಾರಣೆಯನ್ನು ಕಾಣುವಿರಿ. ಹಳೆ ಸಾಲಗಳಿದ್ದರೆ ಚುಕ್ತಾ ಮಾಡಿಕೊಳ್ಳಿ. ಮಿತ್ರ ಜನರ ಒತ್ತಾಸೆಯಿಂದ ಕೈಗೊಂಡ ಕಾರ್ಯದಲ್ಲಿ ಗುರಿ ಮುಟ್ಟುವಿರಿ. ಮಂತ್ರಿ–ಅಧಿಕಾರಿಗಳ ದರ್ಶನದಿಂದ ಕಾರ್ಯಸಾಧನೆ. ರಾಹುವಿನ ಕಾರಣ ದುಷ್ಟ ಜನರ ಸಹವಾಸದಿಂದ ತೊಂದರೆಗೆ ಗುರಿಯಾಗುವಿರಿ. ಜಲಾಶಯಗಳ ಹತ್ತಿರ ಹುಡುಗಾಟ ಬೇಡಿ. – ಶ್ರೀ ಹನುಮಾನ್ ಚಾಲೀಸ ಪಠಿಸಿ, ಶುಭಸಂಖ್ಯೆ–5.




ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಸಾಡೇಸಾತಿ ಶನಿದೇವನ ಪ್ರಭಾವದ ಹೊರತಾಗಿಯೂ ಶ್ರೀಗುರುವಿನ ಕೃಪೆಯಿಂದ ಸಾಮಾಜಿಕ ಮರ್ಯಾದೆ, ಐಶ್ವರ್ಯ, ವಿಜಯಗಳು ದೊರೆಯಲಿದೆ. ಕೆಲವರಿಗೆ ದೀರ್ಘ ಅನಾರೋಗ್ಯದಿಂದ ಬಿಡುಗಡೆ ಆಗುವುದು. ಕೋರ್ಟು ಕಛೇರಿ ಕೆಲಸಗಳು ಅನುಕೂಲಕರವಾಗಿದೆ. ಸರ್ಕಾರಿ ನೌಕರರಿಗೆ ವರ್ಗ ಸಹಿತ ಬಡ್ತಿ ದೊರೆಯುವುದು. ವಿವಾಹಕ್ಕೆ ಹೊಸ ಸಂಬಂಧಗಳ ಅನ್ವೇಷಣೆ ನಡೆಸಲು ಅಡ್ಡಿ ಇಲ್ಲ. ನಿಧಾನವಾಗಿ ವಾಹನ ಚಲಿಸಿ ಕ್ಷೇಮವಾಗಿ ಮನೆ ತಲುಪಿ. – ಶ್ರೀ ಮಾರುತಿ ವಂದನೆ, ಶುಭಸಂಖ್ಯೆ–2.



ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ವಾರದಾರಂಭಕ್ಕೆ ಮನೆಯಲ್ಲಿ ಸಂತೋಷ, ಅನ್ಯೋನ್ಯತೆಗಳು ಕಾಣುವುದು. ಆಸ್ತಿ ಪಾಸ್ತಿಗೆ ಸಂಬಂಧಿಸಿದ ವಿಚಾರಗಳಲ್ಲಿ ಆಶಾದಾಯಕ ಫಲವನ್ನು ನಿರೀಕ್ಷಿಸಿರಿ. ಜನ್ಮರಾಶಿ ಸ್ಥಿತ ಗುರುವಿನಿಂದ ವೈಯಕ್ತಿಕ ಕೆಲಸ ಕಾರ್ಯಗಳು ನಿಧಾನಗತಿಯಲ್ಲಿ ಸಾಗುವುದು. ಕೈಗೆ ಬಂದ ಹಣ ಕ್ಷಣಮಾತ್ರದಲ್ಲಿ ಖಾಲಿಯಾಗುವುದು. ಕಂಟ್ರಾಕ್ಟರುಗಳಿಗೆ ಉತ್ತಮ ಯೋಜನೆ ದೊರೆಯಲಿದೆ. ವಾರದ ಕಡೆಗೆ ನಿಮ್ಮ ಕ್ರಿಯಾಶೀಲತೆಯಿಂದ ಆರ್ಥಿಕ ಪ್ರಗತಿಯನ್ನು ಕಾಣುವಿರಿ. – ಶ್ರೀ ನಂಜುಂಡೇಶ್ವರ ದರ್ಶನ, ಶುಭಸಂಖ್ಯೆ–4.

ಮಕ್ಕಳ ಚಿತ್ರ ಕಥೆ
"ಅಧ್ಯಾಪಕರು ಕೇಳಿದ ಅಪರೂಪದ ಪ್ರಶ್ನೆ"

–ಹೆಚ್.ಜಿ.ಎನ್.ಪ್ರಸಾದ್, ಮೊ: 9845376199



ಸವಿ ರುಚಿ
ಬೀಟ್‌ರೂಟ್ ಹಲ್ವಾ



ಬೇಕಾಗುವ ಪದಾರ್ಥಗಳು...

- ಬೀಟ್‌ರೂಟ್: 2, ಮಧ್ಯಮ ಗಾತ್ರದ್ದು
- ಹಾಲು: 1 ಕಪ್
- ಸಕ್ಕರೆ: 1/2 ಕಪ್
- ತುಪ್ಪ: 2 ಚಮಚ
- ಖೋಯಾ: 100 ಗ್ರಾಂ
- ಹಸಿರು ಏಲಕ್ಕಿ: 1 ಚಮಚ
- ಗೋಡಂಬಿ: 6, ಒಡೆದದ್ದು
- ಒಣದ್ರಾಕ್ಷಿ: 8
- ತುಪ್ಪ: 2 ಚಮಚ

ಮಾಡುವ ವಿಧಾನ...

ಬೀಟ್‌ರೂಟ್ ತುರಿ ಮತ್ತು ಗೋಡಂಬಿ/ ಬಾದಾಮ್ ಮತ್ತು ಒಣದ್ರಾಕ್ಷಿಗಳನ್ನು ತುಪ್ಪದಲ್ಲಿ ಫ್ರೈ ಮಾಡಿ. ಅದೇ ಪ್ಯಾನ್‌ನಲ್ಲಿ ತುರಿದ ಬೀಟ್‌ರೂಟ್ ಸೇರಿಸಿ ಮತ್ತು ಸುಮಾರು ಐದು ನಿಮಿಷಗಳ ಕಾಲ ಕಡಿಮೆ ಉರಿಯಲ್ಲಿ ಹುರಿಯಿರಿ. ಈಗ ಅದಕ್ಕೆ ಹಾಲು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಬಾಣಲೆಯನ್ನು ಮುಚ್ಚಿ ಮತ್ತು ಸುಮಾರು 10 ನಿಮಿಷಗಳ ಕಾಲ ಕಡಿಮೆ ಉರಿಯಲ್ಲಿ ಬೇಯಲು ಬಿಡಿ. ನಡುನಡುವೆ ಪ್ಯಾನ್‌ನಲ್ಲಿ ಮಿಶ್ರಣವನ್ನು ಕದಡುತ್ತಿರಿ.

ಬೀಟ್‌ರೂಟ್ ತುರಿ ಬಹುತೇಕ ಹಾಲಿನಲ್ಲಿ ನೆನೆಸಿದ ನಂತರ, ಅದಕ್ಕೆ ಸಕ್ಕರೆ ಸೇರಿಸಿ ಮತ್ತು ಅದನ್ನು ಚೆನ್ನಾಗಿ ಮಿಶ್ರಣ ಮಾಡಿ. ಇದಕ್ಕೆ ಖೋಯಾ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಏಲಕ್ಕಿ ಪುಡಿಯನ್ನು ಸೇರಿಸಿ, ಮಿಶ್ರಣ ಮಾಡಿ ಮತ್ತು ಸ್ಟವ್‌ನಿಂದ ಕೆಳಗಿಳಿಸಿ.

ಮೈಸೂರು ಮಿತ್ರ
ಭಾನುವಾರ 2 ಅಕ್ಟೋಬರ್ 2022

ಭಾರತ ಐಕ್ಯತಾ ಯಾತ್ರೆಯ 2ನೇ ದಿನದ ಚಿತ್ರಾವಳಿ...





ನಂಜನಗೂಡು ಬಳಿ ರಾಹುಲ್ ಗಾಂಧಿ ಏಕತಾ ಯಾತ್ರೆಯಲ್ಲಿ ಪಾಲ್ಗೊಂಡಿರುವ ಜನಸ್ತೋಮ. ಈ ವೇಳೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಪಕ್ಷ ನಾಯಕ ಸಿದ್ದರಾಮಯ್ಯ ಸೇರಿದಂತೆ ಸಾವಿರಾರು ಕಾಂಗ್ರೆಸ್ ಮುಖಂಡರು ಇದ್ದರು.




ಪ್ರೀತಿ ಸಿಗದೆ ದ್ವೇಷಿಸುವ ಮೋದಿ: ರಾಹುಲ್ ಗಾಂಧಿ ಅನುಕಂಪ

ಕಳಲೆ (ಮೈಸೂರು ಜಿಲ್ಲೆ): ಪ್ರಧಾನಿ ನರೇಂದ್ರ ಮೋದಿ ಹಿನ್ನೆಲೆಯನ್ನು ಗಮನಿಸಿದರೆ ಅವರಿಗೆ ಎಲ್ಲಿಯೂ ಪ್ರೀತಿ ಸಿಕ್ಕಿಲ್ಲ. ಹೀಗಾಗಿಯೇ ಈಗ ಎಲ್ಲರನ್ನೂ ದ್ವೇಷಿಸುತ್ತಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅನುಕಂಪ ವ್ಯಕ್ತಪಡಿಸಿದ್ದಾರೆ.

ಭಾರತ್ ಜೋಡೋ ಪಾದಯಾತ್ರೆಯ ವಿಶ್ರಾಂತಿಯ ಸಮಯದಲ್ಲಿ ಇಲ್ಲಿನ ಕಳಲೆ ಗೇಟ್ ಬಳಿ ಕಲೆಯು ದ್ವೇಷವನ್ನು ನಿಗ್ರಹಿಸುತ್ತದೆ ಎಂಬ ಶೀರ್ಷಿಕೆಯಲ್ಲಿ ವಿವಿಧ ರಂಗದ ಪ್ರತಿನಿಧಿಗಳೊಂದಿಗೆ ಶನಿವಾರ ಸಂವಾದ ನಡೆಸಿದರು. ಮೋದಿ ಒಂದು ಕಾಲಕ್ಕೆ ಎಲ್ಲರಿಂದಲೂ ನಿರ್ಲಕ್ಷ್ಯಕ್ಕೆ ಒಳಗಾಗಿದ್ದರು. ಅವರ ಪಕ್ಷದ ನಾಯಕರಾರೂ ಅವರನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಇದರಿಂದಾಗಿಯೇ ಈಗ ಎಲ್.ಕೆ.ಅಡ್ವಾಣಿ ಸೇರಿದಂತೆ ಆ ಪಕ್ಷದ ನಾಯಕರೆಲ್ಲರನ್ನೂ ಕಡಗಣಿಸುತ್ತಿದ್ದಾರೆ ಎಂದು ವಿಶ್ಲೇಷಿಸಿದ್ದಾರೆ.

ಆರ್‌ಎಸ್‌ಎಸ್‌ನವರು ಭಯವನ್ನು ಸೃಷ್ಟಿಸುತ್ತಿದ್ದಾರೆ. ನಂತರ ಅದನ್ನು ದ್ವೇಷವನ್ನಾಗಿ ಪರಿವರ್ತಿಸುತ್ತಾರೆ. ಹೀಗಾಗಿ, ಆ ಸಂಘಟನೆಯ ಬಗ್ಗೆ ಭಯವನ್ನು ಬಿಡಿ. ಆಗ ಅದಾಗಿಯೇ ನಿಷ್ಕ್ರಿಯವಾಗುತ್ತದೆ. ದ್ವೇಷವನ್ನು ಬಿತ್ತುತ್ತಿರುವ ಬಗ್ಗೆ ಜಾಗೃತಿ ಮೂಡಿಸುವುದಕ್ಕಾಗಿಯೇ ನಾವು ಭಾರತ ಐಕ್ಯತಾ ಯಾತ್ರೆ ನಡೆಸುತ್ತಿದ್ದೇವೆ. ಒಬ್ಬ ರಾಹುಲ್ ನಡೆದರೆ ಭಾರತ್ ಜೋಡೋ ಆಗುವುದಿಲ್ಲ. ಜನರೆಲ್ಲರೂ ಕೈಜೋಡಿಸಿದರೆ ಮಾತ್ರ ಸಾಧ್ಯವಾಗುತ್ತದೆ ಎಂದು ಕೋರಿದ್ದಾರೆ.

ದ್ವೇಷದ ಆಯುಧ: ಬಿಜೆಪಿಯವರು ಭಯವನ್ನು ದ್ವೇಷದ ಆಯುಧವನ್ನಾಗಿ ಬಳಸಿಕೊಳ್ಳುತ್ತಿದ್ದಾರೆ. ಹಿಂದೆ ಹಳ್ಳಿಗಳಲ್ಲಿ ಇದ್ದಂತಹ ಸುರಕ್ಷಾ ಭಾವ ಎಲ್ಲ ಕಡೆಯೂ ಮೂಡಬೇಕು. ಇದಕ್ಕಾಗಿ ಆರ್‌ಎಸ್‌ಎಸ್, ಮೋದಿಯನ್ನು ದ್ವೇಷಿಸಬೇಕಿಲ್ಲ. ನಮ್ಮೊಳಗಿನ ಭಯವನ್ನು ಹೋಗಲಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ.

ನೋಟು ಅಮಾನ್ಯೀಕರಣದಿಂದ ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳು ಮುಚ್ಚಿದವು; ಲಕ್ಷಾಂತರ ಮಂದಿ ನಿರುದ್ಯೋಗಿಗಳಾದರು. ಜನರನ್ನು ಬಡತನಕ್ಕೆ ತಳ್ಳಿ ಗುಲಾಮಗಿರಿಗೆ ತೆಗೆದುಕೊಂಡು ಹೋಗುವುದು ಬಿಜೆಪಿಯವರ ಉದ್ದೇಶ. ಜನರನ್ನು ಸಬಲರನ್ನಾಗಿಸುವ ಬದಲಿಗೆ ದುರ್ಬಲರನ್ನಾಗಿಸುವ ಕಾರ್ಯತಂತ್ರ ಅವರದು. ಅದರ ವಿರುದ್ಧ ನಾವು ಹೋರಾಡಬೇಕು ಎಂದು ಕರೆ ನೀಡಿದ್ದಾರೆ ಎಂದು ಸಂವಾದದಲ್ಲಿ ಪಾಲ್ಗೊಂಡಿದ್ದವರು ಮಾಧ್ಯಮದೊಂದಿಗೆ ಹಂಚಿಕೊಂಡರು.

ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ: ಲೇಖಕರು, ಚಿಂತಕರು, ಕಲಾವಿದರು, ಪತ್ರಿಕೋದ್ಯಮ ಕ್ಷೇತ್ರದವರು, ಆರ್‌ಎಸ್‌ಎಸ್ ಭಯ ಬಿತ್ತುವ ಕೆಲಸ ಮಾಡುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುತ್ತಿದೆ. ಪ್ರಶ್ನಿಸಿದರೆ ಕಷ್ಟ ಎನ್ನುವಂತಹ ಆತಂಕದ ವಾತಾವರಣ ನಿರ್ಮಿಸಲಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ. ಗಾಯಕ ಚಿಂತನ್ ವಿಕಾಸ್ ಸಂವಿಧಾನದ ಪೀಠಿಕೆಯ ಕನ್ನಡ ಅನುವಾದವನ್ನು ಸಂಯೋಜಿಸಿ ಹಾಡಿದರು. ದಲಿತ ಎಂಬ ಕಾರಣಕ್ಕೆ ಸರ್ಕಾರ ನಿರ್ಲಕ್ಷಿಸುತ್ತಿದೆ ಎಂದರು. ಯಾರನ್ನು ಯಾರೂ ನಿರ್ಲಕ್ಷಿಸಲಾಗದು. ಸಂವಿಧಾನ ರಕ್ಷಣೆಗೆ ಕಟಿಬದ್ಧವಾಗಿ ಹೋಗಬೇಕು. ರಕ್ಷಿಸಿಕೊಳ್ಳಬೇಕಿರುವುದು ನಾವೇ ಅಲ್ಲವೇ ಎಂದು ಕೇಳಿದ್ದಾರೆ.



ರಾಹುಲ್ ಗಾಂಧಿ ಅವರನ್ನು ಸ್ವಾಗತಿಸಲು ನೆರೆದಿದ್ದ ಅಪಾರ ಜನಸ್ತೋಮ.


ನಂಜನಗೂಡು ತಾಲೂಕಿನ ಸಿಂಧುವಳ್ಳಿಯ ಸುರುಚಿ ಕಾರ್ಖಾನೆಯಲ್ಲಿ ರಾಹುಲ್ ಗಾಂಧಿ ಬೆಳಗಿನ ಉಪಾಹಾರ.


ಕಳಲೆ ಗೇಟ್‌ನಲ್ಲಿ ತಾವೇ ಊಟ ಬಡಿಸಿ ಗಮನ ಸೆಳೆದ ಧ್ರುವನಾರಾಯಣ್.

ಪೇಸಿಎಂ ಟೀ ಶರ್ಟ್ ಧರಿಸಿದ್ದ ವ್ಯಕ್ತಿ ಮೇಲೆ ಹಲ್ಲೆ ನಡೆಸಿದ ಪೊಲೀಸರ ಅಮಾನತಿಗೆ ಸಿದ್ದರಾಮಯ್ಯ ಆಗ್ರಹ

ಕಳಲೆ: ಪೇಸಿಎಂ ಟೀ ಶರ್ಟ್ ಧರಿಸಿದ್ದ ಕಾಂಗ್ರೆಸ್ ಕಾರ್ಯಕರ್ತನ ಮೇಲೆ ಹಲ್ಲೆ ನಡೆಸಿದ ಪೊಲೀಸರನ್ನು ಅಮಾನತು ಪಡಿಸಬೇಕೆಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಈ ವಿಚಾರವಾಗಿ ವಿಡಿಯೊ ಟ್ವೀಟ್ ಮಾಡಿರುವ ಅವರು, ಪೇಸಿಎಂ ಟೀ ಶರ್ಟ್ ಧರಿಸಿದ್ದ ನಮ್ಮ ಪಕ್ಷದ ಕಾರ್ಯಕರ್ತನ ಮೇಲೆ ಬೀದಿ ಗೂಂಡಾ ರೀತಿ ಹಲ್ಲೆಗೈದ ಪೊಲೀಸ್ ಅಧಿಕಾರಿಯ ಕೃತ್ಯ ಖಂಡನೀಯ. ಈ ಪುಂಡ ಪೊಲೀಸನನ್ನು ಈ ಕೂಡಲೇ ಅಮಾನತು ಮಾಡಬೇಕು ಎಂದು ಮುಖ್ಯಮಂತ್ರಿ ಅವರನ್ನು ಆಗ್ರಹಿಸುತ್ತೇನೆ ಎಂದು ಒತ್ತಾಯಿಸಿದ್ದಾರೆ. ಯಥಾ ಮುಖ್ಯಮಂತ್ರಿ, ತಥಾ ಪೊಲೀಸ್. ಕರ್ನಾಟಕದಲ್ಲಿ ಯುಪಿ ಮಾದರಿ ಆಡಳಿತ ತರುತ್ತೇವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದರು. ಪೊಲೀಸರು ಅದನ್ನು ಅನುಷ್ಠಾನಗೊಳಿಸಲು ಹೊರಟಂತಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಕರ್ನಾಟಕದಲ್ಲಿರುವುದು ಲೂಟಿ ಸರ್ಕಾರ

● ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆಕ್ರೋಶ ● ದೇಶಭಕ್ತಿ, ಧರ್ಮದ ಹೆಸರಲ್ಲಿ ಸಮಾಜ ಒಡೆಯುವುದು; 40 ಪರ್ಸೆಂಟ್ ಕಮಿಷನ್ ಲೂಟಿ ಹೊಡೆಯುತ್ತಿದೆ

ಚಿಕ್ಕಯ್ಯನಛತ್ರ (ನಂಜನಗೂಡು ತಾ.), ಅ.1–ದೇಶಭಕ್ತಿ ಹಾಗೂ ಧರ್ಮದ ಹೆಸರಿನಲ್ಲಿ ಸಮಾಜ ಒಡೆದು, 40 ಪರ್ಸೆಂಟ್ ಕಮಿಷನ್ ಪಡೆದು ಲೂಟಿ ಹೊಡೆಯುತ್ತಿರುವ ಸರ್ಕಾರ ಕರ್ನಾಟಕದಲ್ಲಿ ಆಡಳಿತ ನಡೆಸುತ್ತಿದೆ ಎಂದು ಎಐಸಿಸಿ ನಾಯಕ ರಾಹುಲ್ ಗಾಂಧಿ ವಾಗ್ದಾಳಿ ನಡೆಸಿದರು. ರಾಜ್ಯದಲ್ಲಿ ಭಾರತ ಐಕ್ಯತೆ ಯಾತ್ರೆಯ ಎರಡನೇ ದಿನವಾದ ಶನಿವಾರ ಸಂಜೆ ನಂಜನಗೂಡು ತಾಲೂಕು ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚಿಕ್ಕಯ್ಯನಛತ್ರದಲ್ಲಿ ಏರ್ಪಡಿಸಿದ್ದ ಬಹಿರಂಗ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ದೇಶಭಕ್ತಿ ಮತ್ತು ಧರ್ಮದ ಹೆಸರಿನಲ್ಲಿ ಮೂರನೇ ವ್ಯಕ್ತಿಗಳು ನಿಮ್ಮ ಮನೆಗೆ ಬಂದು ಕುಟುಂಬವನ್ನು ಒಡೆಯುವ ಕೆಲಸವನ್ನು ಮಾಡುತ್ತಿದ್ದಾರೆ. 40 ಪರ್ಸೆಂಟ್ ಕಮಿಷನ್ ಪಡೆದು ಲೂಟಿ ಮಾಡುತ್ತಿದ್ದಾರೆ. ಈ ಸಂಬಂಧ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ, ಪ್ರಧಾನಿ ಮೋದಿ ಮತ್ತು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದರೂ, ಯಾವುದೇ ಕ್ರಮ ಕೈಗೊಂಡಿಲ್ಲ. ಹಾಗಾದರೆ ಈ 40 ಪರ್ಸೆಂಟ್ ಕಮಿಷನ್ ಹಣ ಯಾರ ಜೇಬು ಸೇರುತ್ತಿದೆ ಎಂದು ಪ್ರಶ್ನಿಸಿದರು.

ರಾಜ್ಯ ಸರ್ಕಾರವು ಪಿಎಸ್‌ಐ ಹಗರಣ, ಕೆಪಿಎಸ್‌ಸಿ ಹಗರಣ, ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕರ ಹುದ್ದೆ ನೇಮಕಾತಿಯಲ್ಲಿ ಅಕ್ರಮ ಸೇರಿದಂತೆ ಹಲವಾರು ಹಗರಣಗಳಲ್ಲಿ ತೊಡಗಿದೆ. ಈ ಹಗರಣಗಳ ಕುರಿತು ತನಿಖೆ ನಡೆಸಿ ಎಂದರೆ ಅದಕ್ಕೆ ಸರ್ಕಾರ ಸಿದ್ಧವಿಲ್ಲ. ಈ ಹಗರಣಗಳ ಹಣ ಒಂದು ಸಂಘಟನೆಯ ಕೈಸೇರುತ್ತಿದೆ ಎಂದು ಅವರು ಆರೋಪಿಸಿದರು.

ನರೇಂದ್ರ ಮೋದಿ ಪ್ರಧಾನಿಯಾದ ನಂತರ ರೈತರು, ಕಾರ್ಮಿಕರು, ಬಡವರು ಸಂಕಷ್ಟಕ್ಕೊಳಗಾದರು. ಎಲ್ಲಾ ಅತ್ಯಾವಶ್ಯಕ ವಸ್ತುಗಳ ಬೆಲೆ ಏರಿಕೆ ಮಾಡುವ ಮೂಲಕ ಮೋದಿ, ಕೆಲವು ವ್ಯಕ್ತಿಗಳನ್ನು ಶ್ರೀಮಂತರನ್ನಾಗಿ ಮಾಡಿದ್ದಾರೆ. ಯುಪಿಎ ಸರ್ಕಾರದ ಅವಧಿಯಲ್ಲಿ 400 ರೂ. ಇದ್ದ ಗ್ಯಾಸ್ ಬೆಲೆ ಈಗ 1050 ರೂ. ಆಗಿದೆ ಹಾಗಾದರೆ ಉಳಿದ 600 ರೂ. ಯಾರ ಜೇಬು ಸೇರುತ್ತಿದೆ? ಪೆಟ್ರೋಲ್ ಬೆಲೆಯು ಗಗನಕ್ಕೇರಿದೆ. ಇದರ ಹೆಚ್ಚುವರಿ ಹಣ ಯಾರ ತಿಜೋರಿ ಸೇರುತ್ತಿದೆ ಎಂದು ಪ್ರಶ್ನಿಸಿದರು.

ಕೊರೊನಾ ಸಮಯದಲ್ಲಿ ಲಕ್ಷಾಂತರ ಜನರು ಸಾವಿಗೀಡಾದರು. ಸೌಜನ್ಯಕ್ಕಾದರೂ ಅವರಿಗೆ ಪ್ರಧಾನಿ ಮೋದಿ ಸಂತಾಪ ಸೂಚಿಸಲಿಲ್ಲ. ಕೊರೊನಾ ಹೆಸರಲ್ಲಿ ಕೆಲವು ಶ್ರೀಮಂತರ ಜೇಬು ತುಂಬಿಸಿದರು. ರೈತರು ಸಂಕಷ್ಟಕ್ಕೀಡಾಗಿರುವ ಸಮಯದಲ್ಲಿ 3 ಕೃಷಿ ಕಾಯಿದೆಗಳನ್ನು ಜಾರಿಗೆ ತರುವ ಮೂಲಕ ರೈತರ ಮೇಲೆ ಗದಾಪ್ರಹಾರ ಮಾಡಿದರು. ಯುವಕರಿಗೆ ಉದ್ಯೋಗ ನೀಡುವುದಾಗಿ ಹೇಳಿ ವಂಚಿಸಿದರು ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರ 13 ಸಾವಿರ ಶಿಕ್ಷಣ ಸಂಸ್ಥೆಗಳಿಂದ ಲಂಚ ಪಡೆದು, ಆಡಳಿತ ನಡೆಸುತ್ತಿದೆ. ಇದೊಂದು ಜನರನ್ನು ಸುಲಿಗೆ ಮಾಡುತ್ತಿರುವ ಲೂಟಿ ಸರ್ಕಾರ. ಈ ಸರ್ಕಾರದ ಬಗ್ಗೆ ನೀವು ಎಚ್ಚರಿಕೆಯಿಂದ ಇರಬೇಕಾಗಿದೆ. ರಾಜ್ಯ ಮತ್ತು ದೇಶದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರವನ್ನು ಜನತೆಗೆ ತಿಳಿಸಲು ನಾನು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಪಾದಯಾತ್ರೆ ಮಾಡುತ್ತಿದ್ದೇನೆ ಎಂದರು.

ನಾನು ಪಾದಯಾತ್ರೆ ಮಾಡುತ್ತಿರುವ ಎಲ್ಲಾ ಕಡೆಯೂ ಅಪಾರ ಜನಸ್ತೋಮದ ಬೆಂಬಲ ದೊರೆಯುತ್ತಿದೆ. ಇಲ್ಲಿ ಸೇರುತ್ತಿರುವ ಜನರನ್ನು ಕಂಡು ಸಂತೋಷವಾಗಿದೆ. ನೀವು ನೀಡುತ್ತಿರುವ ಪ್ರೋತ್ಸಾಹದಿಂದ ನಾನು ದಿನಕ್ಕೆ 25 ರಿಂದ 30 ಕಿ.ಮೀ. ನಡೆಯುತ್ತಿದ್ದೇನೆ. ನಿಮ್ಮೆಲ್ಲರ ಆಶೀರ್ವಾದ ನಮ್ಮ ಮೇಲಿರಲಿ ಎಂದು ಮನವಿ ಮಾಡಿದರು.

ಸಭೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಸಭೆ ವಿಪಕ್ಷ ನಾಯಕ ಸಿದ್ದರಾಮಯ್ಯ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಮಾಜಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಆರ್.ಧ್ರುವನಾರಾಯಣ, ಸಲೀಂ ಅಹಮದ್, ಈಶ್ವರ್ ಖಂಡ್ರೆ, ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ.ವಿಜಯಕುಮಾರ್ ಉಪಸ್ಥಿತರಿದ್ದರು.

ದೇಶದಲ್ಲಿ ಈಗ ಭಯಭೀತ ವಾತಾವರಣವಿದೆ: ಸಿದ್ದರಾಮಯ್ಯ ಆತಂಕ

ಕಳಲೆ (ನಂಜನಗೂಡು ತಾ.), ಅ.1–ದೇಶದಲ್ಲಿ ಸಂವಿಧಾನಾತ್ಮಕವಾಗಿ ಸಿಕ್ಕಿರುವ ವಾಕ್ ಸ್ವಾತಂತ್ರವನ್ನು ಕಿತ್ತುಕೊಳ್ಳಲಾಗಿದೆ. ಸಂವಿಧಾನದ ಪೀಠಿಕೆಯಲ್ಲಿ ಮಾನವ ಹಕ್ಕುಗಳು ಇರಬೇಕು ಎಂಬ ಉಲ್ಲೇಖವಿದ್ದರೂ, ಇಂದು ಸರ್ಕಾರದ ನೀತಿ–ನಿರ್ಧಾರಗಳನ್ನು ಪ್ರಶ್ನೆ ಮಾಡುವವರ ವಿರುದ್ಧ ಮೊಕದ್ದಮೆ ದಾಖಲಿಸಿ ಜೈಲಿಗೆ ಹಾಕುವುದು, ಅವರ ಮೇಲೆ ಇಡಿ, ಸಿಬಿಐ ಅನ್ನು ಛೂ ಬಿಡುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಇದರಿಂದಾಗಿ ಎಲ್ಲರಲ್ಲೂ ಆತಂಕದ ವಾತಾವರಣ ನಿರ್ಮಾಣವಾಗಿದೆ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಆರೋಪಿಸಿದರು.

ಭಾರತ ಐಕ್ಯತಾ ಯಾತ್ರೆ ವಿಶ್ರಾಂತಿ ಪಡೆದ ಕಳಲೆ ಗೇಟ್‌ನಲ್ಲಿ ಜಂಟಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ರಾಹುಲ್ ಗಾಂಧಿ ಭಾರತ ಐಕ್ಯತಾ ಯಾತ್ರೆ ಹಮ್ಮಿಕೊಂಡಿರುವುದು ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು ಎಂಬ ಉದ್ದೇಶಕ್ಕಲ್ಲ. ಜನರಲ್ಲಿ ನಿರ್ಮಾಣವಾಗಿರುವ ಭಯ ಹಾಗೂ ಆತಂಕದ ವಾತಾವರಣವನ್ನು ಹೋಗಲಾಡಿಸಿ ಜನರಿಗೆ ಆತ್ಮಸ್ಥೈರ್ಯ ತುಂಬಬೇಕು ಎಂಬ ಉದ್ದೇಶದಿಂದ ಯಾತ್ರೆ ಹಮ್ಮಿಕೊಂಡಿದ್ದಾರೆ. ಈ ಯಾತ್ರೆಯಲ್ಲಿ ಸಂಘ–ಸಂಸ್ಥೆಗಳು, ಚಿಂತಕರು, ವಿಚಾರವಂತರು, ಬರಹಗಾರರು ಸೇರಿದಂತೆ ಎಲ್ಲಾ ವರ್ಗದ ಜನರು ಭಾಗವಹಿಸುತ್ತಿದ್ದಾರೆ. ನಮ್ಮ ಪಾದಯಾತ್ರೆ ಕಂಡು ಬಿಜೆಪಿಯವರಿಗೆ ಹತಾಶೆ ಕಾಡುತ್ತಿದೆ. ಇದೇ ಕಾರಣಕ್ಕೆ ಅವರು ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ ಎಂದರು.

36 ಜನರ ಸರ್ಕಾರವೇ ಕೊಲೆ ಮಾಡಿದೆ: ನಿನ್ನೆ ರಾಹುಲ್ ಗಾಂಧಿ ಅವರು ಆದಿವಾಸಿಗಳು ಹಾಗೂ ಚಾಮರಾಜನಗರದಲ್ಲಿ ಆಕ್ಸಿಜನ್ ದುರಂತದಿಂದ ಸಾವಿಗೀಡಾದ 36 ಮಂದಿಯ ಕುಟುಂಬದವರ ಜೊತೆ ಮಾತುಕತೆ ನಡೆಸಿದ್ದಾರೆ. 36 ಜನರನ್ನು ಸರ್ಕಾರವೇ ಕೊಲೆ ಮಾಡಿದೆ. ಅವರಿಗೆ ಸಕಾಲದಲ್ಲಿ ಆಕ್ಸಿಜನ್ ಪೂರೈಸಿದ್ದರೆ ಅವರೆಲ್ಲರೂ ಬದುಕುಳಿಯುತ್ತಿದ್ದರು. ಆರೋಗ್ಯ ಸಚಿವ ಸುಧಾಕರ್ ಹಾಗೂ ಆಗ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಸುರೇಶ್ ಕುಮಾರ್ ದುರಂತದಲ್ಲಿ ಸತ್ತವರು ಮೂರೇ ಮಂದಿ ಎಂದು ಸುಳ್ಳು ಹೇಳಿದ್ದರು. ಆದರೆ ಸತ್ತವರ ಸಂಬಂಧಿಕರಿಗೆ ತಮ್ಮ ಕುಟುಂಬದವರ ಸಾವಿಗೆ ನಿಜವಾದ ಕಾರಣ ಏನೆಂಬುದು ಗೊತ್ತಿದೆ. ಸತ್ತವರಲ್ಲಿ ಬಹುತೇಕರು ಕುಟುಂಬಕ್ಕೆ ಆದಾಯ ಮೂಲವಾಗಿದ್ದರು. ಒಬ್ಬ ಮೃತನ ಕುಟುಂಬದಲ್ಲಿ ಇಬ್ಬರು ಚಿಕ್ಕ ಮಕ್ಕಳಿದ್ದಾರೆ. ಆತನ ಪತ್ನಿ ಮಕ್ಕಳನ್ನು ಶಾಲೆಗೆ ಕಳುಹಿಸಬೇಕು. ಕೂಲಿ ಮಾಡಿ ಜೀವನ ನಿರ್ವಹಣೆ ಮಾಡಬೇಕು. ಇದು ಸಾಧ್ಯವೇ? ಇಂತಹ ಪರಿಸ್ಥಿತಿಗೆ ರಾಜ್ಯ ಸರ್ಕಾರ ಹೊಣೆಯಲ್ಲವೇ? ಎಂದು ಪ್ರಶ್ನಿಸಿದರು. ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಮಾತನಾಡಿದರೆ, ನಿಮ್ಮ ಕಾಲದಲ್ಲೂ ಭ್ರಷ್ಟಾಚಾರ ನಡೆಯಲಿಲ್ಲವೇ? ಎಂದು ಬಿಜೆಪಿಯವರು ಪ್ರಶ್ನಿಸುತ್ತಾರೆ. ಅದಕ್ಕೆ ನಾನು ಹೇಳಿದ್ದೆ, 2006ರಿಂದ ಈವರೆಗಿನ ಎಲ್ಲಾ ಪ್ರಕರಣಗಳ ಬಗ್ಗೆ ನ್ಯಾಯಾಂಗ ತನಿಖೆ ನಡೆಸಿ ಎಂದು ಹೇಳಿದ್ದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಧಾಟಿಯಲ್ಲೇ ಹೇಳುವುದಾದರೆ ನ್ಯಾಯಾಂಗ ತನಿಖೆ ನಡೆಸಲು ಅವರಿಗೆ ತಾಕತ್ತೂ ಇಲ್ಲ, ಧಮ್ಮೂ ಇಲ್ಲ ಎಂದರು.

ಎಐಸಿಸಿ ವಕ್ತಾರ ಪವನ್ ಖೇರಾ ಮಾತನಾಡಿ, ಸರ್ಕಾರದ ವಿರುದ್ಧ ಯಾರೇ ಧ್ವನಿ ಎತ್ತಿದರೂ, ಅದನ್ನು ಹತ್ತಿಕ್ಕುವ ನೀತಿಯನ್ನು ಸರ್ಕಾರ ಹೊಂದಿದೆ. ಈ ಮೂಲಕ ಅಭಿವೃದ್ಧಿ ಸ್ವಾತಂತ್ರ್ಯವನ್ನು ಕಸಿಯುತ್ತಿದೆ. ರಾಹುಲ್ ಗಾಂಧಿಯವರು ಭಾರತ ಐಕ್ಯತಾ ಯಾತ್ರೆ ನಡೆಸಿದರೆ, ಅದನ್ನು ಸಹಿಸದೇ ದೇಶ ವಿಭಜನೆಗೆ ಕಾಂಗ್ರೆಸ್ ಕಾರಣ ಎಂದು ಬಿಜೆಪಿಯವರು ಜಾಹೀರಾತು ನೀಡಿದ್ದಾರೆ. ಆದರೆ 1937ರಲ್ಲಿ ಅಹಮದಾಬಾದ್‌ನಲ್ಲಿ ನಡೆದ ಹಿಂದೂ ಮಹಾಸಭಾ ಅಧಿವೇಶನದಲ್ಲಿ ಸಾವರ್ಕರ್, ಈ ದೇಶದಲ್ಲಿ ಹಿಂದೂ–ಮುಸ್ಲಿಮರು ಒಟ್ಟಾಗಿ ಬಾಳಲು ಸಾಧ್ಯವಿಲ್ಲ ಎಂದರು. ಅದನ್ನೇ 1941ರಲ್ಲಿ ಮುಸ್ಲಿಂ ಲೀಗ್‌ನ ಲಾಹೋರ್ ಅಧಿವೇಶನದಲ್ಲಿ ಜಿನ್ನಾ ಪ್ರತಿಪಾದಿಸಿದ್ದರು. ಹಾಗಾದರೆ ದೇಶ ವಿಭಜನೆ ನೀತಿ ಯಾರದ್ದು ಎಂದು ಪ್ರಶ್ನಿಸಿದರು.

ರಾಹುಲ್ ಗಾಂಧಿಯವರ ಅಜ್ಜಿ ಇಂದಿರಾ ಗಾಂಧಿಯವರನ್ನು ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ದುರ್ಗೆ ಎಂದು ಬಣ್ಣಿಸಿದ್ದರು. ಆದರೆ ಈಗ ಬಿಜೆಪಿಯವರು ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. ಅವರಿಗೆ ಇತಿಹಾಸದ ಬಗ್ಗೆ ತಿಳಿದಿಲ್ಲ ಎಂದರು.



ಐಕ್ಯತಾ ಯಾತ್ರೆ ಜನರ ಕಾರ್ಯಕ್ರಮ

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ಭಾರತ ಐಕ್ಯತಾ ಯಾತ್ರೆ ಕಾಂಗ್ರೆಸ್ ಕಾರ್ಯಕ್ರಮವಲ್ಲ, ಅದು ಎಲ್ಲಾ ಜನರ ಕಾರ್ಯಕ್ರಮ. ಈ ಯಾತ್ರೆ ಸಂದರ್ಭದಲ್ಲಿ ದೂರವಾಗುತ್ತಿರುವ ಮನಸ್ಸುಗಳನ್ನು ಜೋಡಿಸುವ ಪ್ರಯತ್ನ ಮಾಡುತ್ತಿದ್ದೇವೆ ಎಂದರು. ಜನರು ಮುಕ್ತವಾಗಿ ಮಾತನಾಡಲು ಭಯಪಡುವಂತಹ ಸ್ಥಿತಿ ನಿರ್ಮಾಣವಾಗಿದೆ. ಜನರಲ್ಲಿ ಪರಸ್ಪರ ದ್ವೇಷ, ಅಸೂಯೆ ತಾಂಡವವಾಡುತ್ತಿದೆ. ಇದಕ್ಕೆಲ್ಲಾ ಕೇಂದ್ರ ಹಾಗೂ ರಾಜ್ಯ ಸರ್ಕಾರವೇ ಕಾರಣ. ನಮ್ಮ ಯಶಸ್ಸು ಸಹಿಸಲಾಗದೇ ಸುಳ್ಳು ಪ್ರಕರಣಗಳನ್ನು ದಾಖಲಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಇದಕ್ಕೆಲ್ಲಾ ನಾವು ಹೆದರುವುದಿಲ್ಲ, ಬಗ್ಗಲ್ಲ, ಜಗ್ಗಲ್ಲ. ಜನರಿಗೆ ನಮ್ಮ ವಿಚಾರವನ್ನು ತಿಳಿಸಿ ಅವರ ನೋವಿನ ಜೊತೆ ನಾವಿರುತ್ತೇವೆ. ಬಿಜೆಪಿಯವರು ಏನೇ ಅಡ್ಡಿಪಡಿಸಿದರೂ, ಕಾಂಗ್ರೆಸ್ ಈ ದೇಶದ ಪರವಾಗಿರುತ್ತದೆ. ಜನರ ಧ್ವನಿಯಾಗಿ ಕೆಲಸ ಮಾಡುತ್ತದೆ ಎಂದರು.

ಬಿಜೆಪಿಯವರಿಗೆ ಈ ಯಾತ್ರೆ ಯಶಸ್ಸನ್ನು ಸಹಿಸಲು ಆಗುತ್ತಿಲ್ಲ. ಪೇಸಿಎಂ ಎಂಬ ಟಿ–ಶರ್ಟ್ ನಮ್ಮ ಹುಡುಗನನ್ನು ಪೊಲೀಸರು ಹಿಡಿದು ಬಡಿದಿದ್ದಾರೆ. ನನ್ನ ಹಾಗೂ ಸಿದ್ದರಾಮಯ್ಯನವರ ಬಗ್ಗೆಯೂ ಬಿಜೆಪಿಯವರು ಟಿ–ಶರ್ಟ್ ಹಾಕಿದ್ದರು. ಅವರನ್ನು ಯಾಕೆ ಪೊಲೀಸರು ಬಂಧಿಸಲಿಲ್ಲ. ಯಾಕೆ ಹೊಡೆಯಲಿಲ್ಲಾ? ಅವರಿಗೊಂದು ಕಾನೂನು, ನಮಗೊಂದು ಕಾನೂನಾ? ಎಂದು ಪ್ರಶ್ನಿಸಿದರಲ್ಲದೆ, ನಮ್ಮ ಯಶಸ್ಸಿನ ಗಮನವನ್ನು ಬೇರೆಡೆ ಸೆಳೆಯಲು ಈ ರೀತಿ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1 ತೋತಾಪುರಿ–1 (ಕ): ರಾ.10.30ಕ್ಕೆ.
ಸ್ಕ್ರೀನ್ 2 ವಿಕ್ರಂ ವೇದಾ (ಹಿಂ): ಬೆ.10.30ಕ್ಕೆ, ರಾ.7.10ಕ್ಕೆ, ರಾ.10.05ಕ್ಕೆ, ನಾನೇ ವರುವೆನ್ (ತ): ಮ.1.30ಕ್ಕೆ, ಗುರುಶಿಷ್ಯರು (ಕ): ಸಂ.4ಕ್ಕೆ.
ಸ್ಕ್ರೀನ್ 3 ಗುರುಶಿಷ್ಯರು (ಕ): ಬೆ.10.05ಕ್ಕೆ, ಪೊನ್ನಿಯನ್ ಸೆಲ್ವನ್–1(ತ): ಮ.1.10ಕ್ಕೆ, ರಾ.10ಕ್ಕೆ, ಲಕ್ಕಿಮ್ಯಾನ್ (ಕ): ಸಂ.4.20ಕ್ಕೆ, ತೋತಾಪುರಿ–1(ಕ): ರಾ.7.20ಕ್ಕೆ.
ಸ್ಕ್ರೀನ್ 4 ಕಾಂತಾರ (ಕ): ಬೆ.10.10ಕ್ಕೆ, ಮ.1.05ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ಪೊನ್ನಿಯನ್ ಸೆಲ್ವನ್–1(ತ): ಮ.3.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1 ಪೊನ್ನಿಯನ್ ಸೆಲ್ವನ್–1(ತ): ಬೆ.9.55ಕ್ಕೆ, ತೋತಾಪುರಿ –1(ಕ): ಮ.1.15ಕ್ಕೆ, ರಾ.7.10ಕ್ಕೆ, ಕಾಂತಾರ (ಕ): ಸಂ.4.05ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2 ಪೊನ್ನಿಯನ್ ಸೆಲ್ವನ್–1(ತ): ರಾ.10.20ಕ್ಕೆ.
ಸ್ಕ್ರೀನ್ 3 ವಿಕ್ರಮ್ ವೇದಾ (ಹಿಂ): ರಾ.10.30ಕ್ಕೆ.
ಸ್ಕ್ರೀನ್ 4 ಗುರು ಶಿಷ್ಯರು (ಕ): ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1 ಸ್ವಚ್ಛ ಕರ್ನಾಟಕ (ಕ): ಬೆ.11ಕ್ಕೆ, ಮಾನ್ಸೂನ್ ರಾಗ (ಕ): ಮ.1.30ಕ್ಕೆ, ಸಂ.4.30ಕ್ಕೆ, ಕೊಟ್ಟು (ಮ): ರಾ.7.45ಕ್ಕೆ.
ಸ್ಕ್ರೀನ್ 2 ಗುರುಶಿಷ್ಯರು (ಕ): ಬೆ.10.30ಕ್ಕೆ, ಮ.1.35ಕ್ಕೆ, ರಾ.7.45ಕ್ಕೆ, ಲಕ್ಕಿಮ್ಯಾನ್ (ಕ): ಸಂ.4.45ಕ್ಕೆ.
ಸ್ಕ್ರೀನ್ 3 ಬ್ರಹ್ಮಾಸ್ತ್ರ (3ಡಿ)(ಹಿಂ): ಮ.1.15ಕ್ಕೆ, ರಾ.7.45ಕ್ಕೆ, ಬ್ರಹ್ಮಾಸ್ತ್ರ (3ಡಿ)(ಕ): ಸಂ.4.30ಕ್ಕೆ.
ಸ್ಕ್ರೀನ್ 4 ಲಕ್ಕಿಮ್ಯಾನ್ (ಕ): ಬೆ.10.30ಕ್ಕೆ, ಮ.1.35ಕ್ಕೆ, ರಾ.7.45ಕ್ಕೆ, ಗುರುಶಿಷ್ಯರು (ಕ): ಸಂ.4.35ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.8.35ಕ್ಕೆ, ಮ.12.30ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ, ತೋತಾಪುರಿ 1(ಕ): ಬೆ.10.30ಕ್ಕೆ, ಸಂ.4.25ಕ್ಕೆ, ರಾ.7.20ಕ್ಕೆ, ರಾ.10.15ಕ್ಕೆ, ಗುರು ಶಿಷ್ಯರು (ಕ): ಬೆ.10.15ಕ್ಕೆ, ಬ್ರಹ್ಮಾಸ್ತ್ರ (3ಡಿ)(ಹಿಂ): ಬೆ.11.30ಕ್ಕೆ, ಸಂ.6.30ಕ್ಕೆ, ರಾ.10ಕ್ಕೆ, ಪೊನ್ನಿಯನ್ ಸೆಲ್ವನ್–1(ತ): ಬೆ.8ಕ್ಕೆ, ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ನಾನೇ ವರುವೆನ್ (ತ): ಬೆ.10.50ಕ್ಕೆ, ಮ.1.30ಕ್ಕೆ, ರಾ.7.35ಕ್ಕೆ, ಅವತಾರ್ ರೀ ರಿಲೀಸ್ (ಇಂ): ಮ.3ಕ್ಕೆ, ಡೋಂಟ್ ವರಿ ಡಾರ್ಲಿಂಗ್ (ಇಂ): ಸಂ.4.10ಕ್ಕೆ, ವಿಕ್ರಮ್ ವೇದ (ಹಿಂ): ಬೆ.9ಕ್ಕೆ, ಬೆ.11.45ಕ್ಕೆ, ಮ.3.15ಕ್ಕೆ, ಸಂ.6.45ಕ್ಕೆ, ರಾ.10.15ಕ್ಕೆ, ಚುಪ್ (ಹಿಂ): ಮ.1.25ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ನಾನೇ ಒರುವೇನ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪಿಎಸ್–1 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮರ್ದಿನಿ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಟ್ರಿಗರ್ (ತ)	4 ಪ್ರದರ್ಶನಗಳು
ಸಂಗಂ	
ಮಾನ್ಸೂನ್ ರಾಗ (ಕ)	4 ಪ್ರದರ್ಶನಗಳು
ಲಿಡೋ	
ರಾಜಾ ರಾಣಿ ರೋರರ್ ರಾಕೆಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವಿಕ್ರಮ್‌ವೇದಾ (ಹಿಂ)	4 ಪ್ರದರ್ಶನಗಳು
ಪ್ರಭಾ	
ಗಾಳಿಪಟ–2 (ಕ)	4 ಪ್ರದರ್ಶನಗಳು

ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ



ತಿ.ನರಸೀಪುರ, ಅ.1– ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪುರಸಭೆ ನಾಮ ನಿರ್ದೇಶಿತ ಸದಸ್ಯರು ಪಟ್ಟಣದ ಪುರಸಭಾ ಕಚೇರಿ ಎದುರು ಶನಿವಾರ ಪ್ರತಿಭಟನೆ ನಡೆಸಿದರು.

ಪುರಸಭೆ ನಾಮ ನಿರ್ದೇಶಿತ ಸದಸ್ಯ ನಂಜುಂಡಸ್ವಾಮಿ ಮಾತನಾಡಿ, ಪಟ್ಟಣದಲ್ಲಿ 10ಕ್ಕೂ ಹೆಚ್ಚು ದೇವಾಲಯಗಳಿದ್ದು, ಕೆಲವು ದೇವಸ್ಥಾನಗಳಿಗೆ ನೀರಿನ ಸಂಪರ್ಕ ಒದಗಿಸಿರುವ ಪುರಸಭೆ ಕೆಲವೊಂದು ದೇವಸ್ಥಾನಗಳಿಗೆ ಸಂಪರ್ಕ ಒದಗಿಸಿಲ್ಲ. ನೀರಿನ ಸಂಪರ್ಕ ಕಲ್ಪಿಸುವಂತೆ ಹಲವು ಬಾರಿ ಅಧ್ಯಕ್ಷರು ಹಾಗೂ ಮುಖ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ, ಯಾವುದೇ ಪ್ರಯೋಜನವಾಗಿಲ್ಲ ಎಂದರು.

ಪೌರಕಾರ್ಮಿಕರ ಸಮುದಾಯ ಭವನ ನಿರ್ಮಾಣಕ್ಕೆ ಗುರ್ತಿಸಿರುವ ನಿವೇಶನಕ್ಕೆ ಇ–ಸ್ವತ್ತು ಮಾಡಿಕೊಡದೇ ಉದಾಸೀನ ತೋರುತ್ತಿದ್ದಾರೆ ಎಂದು ಆರೋಪಿಸಿದ ಅವರು, ಪಟ್ಟಣದ 23 ವಾರ್ಡ್‌ಗಳಲ್ಲಿ ವ್ಯಾಪಾರ ಮಾಡುವ ಫುಟ್‌ಪಾತ್ ವ್ಯಾಪಾರಿಗಳಿಗೆ ನಂಬರ್ ಕೊಡುವಂತೆ ಅವರು ಒತ್ತಾಯಿಸಿದರು.

ಮತ್ತೊಬ್ಬ ಸದಸ್ಯ ಕೆ.ಗಣೇಶ್ ಮಾತನಾಡಿ, ಪಟ್ಟಣದಲ್ಲಿ 24x7 ಕಾಮಗಾರಿ ನಡೆಸುತ್ತಿರುವ ಗುತ್ತಿಗೆದಾರರ ನಿರ್ಲಕ್ಷ್ಯದಿಂದ ಸಣ್ಣ ಹೋಟೆಲ್ ಉದ್ದಿಮೆದಾರರಿಗೆ ನೀರಿನ ಸಂಪರ್ಕ ದೊರಕುತ್ತಿಲ್ಲ. ನೀರಿನ ಸಂಪರ್ಕ ನೀಡಲು ತಾರತಮ್ಯ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಪಟ್ಟಣದ ಕಾರ್ಪೊರೇಷನ್ ಬ್ಯಾಂಕ್ ರಸ್ತೆ ಕಾಮಗಾರಿಗೆ ಟೆಂಡರ್ ಆಗಿ ಭೂಮಿ ಪೂಜೆ ಮಾಡಿದ್ದರೂ, ಗುತ್ತಿಗೆದಾರ ಕೆಲಸ ಆರಂಭಿಸಿಲ್ಲ. ಇದರಿಂದ ಸಾರ್ವಜನಿಕರ ಓಡಾಟಕ್ಕೆ ತೀವ್ರ ತೊಂದರೆ ಎದುರಾಗಿದೆ. ಆದಷ್ಟು ಬೇಗ ಕಾಮಗಾರಿ ಆರಂಭಿಸಬೇಕು. ತಾರತಮ್ಯ ಮಾಡದೇ ನೀರಿನ ಸಂಪರ್ಕ ನೀಡಬೇಕೆಂದು ಅವರು ಒತ್ತಾಯಿಸಿದರು.

ಪ್ರತಿಭಟನಾ ಸ್ಥಳಕ್ಕಾಗಮಿಸಿದ ಪುರಸಭಾ ಮುಖ್ಯಾಧಿಕಾರಿ ಬಸವರಾಜು, ನಾವು ಯಾರಿಗೂ ನೀರಿನ ಸಂಪರ್ಕ ಕಡಿತಗೊಳಿಸಿಲ್ಲ ನಿರಾಕರಿಸಿಲ್ಲ. ಮನೆ ಸರ್ವೇ ಮಾಡಿದ ಸಂದರ್ಭ 7 ಸಾವಿರ ಮನೆ ಇದ್ದಿದ್ದರಿಂದ ಅಷ್ಟು ಮೀಟರ್ ಮಾತ್ರ ತರಿಸಲಾಗಿತ್ತು. ನಂತರ 1500 ಮನೆ ಹೆಚ್ಚಿದ್ದರಿಂದ ತೊಂದರೆಯಾಗಿದೆ. ಮತ್ತೆ ಮೀಟರ್‌ಗಳಿಗೆ ಬೇಡಿಕೆ ಸಲ್ಲಿಸಿದ್ದು, ಅವು ಬಂದ ನಂತರ ಎಲ್ಲರಿಗೂ ಸಂಪರ್ಕ ಕಲ್ಪಿಸಲಾಗುತ್ತದೆ ಎಂದು ಮನವರಿಕೆ ಮಾಡಿಕೊಟ್ಟ ಹಿನ್ನೆಲೆಯಲ್ಲಿ ಪ್ರತಿಭಟನೆ ಹಿಂಪಡೆಯಲಾಯಿತು.

ಪ್ರತಿಭಟನೆಯಲ್ಲಿ ಪುರಸಭಾ ಸದಸ್ಯ ಚಿಕ್ಕ ಮಾದೇವು, ತಾಲೂಕು ಕುರುಬರ ಸಂಘದ ನಿರ್ದೇಶಕ ಅಶ್ವಿನ್, ಸೋಮಶೇಖರ್, ಕುಮಾರ್, ನಂಜೇಗೌಡ, ವಿನೋದ್, ಮಂಜು, ಲ್ಯಾಂಡ್ರಿ ಸುರೇಶ್ ಇದ್ದರು.

ಪುಟ್ಟಮ್ಮ ನಿಧನ




ಹೆಚ್.ಡಿ.ಕೋಟೆ, ಅ.1– ತಾಲೂಕಿನ ಜೆಡಿಎಸ್ ಮುಖಂಡ, ಹೊಸಮಾಳ ಗ್ರಾಮದ ದಿ.ಬಸವೇಗೌಡರ ಪತ್ನಿ ಪುಟ್ಟಮ್ಮ (67) ಶುಕ್ರವಾರ ನಿಧನರಾದರು. ಮೃತರು ತಾಲೂಕು ಒಕ್ಕಲಿಗರ ಸಂಘದ ಮಾಜಿ ಅಧ್ಯಕ್ಷ ಪ್ರಕಾಶ್, ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ಹೆಚ್.ಬಿ.ಶಿವರಾಜ್ ಸೇರಿದಂತೆ ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ಮೃತರ ತೋಟದಲ್ಲಿ ಶನಿವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.





ಕರ್ನಾಟಕ ಒಂದು ರಾಜ್ಯ. ಹಲವು ಜಗತ್ತುಗಳು.

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ
www.kstdc.co



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ದಸರಾ ವಿಶೇಷ ಪ್ಯಾಕೇಜ್



ಕಾರವ್ಯಾನ್ ಟೂರಿಸಂ'ಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಸಚಿವರಿಂದ ಚಾಲನೆ

ಪ್ಯಾಕೇಜ್ 1

ಸ್ಥಳಗಳು:
ಮೈಸೂರು - 1 ದಿನದ ಪ್ರವಾಸ

ಮಾರ್ಗ :
ಮೈಸೂರು - ಕೆ.ಆರ್.ಎಸ್.
ಶ್ರೀರಂಗಪಟ್ಟಣ - ಮೈಸೂರು

ಒಬ್ಬರಿಗೆ :
ಒಟ್ಟು ದರ 4-ಸೀಟುಗಳ ಕಾರು ರೂ. 2,274/-
ಒಟ್ಟು ದರ 6-ಸೀಟುಗಳ ಕಾರು ರೂ. 2,485/-
ಒಟ್ಟು ದರ ಬಸ್ ರೂ. 2,180/-

ಪ್ಯಾಕೇಜ್ 2

ಸ್ಥಳಗಳು:
ಮೈಸೂರು 2 ದಿನಗಳ ಹೆರಿಟೇಜ್ ಸರ್ಕ್ಯೂಟ್

ಮಾರ್ಗ :
ಬೆಂಗಳೂರು - ಮೈಸೂರು
ಕೆ.ಆರ್.ಎಸ್. - ಮೈಸೂರು
ಶ್ರೀರಂಗಪಟ್ಟಣ - ಬೆಂಗಳೂರು

ಒಬ್ಬರಿಗೆ :
ಒಟ್ಟು ದರ 4-ಸೀಟುಗಳ ಕಾರು ರೂ. 7,830/-
ಒಟ್ಟು ದರ 6-ಸೀಟುಗಳ ಕಾರು ರೂ. 7,161/-
ಒಟ್ಟು ದರ ಬಸ್ ರೂ. 7,550/-

ಪ್ಯಾಕೇಜ್ 3

ಸ್ಥಳಗಳು:
ಮೈಸೂರು ಸರ್ಕ್ಯೂಟ್ 2 ದಿನಗಳ
ಮತ್ತು ಎಕೊ ಟೂರಿಸಂ ಸರ್ಕ್ಯೂಟ್

ಮಾರ್ಗ :
ಬೆಂಗಳೂರು - ಮೈಸೂರು
ಕೆ.ಆರ್.ಎಸ್. - ಮೈಸೂರು
ಶ್ರೀರಂಗಪಟ್ಟಣ - ಬೆಂಗಳೂರು

ಒಬ್ಬರಿಗೆ :
ಒಟ್ಟು ದರ 4-ಸೀಟುಗಳ ಕಾರು ರೂ. 8,480/-
ಒಟ್ಟು ದರ 6-ಸೀಟುಗಳ ಕಾರು ರೂ. 7,811/-
ಒಟ್ಟು ದರ ಬಸ್ ರೂ. 8,200/-

ಪ್ಯಾಕೇಜ್ 4

ಸ್ಥಳಗಳು:
ಮೈಸೂರು ಸರ್ಕ್ಯೂಟ್ 3 ದಿನಗಳ
ಹೆರಿಟೇಜ್ ಸರ್ಕ್ಯೂಟ್
ಮತ್ತು ಎಕೊ ಟೂರಿಸಂ ಸರ್ಕ್ಯೂಟ್

ಮಾರ್ಗ :
ಬೆಂಗಳೂರು - ಮೈಸೂರು -
ಕೆ.ಆರ್.ಎಸ್. - ಮೈಸೂರು -
ತಲಕಾವೇರಿ - ದುಬಾರೆ - ಬೆಂಗಳೂರು

ಒಬ್ಬರಿಗೆ :
ಒಟ್ಟು ದರ 4-ಸೀಟುಗಳ ಕಾರು ರೂ. 12,784/-
ಒಟ್ಟು ದರ 6-ಸೀಟುಗಳ ಕಾರು ರೂ. 11,955/-
ಒಟ್ಟು ದರ ಬಸ್ ರೂ. 12,650/-

ಪ್ಯಾಕೇಜ್ 5

ಸ್ಥಳಗಳು:
ಮೈಸೂರು ಸರ್ಕ್ಯೂಟ್ 3 ದಿನಗಳ
ಹೆರಿಟೇಜ್ ಸರ್ಕ್ಯೂಟ್
ಎಕೊ ಮತ್ತು ಸ್ಪಿರಿಚ್ಯುಯಲ್ ಸರ್ಕ್ಯೂಟ್

ಮಾರ್ಗ :
ಬೆಂಗಳೂರು - ಮೈಸೂರು - ಕೆ.ಆರ್.ಎಸ್.
ಮೇಲುಕೋಟೆ - ಶ್ರವಣಬೆಳಗೊಳ
ಬೇಲೂರು - ಹಳೇಬೀಡು - ಬೆಂಗಳೂರು

ಒಬ್ಬರಿಗೆ :
ಒಟ್ಟು ದರ 4-ಸೀಟುಗಳ ಕಾರು ರೂ. 12,284/-
ಒಟ್ಟು ದರ 6-ಸೀಟುಗಳ ಕಾರು ರೂ. 11,455/-
ಒಟ್ಟು ದರ ಬಸ್ ರೂ. 13,150/-

ಪ್ಯಾಕೇಜ್ 6

ಸ್ಥಳಗಳು:
ಮೈಸೂರು ಸರ್ಕ್ಯೂಟ್ 5 ದಿನಗಳ
ಹೆರಿಟೇಜ್, ಕಾಫಿ, ಮತ್ತು
ಎಕೊ ಟೂರಿಸಂ ಸರ್ಕ್ಯೂಟ್

ಮಾರ್ಗ :
ಬೆಂಗಳೂರು - ಮೈಸೂರು - ಕೆ.ಆರ್.ಎಸ್
ತಲಕಾವೇರಿ - ದುಬಾರೆ - ಯಗಚಿ
ಮುಳ್ಳಯ್ಯನಗಿರಿ - ಭದ್ರಾ - ಬೆಂಗಳೂರು

ಒಬ್ಬರಿಗೆ :
ಒಟ್ಟು ದರ 4-ಸೀಟುಗಳ ಕಾರು ರೂ. 22,050/-
ಒಟ್ಟು ದರ 6-ಸೀಟುಗಳ ಕಾರು ರೂ. 20,676/-
ಒಟ್ಟು ದರ ಬಸ್ ರೂ. 19,200/-

SI No.	TOUR CODE	TOUR DETAILS	TOUR DURATION	DEP & APR	FREQUENCY	RATE
01.	MYS	MYSURU SIGHT SEEING JAGMOHAN PALACE (MONDAY HOLIDAY) ZOO (TUESDAY HOLIDAY) CHAMUNDI HILL (TEMPLE) MYSURU MAIN PALACE, ST.PHILOMENAS CHURCH DAIRYA DAULAT FORT (SRIRANGAPATNA) RANGANATHA SWAMY TEMPLE, BRINDAVAN GARDEN	1 DAY	8.30 AM 8.30 PM	EVERYDAY	Rs. 440/- (A/C & NON A/C BUS)
02.	BHS	BELLUR, HALEBEEDU, SHRAVANABELAGOLA	1 DAY	7.30 AM 9.30 PM	SEASONAL	Rs.1089/- (A/C BUS)
03.	CRG	COORG TOUR GOLDEN TEMPLE, NISARGA DHAMA, ABBI FALLS RAJA SEAT, OMKARESHWARA TEMPLE, DUBARE	1 DAY	7.00 AM 9.00 PM	EVERYDAY	Rs.979/- (A/C BUS)
04.	OOTY	OOTY LAKE, BOTANICAL GARDEN, PYAKARA DAM	1 DAY	7.00 AM 9.00 PM	SEASONAL	Rs. 935/- (A/C & NON A/C BUS)
05.	STM	SOMANATHPURA, SHIVANASAMUDRA (GAGANACHUKKI BHARACHUKKI FALLS) TALAKADU MUDUKUTORE	1 DAY	7.00 AM 9.00 PM	SEASONAL	Rs.550/- (A/C BUS)
06.	SRP	KARIGHATTA, NIMISHAMBA TEMPLE, GUMBAZ BIRD SANCTUARY	1 DAY	8.00 AM 6.30 PM	SEASONAL	Rs.605/- (A/C BUS)
07.	MKAG	VENUGOPALA TEMPLE, MELUKOTE ADICHUNCHANAGIRI	1 DAY	8.00 AM 8.30 PM	SEASONAL	Rs. 660/- (A/C BUS)
08.	MTPT	LORD VENKATESWARA TEMPLE, PADMAVATHI TEMPLE	2 DAYS	DAY 01 3.00 PM DAY 02 11.30 PM	WEEKLY 3 DAYS	Rs. 2585/- (A/C BUS)
09.	MTKT	LORD VENKATESHWARA TEMPLE, GOVINDRAJA SWAMY TEMPLE, PADMAWATHI TEMPLE, SRINIVASA MANGAPURA, KAPILA THIRTHA & SRI KALASTHI TEMPLE	3 DAYS	DAY 01 3.00 PM DAY 03 11.00 PM	MONTHLY 2 DAYS	Rs. 3960/- (A/C BUS)
10.	OCSS	NANJANGUDU TEMPLE, OOTY BOTANICAL GARDEN, OOTY LAKE, DOODABETTA & KARNATAKA HORTICULTURE PARK	2 DAYS	DAY 01 700 AM DAY 02 9.00 PM	SEASONAL	Rs. 2750/- (A/C & NON A/C BUS)
11.	COORG	COORG TOUR GOLDEN TEMPLE, NISARGADHAMA, ABBI FALLS RAJA SEAT, OMKARESHWARA TEMPLE, DUBARE, BHAGAMANDALA, THALA CAUVERY	2 DAYS	DAY 01 7.00 AM DAY 02 9.00 PM	SEASONAL	Rs. 2860/- (A/C & NON A/C BUS)
12.	MJT	JOG FALLS, BRITISH BUNGALOW SIGANDOOR COWDESHWARI	3 DAYS	DAY 01 9.00 PM DAY 02 6.00 AM	SEASONAL	Rs. 2145/- (A/C BUS)
13.	SCT	HORANADU, KALASHA, SRINGERI, KOLLURU, MURUDESHWARA, ANEGUDDA GANESHA, UUDUPI, MALPE, KATEEL, MANGALURU, DARMASTHALA, KUKKE SUBRAMANYA	5 DAYS	DAY 01 9.00 PM DAY 05 6.00 AM	SEASONAL	Rs. 4895/- (A/C BUS)
14.	NHB	NANJANGUDU, GOPAL SWAMY HILL AND B.R. HILLS	1 DAY	7.00 AM 8.00 PM	EVERY DAY	Rs. 728/- (A/C BUS)
15.	NBM	NANJANGUDU, B.R. HILLS, AND M.M HILLS	1 DAY	6.30 AM 9.30 PM	EVERY DAY	Rs. 795/- (A/C BUS)
16.	NOCK	NANJANGUDU, OOTY, KODAIKANAL 6.30 AM ARR, 4TH DAY 6.00 AM	4 DAYS	6.30 AM 6.00 AM	SEASONAL	Rs. 5075/- (A/C & NON A/C BUS)
17.	MMTH	MANTRALAYA, HAMPI 5.30 PM, ARR 4TH DAY 6.00 AM	4 DAYS	5.30 AM 6.00 AM	SEASONAL	Rs. 4382/- (A/C BUS)
18.	MJGG	JOG, GOKARNA, GOA 8.00 PM ARR 5TH DAY 6.00 AM	5 DAYS	8.00 PM 6.00 AM	SEASONAL	Rs. 6358/- (A/C BUS)

AMBARI : MYSURU CITY ROUND TRIP-DURATION ONE HOUR Rs.250/-



For more details contact

K.S.T.D.C TRANSPORT WING MYSURU
Yatrinivas Building, Hotel Mayura Hoysala Complex, 2, JLB Road, Mysuru - 570005
Mobile :8970656400. Ph : 0821 2423652 / 4265498, email : mtw@karnatakaholidays.net

CORPORATE OFFICE :
KARNATAKA STATE TOURISM DEVELOPMENT CO.LTD
Ground Floor, B.M.T.C Yeshwanthpur, T.T.M.C Bus Stand,
Yeswanthpur Circle, Bengaluru - 560022 Ph : 080 - 43344334 website : www.kstdc.co